(SRI B. M. SEENAPPA.)

(*d*) whether these purchases were made through the Stores Purchase Committee after calling for tenders or whether the Factory or Filature itself called for quotations and made purchases direct ?

A.—Sri H. SIDDAVEERAPPA (Minister for Home and Industries).—

(*a*) Yes,

(*b*) *Year*		*Quantity*	*Rate* Rs. a. p.	*Firm*
1952-53	...	41 marcs	64 11 4 per marc	Messrs. G. S. Siddaverappa B. S. Shankarappa, 4, Chowdeswari Temple Street, Bangalore-2.
1953-54	...	28 marcs	64 6 8 per marc	
1954-55	...	50 marcs	63 0 0 per marc	

(*c*) Nil.

(*d*) Purchases during 1952-53 and 1953-54 are direct but during 1954-55 the purchases are as L. I. contract No. 14359 of the Stores Purchase Committee.

High School admissions in K. G. F.

Q.—802. Sri K. S. VASAN (Kolar Gold Fields).

Will the Government be pleased to state:—

(*a*) whether they are aware that a large number of students seeking admissions to the High School classes this year in Kolar Gold Fields are stranded for want of accommodation in the existing High School ;

(*b*) whether they are aware that there is an immediate necessity of at least one more High School in the area;

(*c*) the action that they propose to take to provide seats to all those who seek admission ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Yes.

(*c*) A new Boys' High School under private management has been opened at the place recently. This will meet with the demand for additional seats.

Silk Industry (Establishment in Devanahalli Taluk).

Q.—889. Sri H. T. PUTTAPPA (Hoskote-Anekal—Scheduled Castes).—

Will the Government be pleased to state :—

(*a*) whether they are examining the question of establishing any industry in Devanahalli Taluk ;

(*b*) whether there are no facilities to establish silk industry in Devanahalli Taluk ?

A.—Sri H. SIDDAVEERAPPA (Minister for Home and Industries).—

(*a*) No.

(*b*) Yes. The sericultural industry is already in existence in the Taluk.

Postponed Questions and Answers

Dr. R. NAGAN GOWDA (Minister for Agriculture).—Sir, I lay on the Table of the House replies to one question of October Session 1952, 4 questions of Budget Session, 1954 and 230 questions of October Session, 1954 which have been treated as postponed questions.††

Discussion on Fact Finding Committee Report (*Contd.*)

Sri V. M. MASCARENHAS (St. John's Hill).—Mr. Speaker, Sir, a student of Indian History is familiar with the rise and growth of the British

†† These are printed separately as a supplement to this volume.

Empire in India. He is also familiar how the Britishers under the name and style of the East India Company established business interests in this country, and thereafter conquered, then annexed vast tracts of land and then entered into treaty alliances with the Native Princes and thus formed a new Empire known as India. Sir, considering the circumstances under which the Britishers established the Indian Empire, it is obvious to anybody that no rational basis or any reasonable or sound principle was involved in making provinces and in forming States. It was, therefore, necessary when India became free that the Centre should view this question with the importance which it deserved and we therefore see the constitution of the States' Reorganisation Commission appointed last year.

Sir, one would ask therefore what are the terms of reference to this Reorganisation Commission—to re-organise the various States in India from the standpoint of administrative convenience, geographical contiguity and territorial re-adjustments on the basis of language. In the South, Sir, any casual observer can easily see that four important States could immediately be formed on this basis. Fortunately, people speaking the same language have grouped together in the south. On the West coast, Cochin and Travancore State with a strip of land, after Coimbatore running to a length of 200 miles to the north and on the western coast form the Kerala State. In the centre there is what is known as the Madras State which has a Tamil-speaking population, practically beginning from Coimbatore and ending at Madras. The Andhra State has already been formed and though few more territories are to be added to it, the formation of Andhra State is a *fait accompli* and there is nothing to trouble us here. The only territory now left over is the Karnatak State. It is unfortunate that the formation of the Karnataka State has given room for the largest amount of head-ache and thought.

Sir, considerable discussion has already taken place in this House on this question. There is one school of thought which has held fast to the Seshadri Committee Report which has given us various facts and figures, showing that Mysore would stand to lose if we should add any further territories to the existing territory. Well, their contention is that Mysore, for the last half a century, thanks to the benign rulers and the series of successive able Dewans, has progressed economically and industrially in every sense of the word. It is therefore not to our interest to take up neighbouring territories which are admittedly considered backward, particularly in the field of industries and economics and also as far as nation—building developments are concerned. They also contend that Mysore is a fairly big unit; and as it is, Government can be carried on without any detriment and without any need or help from the neighbouring areas. Sir, that this argument is very sound, it cannot be denied. But when we consider such an important subject like the States' Reorganisation, I would like to submit that facts and figures alone should not count, but history and tradition must also play a little part. What do I mean by history and tradition ? It is nothing but a recollection of facts which have happened in this country, in Mysore State, in the neighbouring States and in the whole of Indian continent for the last 30 or 40 years on this subject of linguistic provinces or States' Reorganisation. I will not enter into very many details, but will only refer to a few important points. In the year 1916 the first meeting of the Karnatak was convened. Then in 1920 we have the first Karnatak Political Conference, then in 1927 you have the A.I.C.C. meeting in Bombay where the question of readjustment of provinces on linguistic basis was considered. In 1938 the Congress Working Committee resolved that as soon as independence came, the question of reorganisation of States must be given top priority. We have also the Birur conference, the Davanagere conference, the J.V.P. Report and a number of factors whereby we have historical evidence to show that this question of the formation of

(SRI V. M. MASCARENHAS.)

Karnataka has had a background. And it is in the light of that background, today we must consider how this question should be tackled.

Sir, many Hon'ble Members have stated that we stand to lose by becoming bigger. This is a matter which deserves our serious consideration. It is said by them that the neighbouring provinces (the blue book has given figures) have fewer cows and bullocks and buffaloes as compared to Mysore State, that they have fewer schools and fewer hospitals. I will not go into such details. Let us only remember that the tail ends of the province of Bombay on the one side, the tail ends of the Madras Province on the other side, have had, for reasons too well known to us, a step-motherly treatment from the provinces to which they belonged. The fault must be remedied. Let us not forget the history of Mysore itself. It has been said by many members that, 200 years ago, Mysore was not as it is today. Its borders reached Mangalore on the one side and Belagaum on the other side and up to Srirangam. So, even after the battle of Mysore in 1799, when for a short period the British Government in Mysore took over the Mysore State for purposes of administration, we had what is known as the Commission of Mysore which included then, Mysore, Coorg, and the whole of South Canara. So, Sir, the Mysore of today is definitely not the Mysore of the past. Mysore, we all know, had extended to areas beyond the ten districts. Therefore when neighbouring provinces have expressed a desire that we should all become one, it looks very strange why we should be hostile to this move. Many of us were in the Mysore Constituent Assembly in the year 1949. One of the objects of the Constituent Assembly was that we should, as far as possible, allow neighbouring areas to join Mysore. Well, consequently we have committed ourselves in a way to take up neighbouring areas as parts of Mysore. Instead of we taking up that question, the Centre has decided to organise the States and for this purpose it has appointed a Commission for making bigger States as the case may be, or smaller. In our case, it is bigger. This question should be discussed more dispassionately and without perhaps parochial outlook. With these general remarks I would like to point out that the new Karnataka State as envisaged, would have a population of about 2 crores. Two crores, I submit, is a very reasonable figure for the population of a State. On that basis, India would have about 18-19 States and I think that is also the limit that the Centre has placed.

Now coming to that statement that we would be having deficits by joining a neighbouring State, I would like to point out that the figures given by the Seshadri Committee Report are incomplete; firstly because they have not included Coorg, they have not included South Canara; of course, I do not blame them; perhaps for want of time. So the picture in that Report, in my opinion, is incomplete and to discuss at great length on a partial report or an incomplete report would, in my opinion, not be perfectly sound. Now let us see what the new areas that we have added on are. Coorg, on the western side, South Canara and North Canara and on the northern side Dharwar, Hubli, Bijapur and parts of Belgaum. (*A Member*: What about Hyderabad?) Hyderabad question has not been settled. Unless it gets disintegrated, the question of our getting any territories of Hyderabad does not arise. We will discuss it ten years hence if all of us are alive. I may point out to this House how for the last 25-30 years Mysore State had been so anxious about bringing a Port like Bhatkal within the territory of Mysore. The elder members of this House are aware of the herculean efforts made by Sir M. Visvesvaraya to run the line from Shimoga to Bhatkal and also to take over Bhaktal as a harbour and to develop it as a Port. Here with the bigger Karnataka State, you have not only Bhatkal, but you have other Ports—one in the North Karwar and one in the South, Mangalore, and with a new Hassan-Mangalore railway line which is proposed and which will be accomplished within

the next 5 or 6 years, we can understand the good effect it would have on the trade of Mysore with this belt of 200 miles coast line running from Mangalore right up to Karwar. Moreover, I know definitely that the forest wealth of the Western Ghats in the immediate neighbourhood beyond Sagar on the one side up to Karwar is very rich, far richer than whatever forests we have had and most of them are lying unexplored. I will not go into the mineral wealth, because mineral wealth is in the bowels of the earth ; nobody has tried to find it out ; we will leave it aside, but the whole of the territory that is now in dispute is like a virgin soil unexplored, full of potentialities and it only wants the talent of Mysore, the brains of Mysore, its Engineers, its administrators and its galaxy of lawyers and other eminent men who have had 50 years of sound administrative experience to take up this territory and to see how best it could be developed. I personally believe that we may have in the earlier days a few handicaps, a few troubles, but considering that India is now to be considered as one organic whole, it is not possible to believe that one State could be richer than another and one State could be allowed to remain unhelped, to remain unsatisfied, to remain absolutely uncared for. It would not be possible. The Central Government would not be worth its name if it allowed any particular area or particular State to remain undeveloped. When that situation is there, the argument that we would suffer, that they would be handicaps to us, that they would be burdens to us for the rest of our lives, I do not think, holds water. It is this aspect I want Hon'ble Members to consider. We have agreed that provinces have to be re-formed and they can only be re-formed, other considerations apart, on the problem of language and when here we are having a neighbouring province of neighbouring area with a population of hardly a crore willing to join this State, I for one do not understand why there should be such a serious objection.

Another theory was put forward by a few members: 'We will remain where we are. Let them remain where they are. They can form a State of their own and let them be happy. Let us also be happy.' I for one do not understand that. The formation of a new State under these auspices would not only be very expensive but would not be feasible. We know what Andhra has gone through in forming a new State. Would we like our brother on the side of Mysore border to undergo hardships and difficulties and yet call them brothers ? I for one would not. Though it may mean a little sacrifice, it may mean a little hardship to us, I would strongly request the Hon'ble Members of this House to consider this question in a more brotherly way than in mere rupees, annas and pies. *(Sri J. Mohamed Imam.—Hear, hear)*

Mr. SPEAKER.—I want to bring this to the notice of the Hon'ble Members. According to the new programme, time is very much limited and we have to make the best use of the time available to us. Therefore, I want to request Members to follow the example of Sri Mascarenhas. He has taken only 15 minutes.

Sri J. MOHAMED IMAM (Jagalur).—You presume it is definite.

Mr. SPEAKER.—It is definite. We have changed the programme four times and therefore there should be no change.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—ನೋಡೋಣ ಎಂದು ಹೇಳಬೇಡಿ. ಅಂತೂ ಬುಧವಾರ ಸಹ ಈ ಅಧಿವೇಶನವಿದೆ ಅನ್ನುವುದು ನಿಜವೋ ? ಈ ವಿಚಾರ ಬಹಳ ಪ್ರಾಮುಖ್ಯವಾದದ್ದು. . . .

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ವಿಚಾರದಲ್ಲಿ ಮಾತನಾಡುವುದಕ್ಕೆ ಎಲ್ಲರಿಗೂ ಕಾಲಾವಕಾಶ ಸಿಕ್ಕಬೇಕು. ಈ ವಿಚಾರದಲ್ಲಿ ಎಲ್ಲರ ಅಭಿಪ್ರಾಯವೇನಿದೆ ಅನ್ನುವುನ್ನು ತಿಳಿಸಲು ಅವಕಾಶವಿಲ್ಲದಂತೆ ಇದನ್ನು ಕಟ್ ಮಾಡುವುದು ಸರಿಯಾದದ್ದಲ್ಲ.

ಅಧ್ಯಕ್ಷರು.—ಎಲ್ಲರಿಗೂ ಅವಕಾಶ ಸಿಕ್ಕಲಿ ಅಂತಲೇ ಕಾಲ ನಿಗದಿ ಮಾಡಿರುವುದು.

*ಶ್ರೀ ಡಿ. ಆರ್. ಕರಿಗೌಡ (ಹಾಸನ).—ಸ್ವಾಮಿ, ಈ ಪ್ರಾಂತ್ಯಗಳ ಗಡಿನಿರ್ಧಾರ ಸಮಿತಿಯವರು ಈಗ ಇಂಡಿಯಾ ದೇಶದಲ್ಲಿರತಕ್ಕಂಥ ಪ್ರಾಂತ್ಯಗಳನ್ನೆಲ್ಲಾ ಪುನರ್ರಚನೆ ಮಾಡಲು ಪರಿಶೀಲನೆ ಮಾಡುತ್ತಿರುವ

* Indicates that the speeches and remarks have not been revised by the Member concerned.

(ಶ್ರೀ ಡಿ. ಆರ್. ಕರಿಗೌಡ.)

ಸಂದರ್ಭದಲ್ಲಿ ಬಂದಿರತಕ್ಕಂಥ ಮುಖ್ಯವಾದಂಥ ವಿಷಯಗಳನ್ನು ನಾನೀಗ ಈ ವಿಧಾನ ಸಭೆಯಲ್ಲಿ ಚರ್ಚೆ ಮಾಡುತ್ತಿರುವುದರಿಂದ ಈ ವಿಷಯಗಳೆಲ್ಲಾ ಬಹಳ ಪ್ರಾಮುಖ್ಯವಾದುವುಗಳೆಂದು ನಾವು ಪರಿಗಣಿಸಿ ಮಾತನಾಡಬೇಕಾಗಿದೆ. ಈಗಾಗಲೇ ಮಾತನಾಡಿರತಕ್ಕಂಥ ಕೆಲವು ಮಾನ್ಯ ಸದಸ್ಯರುಗಳು ಈ ಮೈಸೂರುರಾಜ್ಯವನ್ನು ವಿಶಾಲಗೊಳಿಸಬೇಕು; ಹೊರಗಡೆಯಿರತಕ್ಕಂಥ ಕನ್ನಡ ಮಾತನಾಡುವ ಜನರೆಲ್ಲರೂ ನಮ್ಮ ದೇಶಕ್ಕೆ ಬಂದು ಸೇರಿಕೊಳ್ಳಬೇಕೆಂದು ಹೇಳಿರುತ್ತಾರ. ನಮ್ಮ ಮೈಸೂರಿನ ಕೀರ್ತಿ, ಮೈಸೂರಿನ ಸಂಪತ್ತು, ಸಮಾಜದ ಉನ್ನತಿ, ಹಾಗೂ ನಮ್ಮ ಸಾಮಾಜಿಕ, ಅರ್ಥಿಕ, ಸಂಸ್ಕೃತಿಗಳು ಈ ದಿವಸ ಒಂದು ಉನ್ನತಮಟ್ಟದಲ್ಲಿರುವುದಕ್ಕೆ ಇದರ ಹಿನ್ನೆಲೆಯೇನು ಅನ್ನುವುದನ್ನು ನಾವು ಪೂರ್ಣವಾಗಿ ವಿಮರ್ಶೆ ಮಾಡಿ ನೋಡಿದರೆ—ನಮ್ಮ ರಾಜ್ಯ ಬಹಳ ಚಿಕ್ಕದಾಗಿದ್ದುದರಿಂದಲೇ ನಾವು ಬಹಳ ಕಾಲದಿಂದಲೂ ಇದರ ಅಭಿವೃದ್ಧಿಗೆ ಎಷ್ಟು ಹಣಬೇಕೋ ಅಷ್ಟನ್ನೂ ಒದಗಿಸಿಕೊಂಡು ಬಂದುದರಿಂದ ಈ ದಿವಸ ನಮ್ಮ ಸಂಸ್ಥಾನ ಒಂದು ಪ್ರೋಗ್ರೆಸೀವ್ ಸ್ಟೇಟಾಗಿ ಕೆಲಸ ಮಾಡಿಕೊಂಡು ಒಂದು ಉನ್ನತವಾದಂಥ ಸ್ಥಿತಿಯಲ್ಲಿದೆಯೆಂದು ಹೇಳಬೇಕಾಗಿದೆ. ಈಗ ಸಭೆಯ ಮುಂದೆ ಇರತಕ್ಕ ಶೇಷಾದ್ರಿ ಸಮಿತಿಯ ವರದಿ ಪ್ರಕಾರ ರಾಜ್ಯಗಳು ದೊಡ್ಡದಾದಷ್ಟೂ ತೊಂದರೆಗಳು ಜಾಸ್ತಿಯಾಗುತ್ತವೆ ಎನ್ನುವುದು ನಮಗೆಲ್ಲರಿಗೂ ಗೊತ್ತಾಗುತ್ತದೆ. ನಾವೆಲ್ಲರೂ ಬಹಳ ಕಾಲದಿಂದಲೂ ಈ ದೇಶಕ್ಕಾಗಿ ಬಹಳ ತ್ಯಾಗ ಮಾಡಿದ್ದೇವೆ. ಆದುದರಿಂದ ನಮ್ಮ ದೇಶ ಈ ದಿವಸ ಈ ಸ್ಥಿತಿಯಲ್ಲಿದೆ. ಸ್ವಾಮಿ, ಈಗಾಗಲೇ ಮಾತನಾಡಿರತಕ್ಕಂಥ ಅನೇಕ ಮಹನೀಯರು ಭಟ್ಕಲ್ ಬಂದರ್ ನಮ್ಮ ಮೈಸೂರಿಗೆ ಸೇರಿಸಲ್ಪಟ್ಟರೆ ಆಗ ನಮ್ಮ ಮೈಸೂರು ಬಹಳ ಅಭಿವೃದ್ಧಿಗೆ ಬರುತ್ತದೆ ಎಂದು ಹೇಳಿದ್ದಾರೆ, ಈ ದಿವಸ ಇಂಡಿಯಾ ದೇಶದಲ್ಲಿ ಎಷ್ಟೋ ಭಾಗಗಳು ಬಂದರುಗಳಿಲ್ಲದೆ ಅಭಿವೃದ್ಧಿಗೆ ಬಂದಿಲ್ಲ. ಆದಾಗ್ಯೂ ಹಾಗೆ ಆ ಪ್ರದೇಶಗಳು ಹಿಂದುಳಿದ ಪ್ರದೇಶಗಳಾಗಿದ್ದರೂ ಅಲ್ಲಿ ಈ ದಿವಸ ವ್ಯಾಪಾರಾಭಿವೃದ್ಧಿಯಾಗಿಲ್ಲವೇ ಅನ್ನುವುದನ್ನು ನಾವೇಕೆ ನೋಡಬಾರದು? ಆ ಭಟ್ಕಲ್ ಬಂದರ್ ಈ ದಿವಸ ನಮಗೆ ಸೇರಿಸಿದರೂ ಕೂಡ ನಮ್ಮ ಬೆಂಗಳೂರಿಗೆ ಅದು ಮದ್ರಾಸ್ ಬಂದರಿಗಿಂತಲೂ ದೂರವಾಗಿರುತ್ತದೆ. ಮದ್ರಾಸ್ ಬಂದರ್ ನಮಗೀಗ 200 ಮೈಲಿಗಳ ದೂರದಲ್ಲಿದೆ. ಆ 200 ಮೈಲಿಗಳ ಪ್ರದೇಶಕ್ಕೂ ಮೇಲ್ಪಟಂಥಾ ವಿಸ್ತೀರ್ಣ ಈಗ ಮೈಸೂರಿಗೆ ಸೇರಿಸಿದರೆ ಆ ಪ್ರದೇಶದ ಅಭಿವೃದ್ಧಿಗಾಗಿ ನಾವೀಗ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿ ಬರುತ್ತದೆ. ಆದರೆ ನಮ್ಮ ಬಡ್ಜೆಟ್ ಈಗಾಗಲೇ ಖೋತಾ ಬಡ್ಜೆಟ್ಟಾಗಿದೆ. ಈಗ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿ ಜನರಿಗೆ ಅತ್ಯವಶ್ಯಕವಾದಂಥ ಪಾಠಶಾಲೆಗಳು, ರಸ್ತೆ ಸೌಕರ್ಯಗಳು, ಆರೋಗ್ಯ ಅನುಕೂಲತೆಗಳು ಇತ್ಯಾದಿ ಸೌಕರ್ಯಗಳನ್ನು ಒದಗಿಸಲು ತುಂಬಾ ಅನಾನುಕೂಲವಾಗಿದೆ. ಈಗ ಪ್ರತಿ ವರ್ಷವೂ 5-10 ಸ್ಕೂಲುಗಳನ್ನು ಕೊಡುವುದಕ್ಕೂ ಸಾಧ್ಯವಾಗದೆ ಹೋಗಿದೆ. ಈ ದಿವಸ ಆ ಬಳ್ಳಾರಿ ಜಿಲ್ಲೆ ನಮಗೆ ಸೇರಿರುವುದರಿಂದ ಅವರು ಈ ವಿದ್ಯುಚ್ಛಕ್ತಿ ನೀರಾವರಿ ಅನುಕೂಲತೆಗಳು, ಆಸ್ಪತ್ರೆ, ಸ್ಕೂಲು, ರಸ್ತೆ ಇತ್ಯಾದಿಗಳನ್ನೇ ಕೇಳುತ್ತಿದ್ದಾರೆ. ಅವರಿಗೇನೇ ಈ ಅನುಕೂಲತೆಗಳನ್ನು ಕಲ್ಪಿಸಿಕೊಡಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಿರುವಾಗ ನಮ್ಮ ಮೈಸೂರು ದೇಶಕ್ಕೆ ಇನ್ನೂ 7-8 ಜಿಲ್ಲೆಗಳನ್ನು ಸೇರಿಸಿ ಬಿಟ್ಟರೆ ಆಗ ಅವುಗಳ ಗತಿಯೇನಾಗಬೇಕಾದೀತು ಎನ್ನುವುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಬಳ್ಳಾರಿ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿ ಬಂದುದರಿಂದ ನಮ್ಮ ದೇಶಕ್ಕೆ ಉಪಯೋಗಿಸಬೇಕಾಗಿದ್ದುದನ್ನೆಲ್ಲಾ ಅಲ್ಲಿಗೆ ಉಪಯೋಗಿಸಲಾಗುತ್ತಿದೆ. ಹೀಗಾಗಿ ನಾವೀಗ ಹಿಂದುಳಿಯುತ್ತಿದ್ದೇವೆ. ಆದರೆ ನಾವೆಲ್ಲರೂ ಒಂದಾಗಿ ಒಗ್ಗಟ್ಟಿನಿಂದ ನಡೆಯಬೇಕೆಂದು ಹೇಳುವುದೇನೋ ಬಹಳ ಒಳ್ಳೆಯ ಮಾತೇ. ಈ ಹಿಂದೆ 20—30 ಜನರು ಅಷ್ಟೇ ಏಕೆ, 50 ಜನರವರೆಗೂ ಅಣ್ಣ ತಮ್ಮಂದಿರು ಒಂದೇ ಸಂಸಾರದಲ್ಲಿ ವಾಸಮಾಡುತ್ತಿದ್ದರು. ಈ ದಿವಸ ಅಂಥ ಒಂದು ದೊಡ್ಡ ಸಂಸಾರದಲ್ಲಿ ಕೂಡ 10 ಜನರು ಸೇರಿ ಒಂದು ಕಡೆ ಇರುವುದಕ್ಕೆ ಆಗುತ್ತಿಲ್ಲ. ಈ ಹಿಂದೆ ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ಸ್ ಅಂಡ್ ವಿಲೇಜ್ ಪಂಚಾಯಿತಿಗಳ ಸಮಿತಿಯನ್ನು ನೇಮಕ ಮಾಡಿದ್ದರು. ಆಗ ಆ ಸಮಿತಿಯಲ್ಲಿ ಚರ್ಚೆಗಳಾಗುತ್ತಿದ್ದಾಗ ನಾಲ್ಕೈದು ಹಳ್ಳಿಗಳನ್ನು ಒಂದಾಗಿ ಸೇರಿಸಿ, ಅದನ್ನು ಒಂದು ಗ್ರೂಪ್ ಮಾಡಿ, ಆ ಸೆಂಟರುಗಳಿಗೆ ಒಬ್ಬೊಬ್ಬ ಸೆಕ್ರೆಟರಿಗಳನ್ನು ನೇಮಕ ಮಾಡಬೇಕೆಂದು ಹೇಳಿದ್ದಕ್ಕೆ ಶ್ರೀ ಎ. ಭೀಮಪ್ಪನಾಯಕರೂ ಹಾಗೆ ಒಂದು ಹಳ್ಳಿಯನ್ನು ಇನ್ನೊಂದು ಹಳ್ಳಿಗೆ ಸೇರಿಸಿ ಬಿಟ್ಟರೆ ತಲೆತಲೆಗಳ ಹೊಡೆದಾಟವಾಗುತ್ತದೆ, ಗ್ರಾಮಗಳಲ್ಲಿ ಪಾರ್ಟಿಯಾಗಿ ಖೂನಾಖೂನಿಗಳಾಗುತ್ತವೆ ಎಂದು ಹೇಳಿದ್ದರು. ಆದರೆ ಈ ದಿವಸ ಅವರೇನೇ ಯಾರ್ಯಾರು ಪ್ರೀತಿಯಿಂದ ಇಷ್ಟಪಟ್ಟು ಸೇರಬೇಕೆಂದು ಹೇಳುತ್ತಾರೋ ಅಂಥವರು ಸೇರಿಕೊಂಡರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೊರಗಡೆಯವರು ನಮ್ಮ ಜೊತೆಗೆ ಬಂದು ಸೇರಬೇಕೆಂಬುದು ಅವರ ಅನುಕೂಲಕ್ಕಾಗಿಯೇ ಎಂತಲೂ ಹೇಳುತ್ತಿದ್ದಾರೆ. ಆದರೆ ಹಾಗೆ ಅವರು ಕೇಳುವುದಕ್ಕಾದರೂ ಒಂದು ಸರಿಸಮಾನತೆ ಇರುವುದು ಬೇಡವೇ? ಅವರೂ ಸಹ ನಮ್ಮ ಹಾಗೆ ವಿದ್ಯೆ ಇತ್ಯಾದಿ ಇತರೇ ಎಲ್ಲಾ ಬಾಬುಗಳಲ್ಲಿಯೂ ಮುಂದುವರೆಯಲಿ, ಅನಂತರ ಒಂದಾಗುವ ವಿಚಾರ ನೋಡೋಣ. ಅಂದರೆ ಇಂಡಿಯಾ ಸರ್ಕಾರದವರು ಈ ದಿವಸ ಹಿಂದುಳಿದಿರುವಂಥ ಪ್ರದೇಶಗಳು ಯಾವ್ಯಾವಿರುತ್ತವೆಯೋ ಅಂಥವುಗಳ ಅಭಿವೃದ್ಧಿಗಾಗಿ ಸಹಾಯ ನೀಡುತ್ತಾರೆ; ಅವರಿಂದ ಬೇಕಾದಷ್ಟು ಧನ ಸಹಾಯ ಪಡೆಯಬಹುದು ಎಂದು ಬೇರೆ ಹೇಳುತ್ತಿದ್ದಾರೆ.

10 A.M.

ಒಂದು ಉದಾಹರಣೆ ಕೊಡುತ್ತೇನೆ. ಮಂಗಳೂರು ಜಿಲ್ಲೆ ಮದ್ರಾಸ್ ದೇಶಕ್ಕೆ ಸೇರಿದೆ. ಈ ಜಿಲ್ಲೆಗೆ ವಿದ್ಯಾಭ್ಯಾಸ ಮತ್ತು ರಸ್ತೆಗಳು ಹೆಚ್ಚಿಗೆ ಬೇಕಾಗಿದ್ದರೆ ಅಲ್ಲಿನ ಜನರು ಜಗಳಮಾಡಿ ನ್ಯಾಯಕ್ಕೋಸ್ಕರ ಹೊಡೆದಾಡಿದ್ದರೆ ಆಗ ಮದ್ರಾಸ್ ಸರಕಾರದವರು ಅಭಿವೃದ್ಧಿಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಹಾಗೆಯೇ ಹಿಂದುಳಿದ ಬೊಂಬಾಯಿ ಕರ್ನಾಟಕದಲ್ಲಿ Deputy Speakerರಂಥ ಮಹನೀಯರು ಇರುವಾಗ ಆ ಪ್ರದೇಶವನ್ನು ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಎಷ್ಟೋ ವರುಷಗಳಿಂದ ಸಾಧ್ಯವಿಲ್ಲದಿದ್ದರೆ ನಾವು ಹೇಗೆ ಮಾಡಬೇಕು? ಅವರು ಕೇಂದ್ರ ಸರ್ಕಾರದಿಂದ ಬೇಕಾದಷ್ಟು ಹಣವನ್ನು ಹೊಂದಿ ಉನ್ನತ ಸ್ಥಿತಿಗೆ ಬಂದಮೇಲೆ ಅವರನ್ನು ನಮ್ಮ ದೇಶಕ್ಕೆ ಸೇರಿಸೋಣ.

ಶ್ರೀ ವೀರಣ್ಣಗೌಡರು ಮುಂದೆ 10 ವರ್ಷಗಳಾದ ಮೇಲೆ ಈ ವಿಚಾರವನ್ನು ಯೋಚನೆ ಮಾಡೋಣವೆಂದು ಹೇಳಿದ್ದಾರೆ. ಈಗ ಕೇಂದ್ರ ಸರ್ಕಾರದಿಂದ ಬೇಕಾದಷ್ಟು ಸಹಾಯವಾಗಿದೆ. ದೇಶ ಹೆಚ್ಚು ವಿಸ್ತರಿಸಿ ರಾಜಧಾನಿಯಿಂದ ದೂರ ಇದ್ದಷ್ಟು ಆದರಿಂದ ಅನುಕೂಲವಿಲ್ಲ. ಬೆಂಗಳೂರಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟು 250 ಮೈಲ ದೂರದಲ್ಲಿದೆ. ಆದರೆ ರಸ್ತೆಗಳ ರಿಪೇರಿ ಆಗುತ್ತಲೇ ಇಲ್ಲ; ಅಲ್ಲಿ ಸ್ಕೂಲುಗಳೇ ಇಲ್ಲ. 250 ಮೈಲ ದೂರ ಇದ್ದಾಗ ರಾಜಧಾನಿಗೆ ಹೋಗಿ ಕೆಲಸ ಮಾಡಿಸಿಕೊಳ್ಳದೇ ಇದ್ದವರು 500 ಮೈಲಿ ದೂರ ಹೋಗಿ ಕೆಲಸವನ್ನು ಮಾಡಿಸಿಕೊಳ್ಳುತ್ತಾರೆಯೇ ಎಂದು ನನಗೆ ಅನುಮಾನವಾಗಿದೆ. ನಮ್ಮ ಸರ್ಕಾರ ಹೆಚ್ಚಿನ ಹೊರೆಯನ್ನು ಹೊತ್ತು ಎಲ್ಲಾ ನೋಡಿಕೊಳ್ಳುತ್ತೇವೆ ಎನ್ನುವುದಕ್ಕೆ ಬದಲಾಗಿ ಮೊದಲು ನಮ್ಮ ದೇಶವನ್ನು ಸರಿಮಾಡೋಣ. ಮಂಗಳೂರು, ಮಡಿಕೇರಿ, ಕೊಡಗುದೇಶ ಬಹಳ ಚಿಕ್ಕದಾಗಿರುವುದರಿಂದ ವಿದ್ಯಾಭ್ಯಾಸ ಎಷ್ಟು ಅಭಿವೃದ್ಧಿಗೆ ಬಂದಿದೆ, ಆಡಳಿತಕ್ರಮ ಹೇಗಿದೆ, ರಸ್ತೆಗಳು ಹೇಗಿವೆ, ಸ್ಕೂಲುಗಳು ಯಾವ ಮಟ್ಟದಲ್ಲಿವೆ ಎಂದು ನೋಡಿ. ಆದರೆ ಅವನ್ನು ನಮ್ಮ ಜೊತೆಗೆ ಸೇರಿಸಿದರೆ ಆಡಳಿತಕ್ಕೋಸ್ಕರ ಅನುಕೂಲವಾಗುತ್ತದೆ ಎಂದರೆ ಅದನ್ನು ಆಲೋಚನೆ ಮಾಡಬಹುದು. ಅಮೇರಿಕಾ ದೇಶವನ್ನು ಎಷ್ಟು ಭಾಗಗಳಾಗಿ ಮಾಡಿ administrative units ಮಾಡಿದ್ದಾರೆ ಎಂಬುದನ್ನು ನೋಡಿದರೆ ಮೈಸೂರು ದೇಶ ಈಗ ಎಷ್ಟು ಇದೆಯೋ ಅಷ್ಟೇ ಇರುವುದು ಸರಿ. ಬೇಕಾದರೆ ಮೈಸೂರು ದೇಶದ ಅಕ್ಕಪಕ್ಕದವರು, ಅಂದರೆ ಬಹಳ ಹತ್ತಿರದವರಾದ ಕೊಡಗು ಅಥವಾ ಮಂಗಳೂರನ್ನು ಸೇರಿಸಿಕೊಳ್ಳಿ. ಹೈದರಾಬಾದ್ ಪ್ರಾಂತ್ಯ ಒಡೆದುಹೋದ ದಿವಸ ಇತರ ಕನ್ನಡ ಪ್ರದೇಶಗಳನ್ನು ಸೇರಿಸುವ ಯೋಚನೆ ಮಾಡೋಣ.

ಶ್ರೀ ಬಿ. ಹುಚ್ಚೇಗೌಡ.—ಅಮೇರಿಕಾ ದೇಶ ಎಷ್ಟು ಭಾಗಗಳಾಗಿವೆ ?

ಶ್ರೀ ಡಿ. ಆರ್. ಕರಿಗೌಡ.—48 ಭಾಗಗಳಾಗಿವೆ. ನಮ್ಮ ದೇಶದಲ್ಲಿರುವ 31 ಕೋಟಿಗೆ 31 ಪ್ರಾಂತಗಳಾಗಲಿ, ಯಾರು ಬೇಡವೆಂದು ಹೇಳುತ್ತಾರೆ? ನಮ್ಮ ಯೋಗ್ಯತೆಯಂತೆ ಎಷ್ಟು ಹೊರೆಯನ್ನು ಹೊರಬಲ್ಲೆವೋ ಅಷ್ಟನ್ನೂ ಹೊರೋಣ. ನಮ್ಮ ದೇಶವನ್ನು ಚೆನ್ನಾಗಿ ಮುಂದಕ್ಕೆ ತರುವುದಕ್ಕೆ ಇನ್ನು 10 ವರ್ಷಗಳ ಕಾಲವಾದರೂ ಬೇಕು. ಆದ್ದರಿಂದ ಮೈಸೂರು ದೇಶ ಇದ್ದಹಾಗೆಯೇ ಇರಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Now the House will rise for lunch and meet at 10-30 A.M.

The House adjourned for Lunch at Two Minutes past Ten of the Clock and re-assembled at Thirty Minutes past Ten of the Clock.

[MR. SPEAKER in the Chair.]

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಈ ಸಮಸ್ಯೆಯಮೇಲೆ ಸುಮಾರು ಐದು ದಿನಗಳಿಗಿಂತ ಜಾಸ್ತಿಯಾಗಿ ಚರ್ಚೆಯಾಗಿದೆ. ಇವತ್ತಿನ ದಿವಸ ಕೆಲವು ಸದಸ್ಯರು ತೋರಿಸಿರತಕ್ಕ ಕೆಲವು ಸಂಶಯಗಳಿಗೆ ಪರಿಹಾರ ರೂಪವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಮೊಟ್ಟಮೊದಲನೆಯದಾಗಿ ಕರ್ಣಾಟಕ ಪ್ರಾಂತ ನಿರ್ಮಾಣದ ಸಮಸ್ಯೆ ಪ್ರತ್ಯೇಕವಾದುದಲ್ಲ. This is not an isolated problem. ಇವತ್ತಿನ ದಿವಸ ಸ್ವಾತಂತ್ರ್ಯ ಬಂದ ಮೇಲೆ ಭಾರತದ ನವ ನಿರ್ಮಾಣದಲ್ಲಿ ಪ್ರಾಂತಗಳ ಪುನರ್ವಿಂಗಡನಾ ಸಮಸ್ಯೆ ಸಂಬಂಧವಾಗಿ ಈ ಸಮಸ್ಯೆ ನಮ್ಮ ಕರ್ಣಾಟಕಕ್ಕೂ ನಮ್ಮ ಮೈಸೂರಿಗೂ ಸಂಬಂಧಿಸಿದೆ. ಆದ್ದರಿಂದ ನಾವು ಈ ಸಮಸ್ಯೆಯನ್ನು ಪರಿಶೀಲಿಸುವಾಗ ಒಂದು ಸಮಗ್ರವಾದ ದೃಷ್ಟಿಯಿಂದ ಪರಿಶೀಲಿಸಬೇಕು. We should take a comprehensive and perspective view of this problem. ನಾವು ಈ ಸಮಸ್ಯೆಯನ್ನು ಪರಿಶೀಲಿಸುವಾಗ ಇದರ ಹಿನ್ನೆಲೆ ಮತ್ತು ಮುಂದೆ ಆಗತಕ್ಕ ಪರಿಣಾಮ ಅವನ್ನೂ ಕೂಡ ನೋಡಬೇಕಾಗುತ್ತದೆ. ನಮ್ಮ ಇಂಡಿಯಾದ ರಾಜ್ಯಾಂಗ ರಚನೆಯಲ್ಲಿ ಹೀಗೆ ಹೇಳಿದ್ದಾರೆ.

> "We the people of India having solemnly resolved to constitute India into a sovereign democratic republic and to secure to all its citizens justice, social, economic and political, liberty of thought, expression, belief, faith and worship, equality of status and opportunity and to promote among them all fraternity, assuring the dignity of the individual and the unity of the nation. . . ."

ಇವತ್ತಿನ ದಿವಸ States' Reorganisation Commissionರವರು ತೆಗೆದುಕೊಂಡಿರತಕ್ಕಂಥ ಈ ದೊಡ್ಡ ಸಮಸ್ಯೆ ಏನೆಂದರೆ—

> "equality of status and of opportunity and to promote among them all fraternity, assuring the dignity of the individual and the unity of the nation."

ಎಲ್ಲರಿಗೂ ಸಮಾನವಾದಂಥ ಅವಕಾಶ ಮತ್ತು ಅಂತಸ್ತು, ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಐಕಮತ್ಯ ಇವನ್ನು ಸಾಧಿಸತಕ್ಕಂಥಾದ್ದೇ ಇವತ್ತು ಈ ಪ್ರಾಂತಗಳ ಪುನರ್ವಿಂಗಡನೆಯ ಕಮಿಷನರವರ ಮುಖ್ಯವಾದ ಉದ್ದೇಶ.

ಆಮೇಲೆ ಇದನ್ನು ಹೇಗೆ ಸಾಧಿಸಬೇಕು ಎನ್ನುವುದಕ್ಕೆ Constitution of India Part I, Article 3ರಲ್ಲಿ ಹೀಗೆ ಹೇಳಿದ್ದಾರೆ.

> "Parliament may by law—
>
> (a) from a new State by separation of territory from any State or by uniting two or more States or parts of States or by uniting any territorry to a part of any State;
>
> (b) increase the area of any State;

(ಶ್ರೀ ಪಿ. ಆರ್. ರಾಮಯ್ಯ.)

(*c*) diminish the area of any State ;

(*d*) alter the boundaries of any State ;

(*e*) alter the name of any State. . . .

Sri A. V. NARASIMHA REDDY (Bangalore-South).—It is a thing that is in existence. The whole thing is on record. There is no need to refer this here.

Mr. SPEAKER.—He can only refer to it.

Sri P. R. RAMAIYA.—I will only refer to it.

ನಮ್ಮ ಮಾನ್ಯ ಸ್ನೇಹಿತರು ಶ್ರೀ ನರಸಿಂಹ ರೆಡ್ಡಿಯವರು ಏತಕ್ಕೆ ನಾನು ಅದನ್ನು ಹೇಳುತ್ತಿದ್ದೇನೆ ಎಂಬುದನ್ನು ತೆರೆದ ಹೃದಯದಿಂದ ನೋಡಬೇಕು. ಮೈಸೂರು ದೊಡ್ಡದಾಗಿ ವಿಕಾಸ ಹೊಂದುವ ಆಲೋಚನೆಯನ್ನು ನಾವು ಮೈಸೂರಿನಲ್ಲಿ ವಿಚಾರಮಾಡುತ್ತಾ ಇದ್ದರೂಕೂಡ, ಈ ಸಮಸ್ಯೆಯನ್ನು ಇತರ ಶಾಸನ ಸಭೆಗಳೂ ಕೂಡ ಅಂದರೆ ಬೊಂಬಾಯಿ ಶಾಸನ ಸಭೆಯ ವರು, ಮದ್ರಾಸ್ ಶಾಸನ ಸಭೆಯವರು, ಹೈದರಾಬಾದ್ ಶಾಸನ ಸಭೆಯವರು, ಎಲ್ಲರೂ ಕೂಡ ಆಲೋಚನೆ ಮಾಡಲೇಬೇಕಾಗುತ್ತದೆ. ಒಂದುವೇಳೆ ಕರ್ಣಾಟಕ ಪ್ರಾಂತವಾಗಲು ಒಪ್ಪಿ ಒಂದು ಬಿಲ್ ತಯಾರಾದರೆ ಆಗ ಆಂಧ್ರ ಸ್ಟೇಟ್ ಏರ್ಪಾಟಾದ ಕಾಲದಲ್ಲಿ ಯಾವ ರೀತಿ ಪಾರ್ಲಿಮೆಂಟ್‌ನಲ್ಲಿ ಪರಿಶೀಲನೆ ಯಾಯಿತೋ, ಮದ್ರಾಸ್ ಮತ್ತು ಹೈದರಾಬಾದ್ ಅಸೆಂಬ್ಲಿಗಳಲ್ಲಿ ಯಾವ ರೀತಿ ಪರಿಶೀಲನೆಯಾಯಿತೋ, ಅದೇ ರೀತಿ ಈ ಸಮಸ್ಯೆಯನ್ನು ಆಖೈರಾಗಿ ತೀರ್ಮಾನ ಮಾಡಬೇಕಾದರೆ ಪುನಃ ಅದು ಈ ಸಭೆಗೆ ಬಂದೇ ಬರುತ್ತದೆ. ಆದ್ದರಿಂದ ಪ್ರಾಂತಗಳ ವಿಂಗಡನೆಗಳ ಒಂದು ನಕ್ಷೆಯನ್ನು ಚಿತ್ರಿಸಿ ಅದರಲ್ಲಿ ಮೈಸೂರು ಯಾವ ಸ್ವರೂಪವನ್ನು ತಾಳುತ್ತದೆ ಎಂಬುದು ಮುಂದೆ ನಿರ್ಧಾರವಾಗುವಾಗ, ಮೈಸೂರಿನವರು, ಬೊಂಬಾಯಿನವರು ಮತ್ತು ಇತರರು ವಿಮರ್ಶೆ ಮಾಡಬೇಕಾಗುತ್ತದೆ. ಇದರಲ್ಲಿ "ascertain the views of the Legislatures of the State" ಎಂದು ಹೇಳಿದ್ದಾರೆ. ಅಂದರೆ ಇತರರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಇದೆ. ಪ್ರಾಂತಗಳ ಪುನರ್ವಿಂಗಡನೆಯ ಆಖೈರು ಜವಾಬ್ದಾರಿ ಇಂಡಿಯಾ ಸರ್ಕಾರದವರದು. ಇಂಡಿಯಾ ಸರ್ಕಾರದವರು ಈ ರೀತಿಯಾಗಿ ಪ್ರಾಂತಗಳ ಪುನರ್ವಿಂಗಡನೆಯಾಗಬೇಕು ಎಂದು ಮಾಡಿ ಅದನ್ನು ನಮ್ಮ ಮುಂದೆ ಇಟ್ಟಾಗ ಅದು ಸರಿಯೇ ಅಥವಾ ಸರಿಯಲ್ಲವೇ ಎಂದು ನಾವು ಹೇಳಬಹುದು. ಆದರೆ ಈ ವಿಚಾರದಲ್ಲಿ ಆಖೈರು ತೀರ್ಮಾನ ಅವರಿಗೇ ಸೇರಿದ್ದು ಆಗಿದೆ. ಆದರೂ ಕೂಡ ಅವರು democratic ರೀತಿಯಾಗಿ ಅದನ್ನು ವಿಮರ್ಶೆ ಮಾಡತಕ್ಕವರಾಗಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು ನಾವು ಆಲೋಚನೆ ಮಾಡಬೇಕಾದರೆ ಅಖಿಲ ಭಾರತದ ದೃಷ್ಟಿಯಿಂದ ನೋಡಬೇಕು. ನಮ್ಮ ಮಾನ್ಯ ಸ್ನೇಹಿತರನೇಕರು ಮೊದಲನೆಯದಾಗಿ ಒಂದು ಸಂದೇಹವನ್ನು ತೋರ್ಪಡಿಸಿದರು. ನಾವು ಪ್ರಾರಂಭದೆಸೆಯಲ್ಲಿರುವಾಗ ಮೈಸೂರಿನಲ್ಲಿ ಕರ್ಣಾಟಕದ ಇತರ ಭಾಗಗಳನ್ನೂ ಅಂದರೆ ಬೊಂಬಾಯಿನಲ್ಲಿರುವ ಕರ್ಣಾಟಕ ಡಿಸ್ಟ್ರಿಕ್ಟುಗಳನ್ನು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಇತರ ಭಾಗಗಳನ್ನು ಸೇರಿಸಿಕೊಂಡರೆ ನಮ್ಮ ಹಣಕಾಸಿನ ಸ್ಥಿತಿ ಅಷ್ಟು ತೃಪ್ತಿಕರವಾಗಿರುವುದಿಲ್ಲ ; ಈಗಲೇ ನಾವು ನಮ್ಮ ಪ್ರಾಂತದಲ್ಲಿರತಕ್ಕ ಜನಗಳ ಆಶೋತ್ತರಗಳನ್ನು ಈಡೇರಿಸಲು ಸಮರ್ಥರಾಗಿಲ್ಲ, ಆದ್ದರಿಂದ ಹಾಗೆ ಸೇರಿಸಿಕೊಳ್ಳಲು ನಮ್ಮ ಹಣಕಾಸಿನ ಸಾಮರ್ಥ್ಯ ಸಾಲದು ಎನ್ನುವ ಶಂಕೆಯನ್ನು ನಮ್ಮ ಶ್ರೀ ನರಸಿಂಹರೆಡ್ಡಿಯವರು ತೋರ್ಪಡಿಸಿದರು. ನಾವು ಈ ಪ್ರಾಂತವನ್ನು ನಿರ್ಮಾಣ ಮಾಡಲು ಒಪ್ಪಿಕೊಂಡರೆ ನಮ್ಮ ತಲೆಮೇಲೆ ಹೆಚ್ಚಿಗೆ ಭಾರ ಬೀಳುತ್ತದೆ ಎನ್ನುವ ಸಂದೇಹ ಬರುವುದು ಸಹಜವಾಗಿದೆ. ಆದರೆ ಇದಕ್ಕೆ ಪರಿಹಾರ ರೂಪವಾಗಿ ನಾನು ಹೇಳಬೇಕಾಗುತ್ತದೆ. ಇವತ್ತಿನ ಹಣಕಾಸಿನ ಜವಾಬ್ದಾರಿ ನಮ್ಮ ಮೇಲೆ ಇದ್ದರೂಕೂಡ ಪಂಡಿತ್ ಜವಹರ್‌ಲಾಲ್‌ರವರು ಹೇಳಿರತಕ್ಕ ಒಂದು ಮಾತನ್ನು ನಾನು ಈಗ ಹೇಳುತ್ತೇನೆ.

The Prime Minister referring to the appointment of the States Re-organisation Commission in Parliament said :

> "In considering the re-organisation of the States there are, however, other important factors which are also to be borne in mind. The first essential consideration is the preservation and strengthening of the unity and the security of India. Financial, economic and administrative considerations are also equally important not only from the point of view of each State, but of the whole Nation."

ಆದ್ದರಿಂದ ಇದನ್ನು ಒಂದು ಸಂಸ್ಥಾನದ ದೃಷ್ಟಿಯಿಂದ ನೋಡದೆ ಅಖಿಲಭಾರತ ದೃಷ್ಟಿಯಿಂದ ನೋಡಬೇಕಾಗಿದೆ. ಇವತ್ತಿನ ದಿವಸ ಅಖಿಲಭಾರತದವರು ಪ್ರಾಂತಗಳನ್ನು ಈ ರೀತಿಯಾಗಿ ಪುನರ್ವಿಂಗಡನೆ ಮಾಡಿದರೆ, ಹೆಚ್ಚಿಗೆ ಸಂಪತ್ತು ಅಭಿವೃದ್ಧಿಯಾಗುತ್ತದೆ, ಹೆಚ್ಚಿಗೆ ಅನುಕೂಲಗಳು ಉಂಟಾಗುತ್ತವೆ ಎಂದು ಅವರಿಗೆ ತೋರಿದರೆ, ಅಖಿಲಭಾರತಕ್ಕೆ ಇದರಿಂದ ಲಾಭವಾಗುತ್ತದೆ ಎಂದು ತೋರಿದರೆ, ಆಗ Not only from the point of view of each State but of the whole Nation ದೃಷ್ಟಿಯಿಂದ, ಇದನ್ನು ಮಾಡಬಹುದು.

ಇದಲ್ಲದೆ, ನಾನು ಒಂದು ವಿಷಯವನ್ನು ನಮ್ಮ ಸ್ನೇಹಿತರಿಗೆ ವಿನಯಪೂರ್ವಕವಾಗಿ ಹೇಳುತ್ತೇನೆ. ಇವತ್ತಿನ ದಿವಸ ಸ್ವಾತಂತ್ರ್ಯ ಬಂದಮೇಲೆ ಅಂದರೆ, 1947ರಿಂದ 8 ವರ್ಷ ನಾವು ಮೈಸೂರಿನಲ್ಲಿ ರಾಜ್ಯಭಾರ ಮಾಡಿಕೊಂಡು ಬಂದಿದ್ದೇವೆ ; ಎಷ್ಟು ಬಾಬುಗಳಿಗೆ ನಾವು ಇಂಡಿಯಾ ಸರ್ಕಾರದವರಿಂದ ಹಣ ತೆಗೆದುಕೊಂಡಿಲ್ಲ ? ಲೋನ್, ಸಬ್ಸಿಡಿಗಳೆಂದು ಎಷ್ಟು ಕೇಳಿಲ್ಲ ? ಪ್ರತಿಯೊಂದು ಭಾಗಕ್ಕೂ ಅವರು ಭಾಗಿಯಾಗಬೇಕು. ಪ್ರತಿಯೊಂದು ಯೋಜನೆ ನಡೆಸುವುದಕ್ಕೂ ಅವರು ನಮಗೆ $\frac{1}{4}$ ಭಾಗಕೊಡಿ, $\frac{3}{4}$ ಭಾಗ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಹೀಗಿರು

ಹಾಗ ಈವತ್ತಿನದಿವಸ ಮೈಸೂರಿನವರು ಅಖಿಲ ಕರ್ನಾಟಕ ಮಾಡಿಕೊಂಡಾಕ್ಷಣ ಎಲ್ಲಾ ಹೊರೆಯೂ ನಮ್ಮ ಮೇಲೆಯೇ ಬೀಳುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇಂಡಿಯಾ ಸರ್ಕಾರದವರು ಇಡೀದೇಶದ ಅಭಿವೃದ್ಧಿಯ ಸಂಪೂರ್ಣ ಭಾರವನ್ನು ವಹಿಸಿಕೊಂಡಿದ್ದಾರೆ. ಇವೊತ್ತು ಒಂದು ಚಿಕ್ಕಹಳ್ಳಿಯಲ್ಲಿ ಕಷ್ಟಬಂದರೂ ಅದರ ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು ಬರುತ್ತವೆ. ಇಂದಿನ ನಮ್ಮ ರಾಜ್ಯಭಾರ ಯಾವರೀತಿಯಿದೆಯೆಂದರೆ ಪ್ರತಿಯೊಂದು ಕಡೆಯಲ್ಲೂ ಓಟು ಮಾಡುತ್ತೇವೆ. ಆದ್ದರಿಂದ ಇಂಡಿಯಾದೇಶದ ಯಾವ ಮೂಲೆಯಲ್ಲೇ ಆಗಲಿ ಏನೇ ತೊಂದರೆ ಸಂಭವಿಸಿದರೂ ಅದನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತರಬಹುದು. ಆದಕಾರಣ ಎಲ್ಲವೂ ನಮ್ಮ ತಲೆಯ ಮೇಲೆಯೇ ಬೀಳುತ್ತದೆಂದು ನಾವು ಹೆದರಬೇಕಾಗಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಮಗೆ ಕೇಂದ್ರ ಸರ್ಕಾರದವರು ಹಣದ grants ಕೊಡುತ್ತಿರುವುದು, ಅವರು ನಮ್ಮಲ್ಲಿದ್ದಂಥ ರೈಲ್ವೆಗಳು ಮತ್ತು ಅದಕ್ಕೆ ಸಂಬಂಧಪಟ್ಟಂಥ ಆದಾಯದ ಇಲಾಖೆಗಳನ್ನು ವಹಿಸಿಕೊಂಡಿರುವುದರಿಂದ ಒಂದು agreement ಪ್ರಕಾರ ಕೊಡುತ್ತಿದ್ದಾರೆಯೇ ಹೊರತು ಸುಮ್ಮನೆ ಗ್ರಾಂಟ್‌ಗಳನ್ನು ಕೊಡುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಶ್ರೀ ನರಸಿಂಹರೆಡ್ಡಿಯವರು ಇನ್ನೂ ಯುವಕರು. ಇನ್ನೂ ಪ್ರಪಂಚ ವ್ಯವಹಾರ, ಇತಿಹಾಸ ತಿಳಿದುಕೊಂಡಿದ್ದರೆ ಅವರಿಗೆ ಗೊತ್ತಾಗುತ್ತಿತ್ತು. ಇವತ್ತಿನ ದಿವಸ ಇಂಡಿಯಾ ದೇಶ ಒಂದು ಅಖಂಡ ರಾಷ್ಟ್ರ. ಮೈಸೂರಿನವರು ಮದ್ರಾಸಿನವರು, ಬೊಂಬಾಯಿನವರು, ಯಾರೇ ಆಗಲಿ ಎಲ್ಲರೂ ಭಾರತೀಯರು. ಆದ್ದರಿಂದ ನಾವು ಕೆಲವು ಕೆಲವು ಸಮಸ್ಯೆಗಳನ್ನು ಅಖಿಲಭಾರತ ದೃಷ್ಟಿಯಿಂದ ನೋಡುತ್ತಿದ್ದೇವೆ. ರೈಲ್ವೆಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಂಡಿರುವುದಕ್ಕೆ ಕಾರಣವೇನೆಂದರೆ ಕೆಲಸ ಕಾರ್ಯಗಳು ಬೇಗ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಅಷ್ಟೇಹೊರತು agreement ಮೇಲೆ ಇದನ್ನೆಲ್ಲಾ ನಡೆಸುತ್ತಿಲ್ಲ. ನಾವೆಲ್ಲಾ ಇಂಡಿಯಾ ಸರ್ಕಾರದವರೊಂದಿಗೆ agreement ಮಾಡಿಕೊಂಡಿದ್ದೇವೆಂದು ಹೇಳಕೂಡದು. ನಾವೆಲ್ಲಾ ಒಂದೇ, ಒಂದೇ ರಾಷ್ಟ್ರದವರು. ಇಂಡಿಯಾ ದೇಶದ ಪಾರ್ಲಿಮೆಂಟಿಗೆ ಅಖಿಲಭಾರತದ ಯೋಗಕ್ಷೇಮವನ್ನು ನೋಡತಕ್ಕ ಜವಾಬ್ದಾರಿಯಿದೆ. ಆದ್ದರಿಂದ ಪ್ರಾಂತ್ಯಗಳ ಪುನರ್ವಿಂಗಡಣೆಯ ಸಮಸ್ಯೆಯನ್ನು ಎಲ್ಲರ ಯೋಗಕ್ಷೇಮಕ್ಕಾಗಿ ಮಾಡತಕ್ಕದ್ದಾಗಿದೆ.

ಇನ್ನೊಂದೇನೆಂದರೆ, ನಾವು ಈ ಸಮಸ್ಯೆಯನ್ನು ಇಂದು ಕೇವಲ ಭಾಷಾದೃಷ್ಟಿಯಿಂದ ನೋಡುತ್ತಿದ್ದೇವೆ. ಈ ವಿಷಯದಲ್ಲಿ ಸ್ವಲ್ಪ ಸಂದೇಹಕ್ಕೆ ಆಸ್ಪದವಿದೆಯೆಂದು ಒಪ್ಪುತ್ತೇನೆ. ಭಾಷೆ ಮುಖ್ಯವಾದ್ದು ನಿಜ. ಆದರೆ ನನ್ನ ವಿಷಯವನ್ನೇ ಹೇಳುವುದಾದರೆ, ನಾನು ಮನೆಯಲ್ಲಿ ಮಾತನಾಡುವುದು ತಮಿಳು, ಹೊರಗೆ ಮಾತನಾಡುವುದು ಕನ್ನಡ; ತೆಲುಗನ್ನು ನಾನು ಚೆನ್ನಾಗಿ ಓದಬಲ್ಲೆ, ಆಂಧ್ರನಾಟಕ ನೋಡಿ ಸಂತೋಷ ಪಡಬಲ್ಲೆ, ಆಂಧ್ರ ಸಂಪರ್ಕವೂ ಹೆಚ್ಚಾಗಿದೆ. ಆದರೂ ಕೂಡ ಎಲ್ಲ ಭಾಷೆಗಳೂ ನನಗೆ ಒಂದೇ ಆಗಿವೆ. ಕನ್ನಡ ಆದರೇನು, ತೆಲುಗು ಆದರೇನು, ತಮಿಳಾದರೇನು, ಭಾಷೆಯ ಬೆಳವಣಿಗೆ ಹೇಗೆ ಆಗುತ್ತದೆಂಬುದನ್ನೂ ನೋಡಿ. 1903ನೆಯ ಇಸವಿಯಲ್ಲಿ ನನ್ನ cousin ಒಬ್ಬರು ನನ್ನನ್ನು ಗೌರಿಬಿದನೂರಿಗೆ ಕರೆದುಕೊಂಡು ಹೋದರು. ಒಂದು ದಿನ ಬಜಾರ್ ಬೀದಿಗೆ ಹೋಗಿ ಕೊಬ್ಬರಿ ಎಣ್ಣೆ ತರಲು ನಾನು ಹೋದೆ. ಕೊಬ್ಬರಿ ಎಣ್ಣೆ ಕೊಡಿ ಎಂದು ನಾನು ಅಂಗಡಿಯವನನ್ನು ಕೇಳಿದೆ. ಅವರಿಗೆ ಯಾರಿಗೂ ನನ್ನ ಭಾಷೆಯೇ ಅರ್ಥವಾಗಲಿಲ್ಲ. ಕೊನೆಗೆ ಕೊಬ್ಬರಿ ನೂನ ಎಂದು ಹೇಳಿಯೇ ಎಣ್ಣೆ ತೆಗೆದುಕೊಂಡುಹೋಗಬೇಕಾಯಿತು. ಅಂಥ ಊರನ್ನು ಇಂದು ಹೋಗಿ ನೋಡಿ. ಎಲ್ಲರಿಗೂ ಈಗ ಅಲ್ಲಿ ಕನ್ನಡ ಚೆನ್ನಾಗಿ ಬರುತ್ತದೆ. ಭಾಷೆ ಈ ರೀತಿ ಬೆಳವಣಿಗೆ ಹೊಂದುತ್ತದೆ. ಆದ್ದರಿಂದ ದಕ್ಷಿಣ ಭಾರತದಲ್ಲಿ ಭಾಷೆಗಳ ಗೊಂದಲ ಇಲ್ಲವೇಇಲ್ಲ. ಪಾಕೀಸ್ಥಾನ್ ಮತ್ತು ಹಿಂದೂಸ್ಥಾನ್‌ಗಳ ಮಧ್ಯೆ Two-Nation Theory ಬಂದು Transfer of population ಆಗಬೇಕೆಂದು ಹೇಳಿದಹಾಗೆ, ಇಲ್ಲಿ ಯಾವುದೇರೀತಿಯ ವಿಭಾಗ ಮಾಡಿದರೂ transfer of population ಮಾಡಬೇಕಾಗುವ ಅವಶ್ಯಕತೆಯೇನೂ ಇಲ್ಲ. ಈ ದೃಷ್ಟಿಯಿಂದ ಶೇಷಾದ್ರಿ ಕಮಿಟಿಯವರು 19ನೆಯ ಪುಟದಲ್ಲಿ ಒಂದು ಮಾತು ಹೇಳಿರುವುದರ ಅರ್ಥವನ್ನು ನೋಡಬೇಕು. ಆ ಮಹನೀಯರ ವಿಷಯದಲ್ಲಿ ನನಗೆ ಬಹಳ ಗೌರವವಿದೆ ಅವರೆಲ್ಲರೂ ನನ್ನ ಸ್ನೇಹಿತರು. ಎಲ್ಲರೂ ಮಾನ್ಯರು. ಏನಿದ್ದರೂ ಅವರ ಬರವಣಿಗೆಯಿಂದ ಒಂದು ರೀತಿಯ ಅನುಮಾನಕ್ಕಾಸ್ಪದವಾಗಿದೆಯೋ ಎಂದೆನಿಸುತ್ತದೆ. ಅವರು ಹೇಳಿದ್ದಾರೆ :

> "From the foregoing survey, it is obvious to us that however carefully boundaries may be drawn, the presence of linguistic minorities cannot be eliminated unless we contemplate an exchange of population on a linguistic basis. It appears to us that over-emphasis of linguistic considerations raises more problems than it is supposed to solve."

ಇಂಥ ಒಂದು presumptionನ್ನಿನಮೇಲೆ ಅವರ statement ಕೊಡುವುದಕ್ಕೆ ಅವಕಾಶವೇ ಇರಲಿಲ್ಲ. Transfer of population ಮಾಡಬೇಕೆಂದು ಯಾರೂ ಹೇಳಿರಲಿಲ್ಲ. ಏನೋ ಪಾಕಿಸ್ಥಾನದ ಮನೋಭಾವವನ್ನು ತಾಳಿ ಅವರು ಹೀಗೆ ಹೇಳಿದ್ದಾರೆ. ಈ ರೀತಿಯಾದ ಬರವಣಿಗೆಯಿಂದ ಅವರು ಬಹಳ ಮಟ್ಟಿಗೆ ತೊಂದರೆಯನ್ನುಂಟುಮಾಡಿದ್ದಾರೆ. ಇದೇ ಒಂದು ವಾಕ್ಯವನ್ನು ತೆಗೆದುಕೊಂಡು ಅನೇಕರು ಭೀತಿಯನ್ನು ಪ್ರದರ್ಶಿಸಿದ್ದಾರೆ. Transfer of population ನ್ನಿನ ಪ್ರಶ್ನೆಯೇ ಅಲ್ಲ. ಹಾಗಿರುವಾಗ ಏಕೆ ಅವರಿಗೆ ಇಂಥ ಕೆಟ್ಟಕನಸು ಬಂತೋ ನನಗೆ ಗೊತ್ತಿಲ್ಲ. ಈಗ ನಮ್ಮಲ್ಲಿ ಕರ್ನಾಟಕ ಪ್ರಾಂತ್ಯವಾಗಬೇಕಾದರೆ transfer of population ಮಾಡಬೇಕಾಗಿರುವುದರ ಅವಶ್ಯಕತೆಯೆಲ್ಲಿ? ಅದ್ದರಿಂದ ಈ ಸಮಸ್ಯೆಯನ್ನು ಬಗೆ ಹರಿಸುವ ಕಾಲದಲ್ಲಿ ಆ ರೀತಿಯಾದ ಯಾವ ಭೀತಿಯನ್ನೂ ನಾವು ಪ್ರಕಟಿಸಬೇಕಾಗಿಲ್ಲ.

ಮತ್ತೊಂದು ವಿಷಯ ಹೇಳಿದರು. ನನ್ನ ಪರಮ ಮಿತ್ರರಾದ ಶ್ರೀಮಾನ್ ವೀರಣ್ಣಗೌಡರು ಆಡಿದ ಮಾತುಗಳನ್ನು ನಾನು ಬಹಳ ಕುತೂಹಲದಿಂದ ಕೇಳಿದೆ. "ಚಿತ್ರಗುಪ್ತ" ಎಂಬ ಪತ್ರಿಕೆಯ ಸಂಪಾದಕರಾದ ಅವರೇ ಒಂದು ಲೇಖನದಲ್ಲಿ ಕರ್ನಾಟಕ ಏಕೀಕರಣವಾಗಬೇಕೆಂಥು ಬಹಳವಾಗಿ ಬರೆದಿರುವುದನ್ನು

(ಶ್ರೀ ಪಿ. ಆರ್. ರಾಮಯ್ಯ.)

ನಾನು ನೋಡಿದ್ದೇನೆ. ಕನ್ನಡಿಗರೆಲ್ಲ ಸೇರಿ ಒಂದು ಪ್ರಾಂತ್ಯವಾಗಬೇಕೆಂದು ಅವರೂ ಕೂಡ ವಾದಿಸಿದ್ದಾರೆ. ಅಂಥವರು ಮೊನ್ನೆ ದಿವಸ ಮಾತನಾಡುವಾಗ ಮೈಸೂರೇ ಬೇರೆ ಇರಲಿ, ಇತರ ಕನ್ನಡಿಗರೇ ಬೇಕಾದರೆ ಬೇರೆ ಕರ್ಣಾಟಕ ಪ್ರಾಂತ್ಯ ಮಾಡಿಕೊಳ್ಳಲಿ ಎಂದು ಹೇಳಿದ್ದಾರಲ್ಲಾ! ಇದನ್ನು ನೋಡಿದರೆ, "ಕಿತನಾ ಬದಲ್ ಗಯಾ ಇನ್‌ಸಾನ್" ಎಂಬ ಸಿನಿಮಾ ಹಾಡು ನನಗೆ ಜ್ಞಾಪಕಕ್ಕೆ ಬರುತ್ತದೆ. ಸಂದರ್ಭಾನುಸಾರ ಮನುಷ್ಯ ಹೇಗೆ ಬದಲಾಯಿಸುತ್ತಾನೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅವರೇ ಬೇರೆ ಪ್ರಾಂತ್ಯ ಮಾಡಿಕೊಳ್ಳಲೆಂದಾದರೆ ನಾವೇಕೆ ಅದನ್ನಿಲ್ಲಿ ಚರ್ಚೆ ಮಾಡಬೇಕು? ಅವರು ಬರುತ್ತೇವೆಂದು ಹೇಳುವುದರಿಂದ, ಅವರನ್ನು ಬನ್ನಿ ಎಂದು ಹೇಳುವುದಕ್ಕೆ ಅಥವಾ ಬೇಡ ಎಂದು ಹೇಳುವುದಕ್ಕ ನಾವಿಲ್ಲಿ ಸೇರಿದ್ದೇವೆ, ಅಷ್ಟೆ. ಅವರು ಬೇರೆ ಪ್ರಾಂತ್ಯ ಮಾಡಿಕೊಳ್ಳುವುದಕ್ಕೆ ನಮ್ಮ ಅನುಮತಿ ಏಕಿತ್ತು?

ಇನ್ನೊಂದೇನೆಂದರೆ, ಈ ಸಮಸ್ಯೆಯನ್ನು ಬಗೆಹರಿಸುವುದು ನಮ್ಮ ಕೈಯಲ್ಲಿಲ್ಲ. ಒಂದುವೇಳೆ ದುರದೃಷ್ಟವಶಾತ್ ಇಂಡಿಯಾ ಸರ್ಕಾರದವರು ಮಂಗಳೂರು, ಕೊಡಗು, ಧಾರವಾರ, ಬೀಜಾಪುರ, ಬೆಳಗಾಂ ಮುಂತಾದ undisputed ಆಗಿರುವ ಪ್ರದೇಶಗಳು ಯಾವಯಾವವು ಇವೆಯೋ ಅವೆಲ್ಲವನ್ನೂ ಸೇರಿಸಿ ಕರ್ಣಾಟಕ ಪ್ರಾಂತ್ಯ ಮಾಡಬೇಕೆಂದು ಹೇಳಿದರೆ, ಆಗ ಅವರು, ಅಂದು ಮೈಸೂರಿಗೆ ನಾವು ಬರುತ್ತೇವೆಂದು ಹೇಳಿದರೆ ಬೇಡ ಎಂದು ಹೇಳಿದರು, ಈಗ ತಾವೇ ಒಟ್ಟಿಗೆ ಸೇರಬೇಕಾಗಿ ಬಂತು ಎಂದರೆ ಒಂದು ರೀತಿಯ ಮನಃಕಷಾಯ ಬರುತ್ತದೆ. ಆದ್ದರಿಂದ ಮೈಸೂರಿಗೆ ಹೊರಗಿನವರು ಈಗ ಬರಬೇಕೇ ಬೇಡವೇ ಎಂಬ ಪ್ರಶ್ನೆಯನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ. ಶ್ರೀಮಾನ್ ವೀರಣ್ಣಗೌಡರು ಎರಡು ಪ್ರಾಂತ್ಯ ಮಾಡಿಕೊಳ್ಳಲೆಂದು ಹೇಳಿದರು. ಇನ್ನು ಕೆಲವರು ಮೂರು ಕರ್ಣಾಟಕ, ನಾಲ್ಕು ಕರ್ಣಾಟಕಗಳಾಗಲೆಂದು ಹೇಳಿದರು. . . .

ಒಬ್ಬ ಸದಸ್ಯರು.—ನಾಲ್ಕು ಕರ್ಣಾಟಕಗಳಾಗಲೆಂದು ಯಾರೂ ಹೇಳಲಿಲ್ಲ!

ಶ್ರೀ ಪಿ. ಆರ್. ರಾಮಯ್ಯ.—ಮೈಸೂರಿನ ಇತಿಹಾಸವನ್ನು ನೋಡುವುದಾದರೆ, 1899ರಲ್ಲಿ ಮೈಸೂರಿನ ವಿಸ್ತೀರ್ಣ ಇಷ್ಟಿತ್ತೇ! ಮೈಸೂರಿನ ಸುತ್ತಮುತ್ತಣ ಕೆಲವು ಪ್ರದೇಶಗಳು ಮಾತ್ರ ಮೈಸೂರಿಗೆ ಸೇರಿತ್ತು. ರಾಜಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣ ಸೇರಿತು. ಅದಕ್ಕೆ ಮುಂಚೆ ಹದಿನಾಡು ಗ್ರಾಮ ಮತ್ತು ಮೈಸೂರು—ಇವಿಷ್ಟೇ ಮೈಸೂರಾಗಿತ್ತು. ಟೀಪು ಮತ್ತು ಹೈದರ್ ಬಂದಮೇಲೆ ಮೈಸೂರು ವಿಸ್ತಾರವಾಯಿತು. ಆದ್ದರಿಂದ ಮೈಸೂರು, ಮೈಸೂರು ಅಂದುಕೊಂಡು ಚಿಕ್ಕದಾಗಿರಬೇಕೆಂದು ಹೇಳುವುದು ಸರಿಯಲ್ಲ. ಈಗ ಇನ್ನೂ ವಿಸ್ತಾರವಾಗುವ ಅವಕಾಶಬಂದಿದೆ. ಸಾಮಾನ್ಯ ಪ್ರಜೆಗಳಿಗೇನೂ ಇದರಿಂದ ತೊಂದರೆಯಿಲ್ಲ. ಇನ್ನೂ ಅನುಕೂಲಗಳೇ ಜಾಸ್ತಿ. ಹೇಗೆಂದರೆ, ಬಡ ಸ್ಕೂಲು ಮೇಷ್ಟ್ರುಗಳು, ವ್ಯಾಪಾರಿಗಳು, ಲಾಯರುಗಳು ಮತ್ತು ಇನ್ನೂ ಬೇರೆ ಬೇರೆಯವರಿಗೆಲ್ಲಾ ದೊಡ್ಡದಾಗಿ ಕರ್ಣಾಟಕವಾದರೆ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ಜಮೀನ್ದಾರರ ವಿಷಯದಲ್ಲೇನೋ ಹೆಚ್ಚು ಬದಲಾವಣೆಯಾಗುವುದಿಲ್ಲ. ಬಾಕಿಯವರಿಗೆಲ್ಲಾ ವಿಸ್ತಾರ ಹೆಚ್ಚಾದರೆ ಹೆಚ್ಚಿಗೆ ಅಭಿವೃದ್ಧಿಗೆ ಅವಕಾಶವಾಗುತ್ತದೆ.

ಇನ್ನೊಂದು ವಿಷಯ. ಈ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರ ವರದಿಯಲ್ಲಿ, ವಿದ್ಯಾಭ್ಯಾಸ, ಸೌಕರ್ಯ, ಸಂಚಾರ, ಮೆಡಿಕಲ್ ರಿಲೀಫ್, ಪಬ್ಲಿಕ್ ಹೆಲ್ತ್, Animal Husbandry, Rural Development, Irrigation, Power Supply, National Industries ಇತ್ಯಾದಿಗಳೆಲ್ಲವನ್ನೂ ವಿವರಿಸಿದ್ದಾರೆ. ಯಾವುದಾದರೂ ಒಂದು ದೇಶವನ್ನು ದೊಡ್ಡ ದೇಶವೆಂದು ಹೇಳಿದರೆ, ಆ ದೇಶದಲ್ಲಿ ಎಷ್ಟು ಬಾವಿಗಳಿವೆ, ಎಷ್ಟು ಪಶುವೈದ್ಯ ಶಾಲೆಗಳಿವೆ, ಎಷ್ಟು ಆಸ್ಪತ್ರೆಗಳಿವೆ ಎಂಬುದರ ಮೇಲೆ ಅದನ್ನು ಹೇಳಿರುವುದಲ್ಲ. ಅಲ್ಲಿರತಕ್ಕ ಜನರು ಎಂಥ ದೊಡ್ಡ ಮನುಷ್ಯರು, ಆ ದೇಶದ ಇತಿಹಾಸವೇನು, ಅಲ್ಲಿನ ನಾಗರೀಕತೆಯೇನು ಎಂಬುದರ ಮೇಲೆ ಹೋಗುತ್ತದೆ ಒಂದು ದೇಶದ ಖ್ಯಾತಿ. ಇಂಡಿಯಾ ದೇಶ ದೊಡ್ಡದು ಎಂದು ಹೇಳಿದರೆ ಇದರ ಸಂಸ್ಕೃತಿಯೇನು, ಎಂತೆಂತಹ ದೊಡ್ಡ ಮನುಷ್ಯರಿದ್ದಾರೆ ಎಂಬುದನ್ನು ಕೇಳಿ ಹೇಳುತ್ತಾರೆಯೇ ಹೊರತು ಇಲ್ಲಿನ ಕೆರೆ, ಕುಂಟೆ, ಬಾವಿಗಳನ್ನು ಕೇಳಿ ಹೇಳುವುದಿಲ್ಲ. ಗ್ರೀಸ್ ದೇಶವನ್ನು ದೊಡ್ಡ ದೇಶವೆನ್ನುವುದು ಅಲ್ಲಿದ್ದ ಸಾಕ್ರೆಟಿಸ್, ಪ್ಲೇಟೋ ಮುಂತಾದ ದೊಡ್ಡ ದೊಡ್ಡ ಮನುಷ್ಯರ ದೆಸೆಯಿಂದ. ಮೈಸೂರು ದೊಡ್ಡ ದೇಶವೆಂದರೆ, ವಿಶ್ವೇಶ್ವರಯ್ಯ ಮುಂತಾದವರು ಇಲ್ಲಿದ್ದುದರಿಂದ ಹೇಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಗ್ರೀಕ್ ಸಂಸ್ಥಾನದ ವಿಷಯವೆಲ್ಲಾ ಮಾನ್ಯ ಸದಸ್ಯರು ಉದಹರಿಸುತ್ತಿದ್ದಾರೆ. ಅವೆಲ್ಲಾ ಚಿಕ್ಕ ಚಿಕ್ಕ States ಆಗಿದ್ದುವೇ ಹೊರತು ದೊಡ್ಡ ದೊಡ್ಡ ಸಂಸ್ಥಾನವಾಗಿರಲಿಲ್ಲ. ಅಂಥವುಗಳನ್ನು ಮೈಸೂರಿಗೆ ಹೋಲಿಸುತ್ತಾರಲ್ಲಾ.

ಶ್ರೀ ಪಿ ಆರ್. ರಾಮಯ್ಯ.—ಅವು City States ಆಗಿರಬಹುದು. ಆದರೂ ಅದನ್ನು ಒಂದು ಚಿಕ್ಕ ಬಾವಿ; ಅದರೊಳಗೆ ಒಂದು ಕಪ್ಪೆಯಿತ್ತು ಎಂಬ ಭಾವನೆಯಿಂದ ನೋಡುವುದಿಲ್ಲ. ಅಲ್ಲಿ ಎಂಥೆಂಥ ದೊಡ್ಡ ಮನುಷ್ಯರು, ಅರಿಸ್ಟಾಟಲ್, ಪ್ಲೇಟೋ ಪೆರಿಕ್ಲಿಸ್, ಸಾಕ್ರೆಟಿಸ್ ಮುಂತಾದವರು ಇದ್ದರೆಂದು ಜನ ಅದನ್ನು ನೋಡುತ್ತಾರೆ. ಅವರಿಂದಾಗಿ ಅದೊಂದು ದೊಡ್ಡ ಊರಾಗಿದೆ. ಇವತ್ತಿನ ದಿವಸ ಮೈಸೂರು ಪ್ರಖ್ಯಾತಿ ಹೊಂದಿದೆ—ಏಕೆ? ಇಲ್ಲಿ ದೊಡ್ಡ ದೊಡ್ಡ ದಿವಾನರಿದ್ದರು; ಒಳ್ಳೆಯ ಸಂಸ್ಕೃತಿ ಇದೆ.

11 A.M.

ಇಷ್ಟೇ ಅಲ್ಲದೆ ನಮ್ಮ ಮೈಸೂರಿನ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿದು, ಅದನ್ನು ಉಳಿಸಿ, ಬೆಳಸಿಕೊಂಡು ಬಂದವರಲ್ಲಿ ಶ್ರೀ ಶಂಕರಾಚಾರ್ಯರೂ, ಶ್ರೀ ರಾಮಾನುಜಾಚಾರ್ಯರೂ, ಶ್ರೀ ಬಸವೇಶ್ವರರೂ ಮತ್ತು ಇನ್ನೂ ಅನೇಕ ಜೈನಗುರುಗಳೂ ಇಂಥ ಮಹನೀಯರುಗಳೆಲ್ಲಾ ಬಹಳ ಪ್ರಖ್ಯಾತರಾಗಿದ್ದಾರೆ. ಶ್ರೀ ವಿದ್ಯಾರಣ್ಯರೂ ಕೂಡ ಬಹಳವಾಗಿ ಶ್ರಮಿಸಿದ್ದಾರೆ. ಇಂತಿಂಥ ಮಹನೀಯರುಗಳೆಲ್ಲಾ ಸೇರಿ ನಮ್ಮ ಮೈಸೂರಿನ ಕೀರ್ತಿಯನ್ನು ದೊಡ್ಡದನ್ನಾಗಿ ಮಾಡಿದ್ದಾರ. ಈ ಹಿಂದೆ ಈ ಮಹನೀಯರುಗಳೆಲ್ಲಾ ಸೇರಿ ಮಾಡಿದಂಥ ಆ ಕರ್ಣಾಟಕದ ಜನ ಎಲ್ಲಾ ಒಂದೇ ಕಡೆ ಬಂದು ಸೇರಿದರೆ ನಮ್ಮ ಮೈಸೂರಿನ ಕೀರ್ತಿ ಮುಂದಕ್ಕೆ ಇನ್ನೂ ದೊಡ್ಡದಾಗುತ್ತದೆ.

ಆದುದರಿಂದ ಸ್ವಾಮಿ, ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಮೈಸೂರಿನ ಕೀರ್ತಿಯೂ ಜಾಸ್ತಿಯಾಗುತ್ತದೆ. ಜನರಿಗೆ ಬೇಕಾದಂಥ ಸೌಕರ್ಯಗಳೂ

ಕೂಡ ಜಾಸ್ತಿಯಾಗಿಯೇ ಆಗುತ್ತವೆ. ಈಗ ಒಂದು ಅಭಿಪ್ರಾಯ ಹೇಳಿರುವ ಪ್ರಕಾರ ನಮ್ಮ ಸಮಸ್ತ ಭಾರತದಲ್ಲಿರುವ ಜನಗಳಿಗೆಲ್ಲಾ ಈಗಾಗಲೇ ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯ ಸರ್ಕಾರಗಳು ಕೈಗೊಂಡಿರುವ ಈ ಪ್ರಥಮ ಪಾಂಚವಾರ್ಷಿಕ ಮತ್ತು ಕೈಗೊಳ್ಳುವ ದ್ವಿತೀಯ ಪಾಂಚವಾರ್ಷಿಕ ಯೋಜನೆಗಳ ದೆಶೆಯಿಂದ ಇಡೀ ಕರ್ಣಾಟಕದ ಪ್ರತಿಯೊಂದು ಭಾಗಕ್ಕೂ ಅಗತ್ಯವಾಗಿ ಬೇಕಾಗಿರುವಂಥ ಎಲ್ಲಾ ಅನುಕೂಲತೆಗಳನ್ನೂ ಕಲ್ಪಿಸಿಯೇ ಕಲ್ಪಿಸಲಾಗುತ್ತದೆ. ಈ ಸ್ಕೂಲುಗಳು, ಆಸ್ಪತ್ರೆಗಳು, ರಸ್ತೆ ಇತ್ಯಾದಿಗಳೆಲ್ಲಾ ಆಗೇ ಆಗುತ್ತವೆ. ಇದಕ್ಕಾಗಿ ಯಾರೂ ಭೀತಿ ಪಡಬೇಕಾಗಿಲ್ಲ. ಈಗ ನನ್ನ ಕೈಲಿ "ಕರ್ಣಾಟಕ ದರ್ಶನ" ಎಂದು ಒಂದು ಪುಸ್ತಕ ಏದೆ. ಈ ಪುಸ್ತಕದ ಒಂದನೆಯ ಛಾಪ್ಟರ್‌ನಲ್ಲಿ ಇರುವ ಕೆಲವು ವಿಚಾರಗಳನ್ನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಲೇಖನದ ಹೆಸರು "ಇಂಡಸ್ಟ್ರೀಸ್ ಅಂಡ್ ಇಂಡಸ್ಟ್ರೀಸ್ ಆಫ್ ಕರ್ಣಾಟಕ" ಎಂದು. ಇದು ಶ್ರೀಮಾನ್ ಪಿ. ಎಚ್. ಕೃಷ್ಣರಾಯರಿಂದ ಬರೆಯಲ್ಪಟ್ಟಿದೆ. ಓದುತ್ತೇನೆ ಕೇಳಿ. ಶ್ರೀ ಶಿವನಂಜೇಗೌಡರು ಇದನ್ನು ದಯೆಯಿಟ್ಟು ಕೇಳಬೇಕು.

"Human resources are even more important than material resources. The Karnatak, in common with the rest of India, has vast man-power, but most of it is not technically trained and has not got the aid of mechanical power. The people should also be imbued with a spirit of enterprise and be encouraged by the State. Mysore had its share of industrialisation, as all the needed factors are present. The only area in Karnatak outside Mysore that has shown enterprise in Banking, Insurance and Industries is South Canara, particularly Udipi, where the "Maniapal Industries" in textile, pottery etc., have opened a new chapter. The transport services there, as already mentioned, are among the best organised. One of the strongest arguments advanced for the formation of the Karnatak State is that many areas have been neglected, because they are scattered and form the tail-end of States and have not received due attention for their development. Let us hope that the formation of the Karnatak State will make this neglect a thing of the past and will make Karnatak prosperous and thus add to the strength and prosperity of India."

ಸ್ವಾಮಿ, ಇನ್ನು ಕಡೆಯದಾಗಿ ಒಂದು ಮಾತು ಹೇಳುತ್ತೇನೆ—ಅನೇಕ ವರ್ಷಗಳಿಂದ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಲೇಬೇಕೆಂಬ ಆಸೆಯನ್ನೂ ಮತ್ತು ಇದು ಅದೇ ಆಗುತ್ತದೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಂಥ ಅನೇಕ ದೊಡ್ಡ ದೊಡ್ಡ ಮನುಷ್ಯರು, ಮಹನೀಯರುಗಳು, ಕವಿಗಳು, ಮತ್ತು ಕಲಾವಿದರುಗಳು ತಮ್ಮ ಕನಸ್ಸಿನಲ್ಲಿ ಯಾವ ಒಂದು ರಾಜ್ಯ ನಿರ್ಮಾಣವಾಗಬೇಕೆಂದು ಹಂಬಲಿಸುತ್ತಿದ್ದರೋ ಅಂಥ ಒಂದು ರಾಜ್ಯ ನಿರ್ಮಾಣವಾಗಲು, ಅಂಥ ಅವರೆಲ್ಲರ ಒಂದು ಆಸೆ ಫಲಿಸುವಂಥ ಕಾಲ ಈ ದಿವಸ ಬಂದಿದೆ. ಇದರಲ್ಲಿ ಮೈಸೂರಿನ ಪಾತ್ರ ಬಹಳವಾಗಿದೆ. ಈ ಪಾತ್ರಕ್ಕೆಲ್ಲಾ ಈ ಮೈಸೂರೇ ಕೇಂದ್ರವಾಗಿರಬೇಕು. ಈ ದೇಶವನ್ನು ದೊಡ್ಡದನ್ನಾಗಿ ಮಾಡತಕ್ಕ ಇತಿಹಾಸದಲ್ಲಿ ಮೈಸೂರಿನವರ ಪಾತ್ರವೂ ಸೇರಿರಬೇಕೆಂದು ಹೇಳುತ್ತೇನೆ. ಈ ಮೈಸೂರಿನವರ ಪಾತ್ರವಿಲ್ಲದೆ ರಾಜ್ಯ ವಿಸ್ತಾರವಾದರೆ it will be the drama of Hamlet without Hamlet ಎನ್ನುವಹಾಗೆ ಆಗುತ್ತದೆ. ಇನ್ನು ಇದರ ಹಿನ್ನೆಲೆಯಾಗಿ ಎರಡು ಮಾತುಗಳನ್ನು ಹೇಳಬೇಕಾಗಿದೆ—ಈ ಹಿಂದೆ ಮೈಸೂರನ್ನೊಳಗೊಂಡ ಕರ್ಣಾಟಕದ ವಿಚಾರದಲ್ಲಿ ಏನು ಅಭಿಪ್ರಾಯವಿತ್ತು ಅನ್ನುವುದರ ಬಗ್ಗೆ ಹೀಗೆ ಹೇಳಿದ್ದಾರೆ.

"If Mysore had been willing to join the Union it could easily have formed a nucleus round which the Kannada-speaking districts of Madras and Bombay could be brought together and reared into an administratively convenient Province. . . ."

ಈ ರೀತಿಯಾಗಿ ಧಾರ್ ಸಮಿತಿಯವರು ಅಭಿಪ್ರಾಯವಿತ್ತಿದ್ದಾರೆ. ಇದೇ ವಿಷಯ ಜೆ.ವಿ.ಪಿ. ವರದಿಯಲ್ಲೂ ಬಂದಿದೆ. ಈ ಹಿಂದಿನಿಂದಲೂ 1947ರವರೆಗೂ ಕೂಡ ಅನೇಕ ಮಹನೀಯರು ಕಾಂಗ್ರೆಸ್ ಸಂಸ್ಥೆಯಲ್ಲಿರತಕ್ಕಂಥವರೂ ಸಹ ಹೇಳಿರುವುದಲ್ಲದೆ, ಅನೇಕ ಬರಹಗಾರರೂ, ಸಾಹಿತಿಗಳೂ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಲೇಬೇಕೆಂದು ಹೇಳಿರುತ್ತಾರೆ. ಆದರೆ 1947 ರಿಂದ ಇತ್ತೀಚೆಗೆ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಜನರು ಈ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ತಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಆದರೆ ನಾನು ಈಗ ಹೇಳುತ್ತಿರುವಂಥ ವಿಚಾರಗಳನ್ನೆಲ್ಲಾ ಒಂದು ಆಧಾರಪೂರ್ವಕವಾಗಿ ಹೇಳುತ್ತಿದ್ದೇನೆ. 1946ನೆಯ ನವಂಬರಿನಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಈ ರೀತಿ ಹೇಳಿದ್ದಾರೆ.—

"In November 1946, on the 2nd and 3rd, the Annual Session of the Mysore Congress, held at Bangalore under the presidentship of Sri. K. C. Reddy, passed the following resolution:

'This Session of the Mysore Congress declares itself in favour of an early formation of a Karnataka Province comprising the present disrupted fragments under

(ಶ್ರೀ ಪಿ. ಆರ್. ರಾಮಯ್ಯ.)

various administrations. . . . This Session appeals to the people of all parts of Karnataka to give their full support to the formation of a province for Kannadigas'."

ಹೀಗೆ ಈ ವಿಚಾರ 1946ರಲ್ಲಿ ನಡೆದ ಅಧಿವೇಶನದಲ್ಲಿ ಶ್ರೀ ಕೆ. ಚಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಿರ್ಣಯ ರೂಪವಾಗಿ ಬಂದು ತೀರ್ಮಾನವಾಗಿದೆ. 1947ರ ಮೇಲೂ ಸಹ ಅನೇಕ ಸಂದರ್ಭಗಳಲ್ಲಿ ಮೈಸೂರು ರಾಜ್ಯಾಂಗ ಸಭೆಯಿದ್ದಾಗಲೂ ಸಹ ಇದೇ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಇದಕ್ಕೆ ಅನುಮತಿ ಕೊಡಲಾಗಿದೆ ಎನ್ನುವಂಥ ವಿಚಾರವನ್ನು ಈಗಾಗಲೇ ಅನೇಕ ಮಹನೀಯರು ಹೇಳಿರುತ್ತಾರೆ. ಈಗ ಒಟ್ಟಿನಲ್ಲಿ ಮೈಸೂರಿನಲ್ಲಿರತಕ್ಕಂಥ ಕನ್ನಡಿಗರ ಆದರಕ್ಕೆ ಅಕ್ಕಪಕ್ಕದಲ್ಲಿರುವ ಕನ್ನಡಿಗರು ಪಾತ್ರರಾಗಿರುವುದರಿಂದ ಆ ಕನ್ನಡ ಪ್ರದೇಶಗಳೆಲ್ಲಾ ಮೈಸೂರಿಗೆ ಸೇರಲೇಬೇಕೆಂದು ಹೇಳಿದ್ದಾರೆ. ಆದರೆ ಇತ್ತೀಚೆಗೆ ಜನರಲ್ಲಿ ಈ ಅಭಿಪ್ರಾಯಗಳು ಏನೊಂದು ಬದಲಾವಣೆಯನ್ನು ಅಲ್ಪಸ್ವಲ್ಪ ಹೊಂದುತ್ತಿದ್ದವೋ ಅಂಥಾದ್ದಕ್ಕೆ ಯಾವ ಅವಕಾಶವಾಗಲೀ ಅಥವಾ ಆಧಾರಗಳಾಗಲೀ ಇರುವುದಿಲ್ಲ.

"As the Mysore Congress stand has always been in favour of United Karnataka with His Highness the Maharaja of Mysore as the constitutional Head, the Committee recommends to the Working Committee that the formation of Akhila Karnataka Province is essential with the Maharaja of Mysore as the constitutional Head and Bangalore as its capital, but the time for implementation of the same is not opportune. . . .

(Sd.) A. G. Bandi Gowda
(Sd.) S. Channaiya
(Sd.) G. Narayana Gowda."

ಆದರೆ ಇತ್ತೀಚೆಗೆ ಕೆಲವರ ಅಭಿಪ್ರಾಯಗಳು ಸ್ವಲ್ಪ ಮಟ್ಟಿಗೆ ಬದಲಾವಣೆ ಆಗಿರುವುದಕ್ಕೆ ಕಾರಣವಿದೆಯೋ ಅಂತ ಕೇಳಿದರೆ, ಅದಕ್ಕೇನು ಹೇಳುತ್ತಿದ್ದಾರೆ ಅಂದರೆ, ಒಂದುವೇಳೆ ಆ ಹೊರಗಡೆಯಿರತಕ್ಕಂಥ ಕನ್ನಡ ಜನರೆಲ್ಲ ಬಂದು ನಮ್ಮ ಒಡನೆ ಸೇರಿಕೊಂಡರೆ ಆಗ ಮೈಸೂರಿನ ಪ್ರಗತಿಗೆ ಸ್ವಲ್ಪ ಕುಂಠಿತವಾಗಬಹುದೆಂಬ ಒಂದು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಅಂಥ ಅನುಮಾನಗಳಿಗೆ ಆಸ್ಪದವಿಲ್ಲ, ಆ ರೀತಿ ಅನುಮಾನಪಡುವುದಕ್ಕೆ ಕಾರಣವೂ ಸಹ ಇಲ್ಲ. ಇದನ್ನು ಆದಷ್ಟು ಬೇಗ ಮಾಡಲೇಬೇಕು. ನಿಧಾನವಾದ ಹಾಗೆಲ್ಲಾ ಅನುಮಾನಗಳು ತಲೆದೋರಬಹುದು. ನಮಗಾಗಲೇ ಸ್ವಾತಂತ್ರ್ಯ ಬಂದು ಬಹಳ ದಿವಸಗಳಾದುವು. 1947ರಲ್ಲೇ ಸ್ವಾತಂತ್ರ್ಯ ಬಂತು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಿಧಾನ ಮಾಡಿದ್ದು ಬಹಳ ತೊಂದರೆಗೀಡಾಯಿತು. ಕಾನ್ಸ್ಟಿಟ್ಯೂಷನ್ನನ್ನು ಬರೆಯುವಾಗಲೇ ಇದನ್ನೆಲ್ಲಾ ತೀರ್ಮಾನ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಇತ್ತೀಚೆಗೆ ನಮ್ಮ ಭಾರತ ಸರ್ಕಾರದವರಿಗೆ ಈ ಕಾಶ್ಮೀರದ ಸಮಸ್ಯೆ, ರೆಫ್ಯೂಜಿಗಳ ಸಮಸ್ಯೆ ಇತ್ತಿತ್ಯಾದಿ ಕೆಲವು ದೊಡ್ಡ ಸಮಸ್ಯೆಗಳು ಉದ್ಭವಿಸಿದುವು. ಈ ಕೆಲವು ತೊಂದರೆಗಳು ಉದ್ಭವಿಸಿದ ಕಾರಣ 1947ರಲ್ಲಿ ನಮ್ಮ ಭಾರತ ಸರ್ಕಾರದವರು ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ಕಾರ್ಯವನ್ನು ಇನ್ನೂ ಹತ್ತು ವರ್ಷಗಳ ಕಾಲಕ್ಕೆ ಮುಂದುವರಿಸೋಣ ಎಂದು ಹೇಳಿದರು. ಅದಕ್ಕನುಸಾರವಾಗಿ 1957ರ ಹತ್ತಿರದಲ್ಲಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರದವರು ಈ ಅವಧಿಯು ಪೂರೈಸುತ್ತಾ ಬಂದಿರುವುದನ್ನು ಗಮನಕ್ಕೆ ತಂದುಕೊಂಡು ಆ ಹೈಪವರ್ ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಸಮಿತಿಯವರು ಭಾರತದಾದ್ಯಂತವೂ ತಿರುಗಿ ಜನಾಭಿಪ್ರಾಯಗಳನ್ನು ಶೇಖರಣೆಮಾಡಿ, ಈ ರಾಜ್ಯಗಳ ಪುನರ್ವಿಂಗಡಣೆಯ ಬಗ್ಗೆ ಸಧ್ಯದಲ್ಲೇ ಒಂದು ವರದಿಯನ್ನು ತಯಾರಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಇನ್ನು 1-2 ತಿಂಗಳಲ್ಲೇ ಒಪ್ಪಿಸುವುದರಲ್ಲಿದ್ದಾರೆ. ಹೀಗೆ ಈ ಹಿಂದೆ ನಮ್ಮ ಕೇಂದ್ರ ಸರ್ಕಾರದವರು ಏನೊಂದು ಮಾತನ್ನು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ ತಮ್ಮ ಬಾಯಿಂದ ಹೊರಡಿಸಿದ್ದರೋ ಅಂಥ ಮಾತನ್ನು ಈಗ ಕಾರ್ಯಗತ ಮಾಡುವಂಥ ಕಾಲ ಸಮೀಪಿಸುತ್ತ ಬಂದಿದೆ. ಈ ಕಾರ್ಯಗಳೆಲ್ಲಾ ಪೂರೈಸುವ ಹೊತ್ತಿಗೆ ಅವರು ಹೇಳಿದ್ದಂಥ 10 ವರ್ಷಗಳ ಅವಧಿಕೂಡ ಪೂರೈಸುತ್ತದೆ. ಆದರೆ ಅವರು ಈ ವಿಚಾರವನ್ನು ಇಲ್ಲಿಗೆ 10 ವರ್ಷಗಳ ಹಿಂದೆಯೇ ಮುಗಿಸಿದ್ದಿದ್ದರೆ ಆಗ ಈ ಜಿಜ್ಞಾಸೆಗಳೊಂದೂ ಬರುತ್ತಿರಲಿಲ್ಲ. ಕನ್ನಡದಲ್ಲಿ ಒಂದು ಗಾದೆಯಿದೆ—"ಆಲಸ್ಯಂ ಅಮೃತಂ ವಿಷಂ" ಎಂದು ಹೇಳಿದಹಾಗೆ ಈ ಪ್ರಶ್ನೆ ಸ್ವಲ್ಪ ಕಾಲವಿಳಂಬವಾದುದಕ್ಕೆ ಈ ಬಗ್ಗೆ ಅಲ್ಪಸ್ವಲ್ಪ ಭಿನ್ನಾಭಿಪ್ರಾಯಗಳು ತಲೆದೋರುವುದಕ್ಕೆ ಅವಕಾಶವಾಯಿತು. ಈ ಹಿಂದೆ ಕರ್ಣಾಟಕ ರಾಜ್ಯ ಅನ್ನುವುದು ಒಂದು ಭವ್ಯವಾದಂಥ ರಾಜ್ಯವಾಗಿತ್ತು. ಇಲ್ಲಿಯವರೆಗೂ ಅಂಥ ಭವ್ಯವಾದ ರಾಜ್ಯದ ಕನಸನ್ನು ಕಾಣುತ್ತಿದ್ದವರಿಗೆಲ್ಲ ಅದು ನಿಜವಾಗಿ ಕಾಣತಕ್ಕಂಥ ಸಂದರ್ಭವೀಗ ಒದಗಿದೆ. ಆ ಕರ್ಣಾಟಕದ ಆದರ್ಶತ್ವ ಎಷ್ಟು ಸೊಗಸಾದುದು ಎನ್ನುವುದಕ್ಕೆ ಮತ್ತು ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಮುಂದೆ ಅದು ಯಾವರೀತಿ ಜನಗಳಿಗೆ ಒಳ್ಳೆಯದನ್ನು ಮಾಡಬಲ್ಲದು ಎನ್ನತಕ್ಕ ಬಗ್ಗೆ ಡಾಕ್ಟರ್ ಅನಿಬೆಸೆಂಟ್‌ರವರು ಹೀಗೆ ಹೇಳಿದ್ದಾರೆ :—

"If you want to know what India can do, we must know what India has done.

ನಾನು ಹೇಳುವುದು,

"If you want to know what Karnataka can do, you must know what Karnataka has done in the past."

ಹೀಗೆ ಹಿಂದೆ ಕರ್ಣಾಟಕ ರಾಜ್ಯ ಎನ್ನುವುದು ಒಂದು ಭವ್ಯವಾದ ರಾಜ್ಯವಾಗಿತ್ತು. ಈಗಲೂ ಸಹ ನಾವು ಆ ಜನರನ್ನೆಲ್ಲಾ ಪುನಃ ಒಟ್ಟುಗೂಡಿಸಿದರೆ ಪುನಃ ಅಂಥ ಭವ್ಯವಾದ ಪ್ರಾಂತ್ಯವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿದ್ದೇ ಇದೆ. ಈ ಕರ್ಣಾಟಕ ದರ್ಶನ ಅನ್ನತಕ್ಕಂಥ ಪುಸ್ತಕದ ಒಂದನೆಯ ಭಾಗದಲ್ಲಿ ಹೀಗೆ ಹೇಳಿದ್ದಾರೆ. ಅದನ್ನೀಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

"(1) Karnatak was one of the foremost powers in India from the earliest period of history and maintained its integrity till the advent of the British rule. It was conscious of its separate cultural unity till the fall of the Vijayanagara rule in 1565. But by the introduction of the Maratha sway in Karnatak the first foreign influence was thrust on the people of Karnatak, but it being a supporter of Hindu culture as a whole, its oppression was not felt though the nerve of Karnatak was not recognised at its worth; (2) The Kannada language was spoken in the extensive region from the Kaveri to the Godavari and this vast territory was held under their sway, practically by the indigenous rulers of Karnatak, *i.e.*, the Chalukyas of Badami, the Rashtrakutas of Malkhed, the later Chalukyas of Kalyani, the Hoysala and Yadava rulers and lastly by the king of the Vijayanagara dynasties, *i.e.*, roughly during the past nine hundred years. Consequently the area presents a uniformity of culture, and unity of thought and aspirations in the social, religious and economic lives of the people. All the abovementioned royal families have been historically proved to be the original inhabitants of Karnatak speaking Kannada in their homes. But after the fall of the Vijayanagara empire, this homogeneity of administration was shattered and the imposition of the Maratha rule on Karnatak in the 17th century A.D.—though un-antagonistic in spirit and culturally wholesome—paved the way for the disregard of the necessity of linguistic uniformity for the cultural advancement of a country. Within a few decades, the whole of North Karnatak was overrun with bias for Marathi to the detriment of Kannada, the language of the soil; (3) The influence of Karnatak in the historical period spread to the Latamandala in Gujarat and the Vengivishaya in Andhra continuously for over 500 years. It may be noted that some of the Kannada families that settled in North India apparently during the political campaigns of the Rashtrakuta kings, Govinda III and Krishna III as well as of the Chalukya Vikramaditya VI, founded separate ruling dynasties in their new homes, to wit, the family of Nanyadeva of Nepal rulers and the Senas of Bengal.

Thus, it may be concluded that Karnatak was the most powerful political and cultural centre in India and maintained its international superiority until the decline of the Vijayanagara household in the 16th century A.D."

ಆದ್ದರಿಂದ ಕರ್ಣಾಟಕ ಗತವೈಭವ ಸ್ಮರಿಸಿಕೊಂಡರೆ ಆಗ ಕರ್ಣಾಟಕ ಪ್ರಾಂತ ಎಷ್ಟು ದೊಡ್ಡದಾಗಿತ್ತೋ ಇನ್ನು ಮುಂದೆಯೂ ಅಷ್ಟೇ ದೊಡ್ಡದಾಗಬೇಕು ಅಂದಾಕ್ಷಣ, ಬರೀ ಭಾಷಾ ದೃಷ್ಟಿಯಿಂದ ಪ್ರಾಂತ ನಿರ್ಮಾಣ ಮಾಡಬೇಕೆಂದು ನನ್ನ ಅಭಿಪ್ರಾಯವಲ್ಲ. ಎಲ್ಲಾ ಭಾಷೆಗಳೂ ಬೆಳೆಯಬೇಕು. ಒಂದು ಪ್ರಾಂತದ ಬಹು ಸಂಖ್ಯಾತ ಜನರು ಯಾವ ಭಾಷೆ ಮಾತನಾಡುತ್ತಾರೋ, ಅದೇ ಭಾಷೆ ಅಲ್ಲಿಯ ಶಾಸನ ಸಭೆಗಳ ಭಾಷೆಯಾಗುತ್ತದೆ. ಮೊನ್ನೆ ದಿವಸ ಕರ್ಣಾಟಕ ಪ್ರಾಂತದ ಅಧ್ಯಕ್ಷರಾದಂಥ ಶ್ರೀ ಅಂಬ್ಲಿಯವರಿಗೆ ಮೈಸೂರು ಸ್ಟೇಟ್ ಕಾಂಗ್ರೆಸ್ ಭವನದಲ್ಲಿ ಒಂದು ಪಾರ್ಟಿ ಕೊಟ್ಟರು. ಆ ಸಮಯದಲ್ಲಿ ಅವರು ಕೆಲವು ಮಾತುಗಳನ್ನು ಆಡಿದರು. ಅದನ್ನು ಕೇಳಿ ನನ್ನ ಕಣ್ಣಲ್ಲಿ ನೀರು ಬಂತು. ಅವರು ಈ ಸಭೆಗೆ ಬಂದು ಕನ್ನಡದಲ್ಲೇ ಪ್ರಶ್ನೆಗಳನ್ನು ಹಾಕುವುದನ್ನು, ಕನ್ನಡದಲ್ಲೇ ಉತ್ತರಗಳನ್ನು ಕೊಡುವುದನ್ನು, ಕನ್ನಡದಲ್ಲೇ ಭಾಷಣ ಮಾಡುವುದನ್ನು ನೋಡಿ ಅನೇಕ ದಿವಸಗಳಿಂದ ಕನ್ನಡ, ಕನ್ನಡ ಎಂದು ಹೃದಯದಲ್ಲಿ ಮರುಗುತ್ತ ಇರುವ ಅವರ ಹೃದಯ ನೀರಾಯಿತು ಮತ್ತು ಇಂತಹ ಕನ್ನಡ ಪ್ರಾಂತ್ಯವನ್ನು ಯಾವಾಗ ನೋಡಿಯೇವು, ಉತ್ತರ ಕರ್ಣಾಟಕದಲ್ಲಿರುವವರು ನಮ್ಮ ಶಾಸನ ಸಭೆಗಳಿಗೆ ಬಂದು ಕನ್ನಡ ಮಾತನಾಡುವುದನ್ನು ಯಾವಾಗ ಕೇಳಿಯೇವು, ಪ್ರಶ್ನೋತ್ತರಗಳು ಕನ್ನಡದಲ್ಲಿ ಯಾವಾಗ ಬಂದಾವು ಎಂದು ಮರುಗಿದರು. ನಾನು ಮದ್ರಾಸ್ ಶಾಸನಸಭೆ, ಬೊಂಬಾಯಿ ಶಾಸನ ಸಭೆಯಲ್ಲಿ ನಡೆವಳಿಕೆಗಳನ್ನು ನೋಡಿದ್ದೇನೆ. ಬೊಂಬಾಯಿ ಶಾಸನ ಸಭೆಯಲ್ಲಿರತಕ್ಕವರಲ್ಲಿ ಕನ್ನಡಿಗರು ಬಹಳ ಸ್ವಲ್ಪ ಜನ. ಅವರು ಕನ್ನಡದಲ್ಲಿ ಮಾತನಾಡುವುದಕ್ಕೆ ಷುರುಮಾಡಿದರೆ, ಗುಜರಾತಿ ಭಾಷೆ ಮಾತನಾಡುವವರು ಹೊರಗೆ ಹೊರಟುಹೋಗುತ್ತಾರೆ. ಮರಾಠಿಯಲ್ಲಿ ಮಾತನಾಡುವುದಕ್ಕೆ ಷುರುಮಾಡಿದರೆ ಬಾಕಿಯವರು ಹೊರಗೆ ಹೊರಟುಹೋಗುತ್ತಾರೆ. ಬೊಂಬಾಯಿ ಪ್ರಾಂತದ ಶಾಸನ ಸಭೆ ಈ ರೀತಿ ಇದೆ. ಆದ್ದರಿಂದ ಯಾವ ಪ್ರಾಂತದಲ್ಲಿ ಬಹು ಸಂಖ್ಯಾತ ಜನರು ಕನ್ನಡ ಭಾಷೆಯನ್ನು ಆಡುತ್ತಾರೋ ಅಂತಹ ಒಂದು ಪ್ರಾಂತ್ಯವಾಗಬೇಕು ಎಂದು ಹೇಳುತ್ತಿದ್ದಾರೆ.

(ಶ್ರೀ ಪಿ. ಆರ್. ರಾಮಯ್ಯ.)

ಆದ್ದರಿಂದ ಅವರು ಮೈಸೂರಿನವರ ವಿಷಯದಲ್ಲಿ ಬಹಳ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದಾರೆ. ಭಯಪಡ ಬೇಡಿ, ಒಟ್ಟಿಗೆ ಸೇರಿ ಕೆಲಸ ಮಾಡೋಣ, ಕರ್ಣಾಟಕ ಪ್ರಾಂತವಾಗಲಿ ಎಂದು ಒಳ್ಳೆಯ ಮಮತೆಯಿಂದ ನಮ್ಮನ್ನು ಅವರು ಕೇಳಿಕೊಳ್ಳುತ್ತಿದ್ದಾರೆ.

ಇನ್ನೊಂದು ಮಾತು. ಅಮೇರಿಕಾದಲ್ಲಿ 48 ಸ್ಟೇಟ್‍ಗಳಿವೆ ಎಂದು ಹೇಳಿದರು. ಆದರೆ ಅಲ್ಲಿ ಇರ ತಕ್ಕಂಥಾದ್ದು ಒಂದೇ ಒಂದು ಭಾಷೆ. ಅಲ್ಲಿ ಆಡಳಿತ ಅನುಕೂಲಕ್ಕೋಸ್ಕರ 48 ಸ್ಟೇಟ್‍ಗಳನ್ನು ಮಾಡಿ ಕೊಂಡಿದ್ದಾರೆ. ಅಲ್ಲಿ ಈ ತರಹ ಭಾಷೆಯ ಗೊಂದಲ ವಿಲ್ಲ. ಆದರೆ Soviet Russia Multi-lingual area ಆಗಿದೆ, ಅಲ್ಲಿ linguistic Nationalities ಎಂಬುದಾಗಿ ಮಾಡಿಕೊಂಡಿದ್ದಾರೆ. ಆದ್ದರಿಂದ Soviet Russia ದಲ್ಲಿ ಭಾಷೆ ಮತ್ತು ಸಂಸ್ಕೃತಿ ಯನ್ನು ಕಾಪಾಡುವುದಕ್ಕೋಸ್ಕರ ಯಾವ ಪ್ರಾಂತದಲ್ಲಿ ಬಹು ಸಂಖ್ಯಾತ ಜನರು ಯಾವ ಭಾಷೆ ಆಡುತ್ತಾರೋ ಆ ಭಾಷೆಗೆ ಪ್ರಾಧಾನ್ಯತೆಕೊಟ್ಟು ಪ್ರಾಂತಗಳನ್ನು ಮಾಡಿದ್ದಾರೆ. ಇವೊತ್ತಿನ ದಿವಸ ಇಡೀ ಪ್ರಪಂಚದ ದೃಷ್ಟಿಯಿಂದ ನೋಡಿದರೂ ಕೂಡ ಅಖಿಲ ಪ್ರಪಂಚದಲ್ಲಿ ಯಾವ ಯಾವ ರಾಷ್ಟ್ರದವರು ಯಾವ ರೀತಿ ಪ್ರಾಂತ ಗಳನ್ನು ವಿಂಗಡನೆಮಾಡಿಕೊಂಡಿದ್ದಾರೆ ಎಂಬುದನ್ನು ನೋಡಿ. ಜರ್ಮನಿಯಲ್ಲಿ ಜರ್ಮನ್ ಭಾಷೆ ಇದೆ, ಫ್ರಾನ್ಸ್‌ನಲ್ಲಿ ಫ್ರೆಂಚ್ ಭಾಷೆ ಇದೆ. ಇಂಗ್ಲೆಂಡ್‌ನಲ್ಲಿ ಇಂಗ್ಲಿಷ್ ಭಾಷೆ ಇದೆ. ಯೂರೋಪಿನ ಯಾವ ದೇಶ ವನ್ನು ತೆಗೆದುಕೊಂಡರೂ ಅಲ್ಲಿ ಭಾಷೆಯ ಪ್ರಾಧಾನ್ಯ ತೆಯಮೇಲೆ ದೇಶವನ್ನು ಕಟ್ಟಿಕೊಂಡಿದ್ದಾರೆ. ಇವೊತ್ತಿನ ದಿವಸ ನಮ್ಮ ಕರ್ಣಾಟಕದ ಜನರನ್ನು ಎಲ್ಲಾ ಸೇರಿಸಿ ಕನ್ನಡ ಭಾಷೆಯನ್ನು ಮಾತನಾಡುವ ಜನರನ್ನು ಒಳ ಗೊಂಡಂಥ ಪ್ರಾಂತ ಆಗಬೇಕು. ಕನ್ನಡ ಸಂಸ್ಕೃತಿಗೆ ಆದರಣೆ ಬರಬೇಕು. ಕನ್ನಡಿಗರು, ಮೈಸೂರಿನವರು, ಇತರ ಪ್ರಾಂತ್ಯಗಳವರು ಎಂಬುದನ್ನು ಮರೆತುಬಿಟ್ಟು ಎಲ್ಲಾ ಒಟ್ಟಿಗೆ ಸೇರಿ ಒಂದು ದೊಡ್ಡ ಪ್ರಾಂತವನ್ನು ಮಾಡಿ, ಅಖಿಲ ಭಾರತದಲ್ಲಿ ಒಂದು ದೊಡ್ಡ ಸ್ಥಾನ ವನ್ನು ಸಂಪಾದಿಸೋಣ, ನಾವೆಲ್ಲರೂ ಭಾರತೀಯರು. ನಾವು ಮೈಸೂರಿನವರಾದರೂ ಮೊದಲು ಭಾರತೀ ಯರು ಎಂದು ತಿಳಿದು ಮುಂದುವರಿಯೋಣ. ಭಾರತ ದಲ್ಲಿ ಭಾಷೆಯ ಆಧಾರದಮೇಲೆ ಅಂದರೆ ಬಹು ಸಂಖ್ಯಾತರು ಯಾವ ಭಾಷೆ ಮಾತನಾಡುತ್ತಾರೋ ಆ ಆಧಾರದಮೇಲೆ, ಪ್ರಾಂತಗಳು ಆಗುವುದು, ಅಗತ್ಯವಿದೆ. ಇವೊತ್ತಿನ ದಿವಸ $2\frac{1}{2}$ ಕೋಟಿ ಜನ ಮತ್ತು 47 ಸಾವಿರ ಚದುರ ಮೈಲಿ ಇರುವ ಒಂದು ಪ್ರಾಂತ್ಯವನ್ನು ಮಾಡಿಕೊಳ್ಳಬಹುದು. ಶ್ರೀ ವೀರಣ್ಣ ಗೌಡರು ಬೆಂಗಳೂರು ರಾಜಧಾನಿ ಮುಂದಕ್ಕೆ ಧಾರವಾಡಕ್ಕೆ ಹೋಗಬಹುದು ಎಂಬ ಒಂದು ಭೀತಿ ಯನ್ನು ಪ್ರದರ್ಶಿಸಿದರು. ಅಂಥ ಭೀತಿಗೆ ಎಡೆಯಿಲ್ಲ. ಬೆಂಗಳೂರು ಇಂಡಿಯಾದ Capital ಆಗಬೇಕು ಎಂದು ಹೇಳಿಕೊಳ್ಳುತ್ತಿರುವಾಗ ಕರ್ಣಾಟಕಕ್ಕೆ ಹುಬ್ಬಳ್ಳಿ ರಾಜಧಾನಿಯಾಗುತ್ತದೆ ಎಂದು ಹೇಳುವುದರಲ್ಲಿ ಸತ್ಯಾಂಶವಿಲ್ಲ. ನಮ್ಮ ಮಿತ್ರರು ಅನೇಕರು ಈ ವಿಚಾರದಲ್ಲಿ ಸ್ವಲ್ಪ ಭೀತಿ ತೋರಿಸಿದ್ದಾರೆ. ಅವರ ವಿಷಯದಲ್ಲಿ ನನಗೆ ಬಹಳ ಗೌರವವಿದೆ. ಅವರ ಹೃದಯವನ್ನು ಪರಿವರ್ತನೆ ಮಾಡುವುದಕ್ಕೆ ಏನಾದರೂ ಮಾಡಬೇಕೆಂದು ನಾನು ಪ್ರಯತ್ನಪಡುತ್ತಿದ್ದೇನೆ. ಇದರಿಂದ ಅವರ ಹೃದಯ ಪರಿವರ್ತನೆ ಆಗದಿದ್ದರೆ ಭಗ ವಂತನೇ ಅದನ್ನು ಮಾಡಬೇಕು. ಮಾನವನಿಗೆ ಸಾಧ್ಯ ವಿಲ್ಲ. ಭಗವಂತನೇ ಅವರ ಹೃದಯವನ್ನು ಪರಿವರ್ತನೆ ಮಾಡಿ ಮೈಸೂರು ಮತ್ತು ಇತರ ಪ್ರಾಂತಗಳು ಒಂದಾಗಿ ಸೇರಿ, ಕರ್ಣಾಟಕ ಭವ್ಯರಾಜ್ಯ ನಿರ್ಮಾಣ ವಾಗುವ ಹಾಗೆ ಈ ಸಭೆಯವರು ಅನುಮತಿ ಕೊಡ ಬೇಕೆಂಬುದಾಗಿ ಪ್ರಾರ್ಥಿಸುತ್ತೇನೆ.

*Sri M. PALANIYAPPAN (Ulsoor).—Now, we are discussing the facts placed by the Fact Finding Committee about the re-organisation of States. (*Interruption*). I will say what I want to say.

Mr. SPEAKER.—May I request the Hon'ble Member to be brief ?

Sri M. PALANIYAPPAN.—This Committee has been constituted by the Government of Mysore to give correct salient figures about the developments made in other Kannada-speaking areas that are now forming parts and parcels of other provinces. Some of my friends have expressed that the Committee has not given correct support. But I would say that the Committee has given a correct picture of the position of the Kannadigas in those parts. Sir, this committee, with all responsible people, with men of wisdom and knowledge, have gone into detail. In respect of every detail that they have been asked to go into, they have given a report. As such, I do not think there is any reason why we should just say that the report is not correct. So, if you just take the facts as they are given in this picture, naturally it leads us to think that it is absolutely unnecessary to think why there should be a Karnataka. So when we see the conditions prevailing in other parts and the treatment imparted to Kannadigas in other parts of the States, it is really heart-burning to see what a step-motherly treatment these Kannadigas are getting in the hands of other Governments. So, as people from Mysore State who speak Kannada and since we have uniform language, it is but fair that we should extend a hand of friendship and welcome those friends who want to join us. Sir, we see today these Kannada-speaking people are so eager to join us, and I feel sorry or rather surprised that a long discussion is being continued here. This matter is prolonged for a long number of years and still it has not yet been finalised. I do not know whom I should blame for

this long delay, either the leaders of the Karnataka or the leaders of Mysore. If the leaders of Karnataka have not made an honest effort to form a Karnataka State, I think they should be blamed. If the leaders of Mysore State think that United Karnataka need not be formed, and the delay is due to them, the leaders of Mysore State should be blamed. But the present leader of the House, Hon'ble Sri K. Hanumanthaiya, is a man who has got a very good foresight and he is a man with full of wisdom. He said at Nanalnagar in January 1953 that the ice is cut and there should be linguistic provinces. Eight months after he made that statement, we saw the formation of Andhra Province, a province which was purely formed on the basis of language. Sir, some of my Hon'ble friends said that the formation of Andhra State was due not for linguistic reasons but from the point of administrative convenience. Sir, I beg to repudiate that statement on these grounds. The Central Government which has got its capital at New Delhi is able to administer from the Himalayas to Cape Comorin on one side and from Punjab to Bengal on the other. Sir, when a country could be administered throughout the length and breadth of India, is it difficult for a province to be administered from Vijayavada to Cape Comorin? The old Madras province including Andhra was being administered well for more than a century and a half. People have felt no difficulty so far as administration is concerned. But the reason for the formation of the Andhra province was this language problem, which was the main question. All Andhra people spoke Telugu. But the officers who went to rule them knew only Tamil or languages other than Telugu. So it was very difficult for those people to be able to move or to express their grievances or to get any aid from such officers. Because the population of Tamilians was greater in number, the officers who spoke Tamil were more in number. It was difficult for Telugu people to get what they wanted, to get all the amenities. So, it was absolutely necessary for these people to have a separate State, to have their own administration where they could have their own way of expressing things, to have their own administration in their own regional language. So the people of Andhra felt that it was a dire necessity to have a separate province separated from Madras. So, Sir, we see that the linguistic province of Andhra, a province for Telugu-speaking people was formed.

11-30 A.M.

And another argument was advanced to say that if the area was very big, it would not be possible to administer it. The Minister or the concerned authorities may not be able to tour all over the area and give proper administration. Sir, in these days when man is trying to control Nature, this distance is not the criterion. We have got means to travel thousands of miles in an hour and we can cover any distance within a short time. In fact, in those days when science had not advanced and we had no quick travelling facilities, it was difficult for the people to go to England. But if we make up our mind to-day to go to England, we have got such conveniences and facilities that we can reach England in a day or two. When we have controlled science to such an extent, the question of distance does not come in the way of expansion of territories.

Sir, the question of having two Karnatakas was also discussed. When people are anxious to join Mysore, I do not see any reason why we should not allow them to join us. Mysore is a progressive State. We have got the goodwill from all over India. In order to maintain that good name, we have to expand the boundaries of Mysore. Just like Bellary has joined us, we shall also extend our goodwill to other areas to join us. If we show such a gesture of goodwill, we shall maintain the fair name of Mysore State for ever and ever. Having two Karnatakas will be something like having two swords in one sheath and it would not be a profitable proposition.

Sir, one of the Hon'ble Members, Sri K. Puttaswamy has elaborately

(SRI M. PALANIYAPPAN.)

spoken on the under-developed areas of Karnatak State which want to join Mysore State. He just gave a long list of hospitals, veterinary dispensaries, and schools they have, roads and other things. These figures reveal only the state of affairs of those areas and it is to be regrerted that these areas are being neglected by the provinces to which they belonged. Now the time has come to us to go to their rescue by taking them into our fold, and develop those areas which are more backward than us. This argument may not be tenable to some of my Hon'ble friends. I would just like to bring one or two instances to their notice and convince them that those areas could be developed without any strain on our financial resources. The other day Sri Pandit Nehru, the Prime Minister, made a long statement about the importance of Indians in South Africa. Though the people of South Africa are there for several centuries, yet they belonged to Indian soil. They have gone and settled there. The treatment that is meted out to them in South Africa is very heart-burning one. So, our Prime Minister has gone to their rescue just because they are Indians. He has rightly felt that it was his duty to take up their cause and he is fighting for their cause. So also in Ceylon. You see the people there are all Tamilians. They are being ill-treated by the Ceylon Government and they are being driven out from Ceylon. Our Prime Minister has contacted the Prime Minister of Ceylon on this vital question of treatment of Indians in Ceylon and he has advised him not to treat the Indians in the way in which they are now being treated. Why has he done? Is it because they are connected with him? No. It is because they are Indians; because they speak our language and so on. Similarly if we see any Kannadiga is being treated badly by a non-kannadiga, it is but right to go to his rescue. They should be given a chance to join us. Therefore the formation of a Karnatāka State on linguistic basis is a feasible one. I would strongly urge that this Kannada State should be formed or the States should be reorganised on linguistic basis. It is going to be done and it is going to happen in the immediate future. Today we see in the State of Bombay, people speaking Marati, people who speak Hindi, people who speak Kannada and other languages. If we just go and see the Assembly of Bombay State, we can see the members speaking all kinds of languages. It is something like variety entertainment. What one man speaks may not be understood by another man. When such is the condition, how is it possible to impart justice to the people in a democratic State? We should think about it deeply. We should not have any caste, creed or colour except language. Language is the only media through which we should adjust our territory. A man who speaks Telegu or Kannada or any other language, should forget for a moment that he is a Brahmin or a Mudaliyar or a Naidu or a Vokkaligar. He should sink his differences that he is Kannadiga. In a secular State we should think all as one. We can never wipe out the caste system. It is but fair that in a secular State, when we have taken allegiance to the Constitution of India, wherein it has been clearly stated that there should be one race, one religion, it is but necessary that we should form a linguistic State. We had postponed this issue for the last 7 years. Now the time has come for every one of us to adjust ourselves and implement the provisions of the Constitution word by word and I would request every Hon'ble Member of this House to avoid all differences, if any, and to give consent for the formation of a Karnatak State.

Sir, with regard to the natural resources, we have got a lot of resources in these Kannada-speaking areas. Some friends have stated that by taking those areas, our State will have a huge deficit budget. I think those people are also to be taxed and none of those people who come from these Kannada areas refuse to pay any tax which may be imposed upon them. They are prepared to pay taxes just like other Mysoreans are paying. In order to develop those undeveloped

areas the people of those areas might be taxed, and those people would never stint to pay taxes.

Further, Sir, I may assure this Hon'ble House that the Kannada people will never demand locating the capital of Mysore either at Hubli, Dharwar or Davanagere except Bangalore City. Because Bangalore is a beautiful place and has a very salubrious climate. Those people will never try to shift the capital to Davanagere. In Bangalore, it is quite possible to have Parliamentary Sessions instead of Delhi. It is going to become one of the important Cities of the World. After the completion of the Vidhana Soudha, we will be having a very beautiful building. Naturally no Kannadiga would try to have the capital City in Davanagere. Let not my other friends think that Bangalore City would be completely neglected or ignored. On the other hand, every Kannadiga will have greater love and greater attraction for Bangalore than for Davanagere or Hubli.

Mr. SPEAKER.—Bangalore may attract even Delhi.

Sri M. PALANIYAPPAN.—Then we will have Delhi as our Capital. We shall expand Karnatak State up to Delhi. Less number of schools, hospitals or small dispensaries or maternity homes, are not the criterion to form a State. If we just make up our mind, tomorrow we can build any number of schools. In those places, we have got big business magnates, persons blessed with great wealth and people of philanthropic outlook. If we just approach them for constructions of these schools and dispensaries, they will be prepared to build any number of hospitals, high schools or dispensaries. Sir, when States like Hyderabad, Rajasthan, Travancore-Cochin, Mysore State have merged with the Union Government and when the Karnatak State is also formed, the question of big State would not exist independently. It is natural they should also join with us, because they cannot resist the current of feelings that is being exhibited by the people.

Further, I would just like to bring to you notice that by having a Karnatak State, we will be having a sea-port and we will have about 200 miles of sea-coast running on the borders of our State. By having a sea-port, we could improve our trade and commerce and we could have shipping facilities. We could have a shipyard in our State. We could also collect a lot of customs duty from the sea-port and thus augment our financial resources. Even without Karnataka and other things, we are already having a deficit of nearly Rs. 4 crores. After the inclusion of those areas, the deficit might be Rs. 5 crores, but that does not matter when compared to the advantages that would accrue to us by having those areas. If all the Kannadigas are joined together, we will be free to express our feelings in the same common mother tongue instead of speaking in Hindi, Gujarati or in any other language. In our democratic State we must have freedom to express our ideas in our own mother tongue. We cannot expect people to talk such and such language. When Bills or Acts are framed, it is for him to answer in his mother tongue or in his own language.

With these few words, I would earnestly appeal to every Hon'ble Member here to support the Karnatak movement for the reasons mentioned by me. We know that injustice is being done to these Kannada-speaking areas; it is but fair that we should take them into our fold and form a Karnatak State. . . .

*ಶ್ರೀ ಜಿ. ಎಸ್. ಬೊಮ್ಮೆಗೌಡ (ಮಂಡ್ಯ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಂದಿರತಕ್ಕ ಶೇಷಾದ್ರಿ ಸಮಿತಿಯವರ ವರದಿಯಮೇಲೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಮುಂಚಿತವಾಗಿ ನಾವು 32,000 ಚದರ ಮೈಲಿಯಲ್ಲಿರತಕ್ಕ ಮೈಸೂರಿನ ಮಾನವ ಕೋಟಿಯ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೆಂಬುದನ್ನು ಯಾವ ವಿಧದಲ್ಲೂ ಮರೆಯಬಾರದು. ಆ ರೀತಿ ಭಾವಿಸಿಕೊಂಡು ಮಾತನಾಡುತ್ತಾ, ಕೆಲವು ಸ್ನೇಹಿತರು ಮೈಸೂರು ಬಹಳ ಮಟ್ಟಿಗೆ ಪ್ರಗತಿ ಸಾಧಿಸಿದೆ, ಇಲ್ಲಿ ಬೇಕಾದಷ್ಟು ಅನುಕೂಲತೆಗಳಿವೆ, ಯಾರು ನಮ್ಮ ಜೊತೆಯಲ್ಲಿ ಸೇರಬೇಕೆಂದು ಹೇಳುತ್ತಾರೋ ಅವರು ಸೇರಿದರೆ ನಮ್ಮ ಪ್ರಗತಿ ಕುಂಠಿತವಾಗುತ್ತದೆಂದು ಅಭಿಪ್ರಾಯಪಡುತ್ತಿದ್ದಾರೆ. ಆದರೆ, ಮಾನ್ಯ ಸ್ನೇಹಿತರು ಹೇಳಿದಹಾಗೆ ಎಲ್ಲ ಅನುಕೂಲತೆಗಳೂ, ಐಶ್ವರ್ಯಗಳೂ ನಮಗಿದ್ದರೆ ಅವರನ್ನು ಸ್ವಾಗತಿಸುವವರಲ್ಲಿ ನಾನು

(ಶ್ರೀ ಜಿ. ಎಸ್. ಬೊಮ್ಮೇಗೌಡ.)

ಮೊದಲನೆಯವನಾಗುತ್ತಿದ್ದೆ. ಆದರೆ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಮುಖ್ಯವಾಗಿ ಯಾರ ಭವಿಷ್ಯವನ್ನು ನಿರ್ಧರಿಸಲು ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೋ ಅವರ ಹಿತಚಿಂತನೆಯನ್ನು ನಾವು ಗಮನದಲ್ಲಿಡಬೇಕು. ಮಾನ್ಯ ಸ್ನೇಹಿತರುಗಳಿಗೆಲ್ಲರಿಗೂ ಗೊತ್ತಿರುವಹಾಗೆ ಇಂದು ಪ್ರಶ್ನೋತ್ತರಗಳಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಕೋಮಿಗೆ ಎಷ್ಟೆಷ್ಟು ಪ್ರಾತಿನಿಧ್ಯಕೊಟ್ಟಿದೆಯೆಂದು ಕೇಳಿ ಅದರ ಯುಕ್ತಾಯುಕ್ತತೆಯನ್ನು ಪ್ರಶ್ನಿಸುವುದನ್ನು ಕಂಡಿದ್ದೇವೆ. ಆದ್ದರಿಂದ ಮೂಲ ಕೋಮುಯಾವುದು, ಯಾವುದಕ್ಕೆ ಹೆಚ್ಚಿಗೆ ಪ್ರಾತಿನಿಧ್ಯ ದೊರಕಿಸಿಕೊಡಬೇಕೆಂಬುದನ್ನು ನಾವು ಈಗ ಪರಿಗಣಿಸಬೇಕಾಗಿದೆ. ನಮ್ಮ ದೇಶದಲ್ಲಿ ಕೆಲವರು ಸುಖದಲ್ಲೇ ಹುಟ್ಟಿ ಸುಖದಲ್ಲಿಯೇ ಬೆಳೆದು, ಸುಖದಲ್ಲಿ ತೇಲಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಇನ್ನೊಂದು ಭಾಗದ ಜನರು ಕಷ್ಟದಲ್ಲಿ ಹುಟ್ಟಿ, ಕಷ್ಟದಲ್ಲಿ ಬೆಳೆದು, ಕಷ್ಟದಲ್ಲಿ ಸಾಯುತ್ತಿದ್ದಾರೆ. ಜೀವನದಲ್ಲಿ ಸುಖವೆಲ್ಲಿದೆಯೆಂದು ಕಾಣದಿರುವ ಬಹುಭಾಗದ ಜನ ನಮ್ಮ ದೇಶದಲ್ಲಿದ್ದಾರೆ. ನಮ್ಮವರು ಎಷ್ಟು ಕಷ್ಟಪಟ್ಟು ಈ ದೇಶವನ್ನು ಕಟ್ಟಿದ್ದಾರೆ ಅನ್ನುವುದನ್ನು ನಾವು ಪ್ರತಿಕ್ಷಣದಲ್ಲೂ ನೆನಸಿಕೊಳ್ಳಬೇಕಾಗಿದೆ. ಈ ದಿವಸದ ಪ್ರಶ್ನೆಯನ್ನು ನಾವು ನಿರ್ಧರಮಾಡಬೇಕಾಗಿದ್ದರೆ ಇದನ್ನು ಯಾವ ದೃಷ್ಟಿಯಿಂದ, ಯಾವ ರೀತಿಯಾಗಿ ಬಗೆಹರಿಸಿದರೆ ನಮಗೆ ಬರತಕ್ಕಂಥ ತೊಂದರೆಗಳೆಲ್ಲಾ ನಿವಾರಣೆ ಯಾಗುತ್ತವೆ ಅನ್ನುವುದನ್ನು ನಾವೀಗ ಮುಖ್ಯವಾಗಿ ಪರ್ಯಾಲೋಚನೆ ಮಾಡಬೇಕಾಗಿದೆ. ಶ್ರೀ ಪಿ. ಆರ್. ರಾಮಯ್ಯನವರು ಇದರಬಗ್ಗೆ ಬಹಳವಾಗಿ ಹೇಳಿದ್ದಾರೆ. ಅಮೇರಿಕಾ ದೇಶದಲ್ಲಿ 18 ಕೋಟಿ ಜನಸಂಖ್ಯೆಯಿದ್ದರೂ ಅವರೆಲ್ಲರೂ ಒಂದೇ ಭಾಷೆಯಲ್ಲಿ ಮಾತನಾಡತಕ್ಕಂಥ ಜನರಾಗಿದ್ದಾರೆ—ಆದರೂ ಅಲ್ಲಿ ರಾಜ್ಯಾಡಳಿತದ ದೃಷ್ಟಿಯಿಂದ ಬೇರೆ-ಬೇರೆ ರಾಜ್ಯಗಳನ್ನು ಮಾಡಿದ್ದಾರೆ. ಹಾಗೆ ಒಂದು ಭಾಷೆಯನ್ನಾಡತಕ್ಕ ಜನರೆಲ್ಲಾ ಒಂದೇ ರಾಜ್ಯದಲ್ಲಿರಬೇಕೆಂದು ಹೇಳುವುದಾಗಿದ್ದರೆ ಆ ಅಮೇರಿಕಾ ದೇಶದಲ್ಲಿ ಈ ದಿವಸ ಆ 48 ಸ್ಟೇಟುಗಳು ಇರಬೇಕಾದ್ದಿರಲಿಲ್ಲ. ಒಂದು ಭಾಷೆ ಆಡತಕ್ಕವರೆಲ್ಲಾ ಒಂದೇಕಡೆ ಇರಬೇಕೆಂಬ ನಿಯಮವೇನೂ ಇಲ್ಲ. ನಮ್ಮ ಹಿರಿಯರಾದರೂ 'ಬದುಕಿ ಬಾಳಿದವರನ್ನೆಲ್ಲಾ ನೋಡಿ ನಾವೂ ಅವರಂತೆ ಬಾಳಬೇಕು' ಅಂತ ಹೇಳುತ್ತಿದ್ದರೇ ವಿನಾ ಒಂದು ಭಾಷೆಯಾಡತಕ್ಕವರೆಲ್ಲಾ ಒಂದೇಕಡೆ ಇರಬೇಕೆಂದೇನೂ ಹೇಳಿರುವುದಿಲ್ಲ. ಮುಂದೆ ನಮ್ಮ ರಾಜ್ಯಗಳನ್ನು ನಾವು ಅನುಷ್ಠಾನಕ್ಕೆ ತರುವಾಗ ನಾವು ನಮ್ಮ ಹಿರಿಯರು ಹೇಳುತ್ತಿದ್ದಂಥ ವಚನದ ಪ್ರಕಾರ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಶ್ರೀ ಪಿ. ಆರ್. ರಾಮಯ್ಯನವರು ಹಿಂದೂ ಧರ್ಮ, ಹಿಂದೂ ಸಂಸ್ಕೃತಿಗಳ ವಿಚಾರವಾಗಿ ಬಹಳ ಹೇಳಿದರು. ಆದರೆ ಈ ದಿವಸವೂ ಸಹ ನಾವು ಯಾರೇ ಆಗಲಿ ಒಂದು ಒಳ್ಳೆಯ ಕಾರ್ಯವನ್ನು ಮಾಡಬೇಕೆಂದು ಹೇಳುವಕಾಲದಲ್ಲಿ ಒಂದು ಒಳ್ಳೆಯ ಶಕುನ ಅದಕ್ಕೆ ಆಗಬೇಕಾದ್ದು ಅಗತ್ಯ ಅನ್ನತಕ್ಕಂಥ ಒಂದು ಸಾಂಪ್ರದಾಯ ನಮ್ಮೆಲ್ಲರಲ್ಲೂ ಬೆಳೆದುಕೊಂಡು ಬಂದಿದೆ. ಆದರೆ ಈ ದಿವಸ ಇಲ್ಲಿ ಚರ್ಚೆನಡೆಯುತ್ತಿರುವ ಕಾಲದಲ್ಲಿ ಏನೇನು ಪದಗಳ ಪ್ರಯೋಗವಾಗುತ್ತಿವೆ, ಚರ್ಚೆಯು ಯಾವ ವಿರೋಧ ಮಟ್ಟದಲ್ಲಿ ನಡೆಯುತ್ತಿದೆ, ಯಾರಯಾರ ಮುಖ ಹೇಗೆ ಆಗಿರುತ್ತವೆ ಅನ್ನುವುದನ್ನು ನೋಡಿದರೆ ಇದರ ಲಕ್ಷಣ ಹೇಗಿದೆ ಅನ್ನುವುದು ಗೊತ್ತಾಗುತ್ತದೆ. ಈ ವಿಷಯವನ್ನು ಮಾತನಾಡುತ್ತಿರುವಾಗ ಹೀಗೆ ಭಿನ್ನಾಭಿಪ್ರಾಯಗಳು ಉದ್ಭವಿಸುವುದರಿಂದ ಈ ವಿಷಯ ಎಂಥಾದ್ದು ಅನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ನಮ್ಮ ದೇಶದಲ್ಲಿರತಕ್ಕಂಥ ದೀನದರಿದ್ರತೆಯು ತೊಲಗುವವರೆಗೂ ಈ ಆಡಳಿತದ ವ್ಯವಸ್ಥೆಯು ಒಂದು ಅಚ್ಚುಕಟ್ಟಾದ ಚೌಕಟ್ಟಿನೊಳಗೇ ಇರಬೇಕಾದ್ದು ಅತ್ಯಗತ್ಯ. ಈಗಾಗಲೇ ನಮ್ಮ ದೇಶದ ಜನಸಂಖ್ಯೆ ಹೆಚ್ಚಾಗುತ್ತಾ ಬಂದಿದೆ. ಒಂದೊಂದು ಸಂಸಾರದಲ್ಲಿ ಎಷ್ಟೆಷ್ಟು ಜನರಿರಬೇಕು, ಈ ದಿವಸ ಪ್ರತಿಯೊಂದು ಸಂಸಾರದಲ್ಲೂ ಎಷ್ಟು ಜನಗಳಿರುತ್ತಾರೆ ಅನ್ನುವುದಕ್ಕೆ ಹೋಲಿಕೆ ಹಾಕಿ ನೋಡಿದರೆ ಒಂದಕ್ಕೊಂದಕ್ಕೆ ಅಜಗಜಾಂತರ ವ್ಯತ್ಯಾಸವಿದೆ. ಈ ದಿವಸ ಇಂಥ ಒಂದೊಂದು ದೊಡ್ಡ ಕುಟುಂಬದಲ್ಲಿ ಇರುವಂಥ ಪ್ರತಿಯೊಬ್ಬ ವ್ಯಕ್ತಿಯೂ ಹೊಟ್ಟೆತುಂಬಾ ಊಟಮಾಡಿಕೊಂಡು ವಾಸಮಾಡಲು ಆ ಕುಟುಂಬದಲ್ಲಿರತಕ್ಕವರೆಲ್ಲರಿಗೂ ಒಂದು ಸರಿಯಾದ ಸಂಪಾದನೆಯ ಮಾರ್ಗವಿದೆಯೇ ಅಂದರೆ ಅಂಥಾದ್ದು ಯಾವುದೂ ಇದ್ದಹಾಗೆ ಕಂಡುಬರುವುದಿಲ್ಲ. ಅದಕ್ಕಾಗಿಯೇ ಪ್ರತಿಯೊಂದು ದೊಡ್ಡದೊಡ್ಡ ಕುಟುಂಬವೂ ಈ ದಿವಸ ತಮ್ಮ ಜೀವನೋಪಾಯಕ್ಕಾಗಿ ಬಹಳ ಕಷ್ಟಪಡಬೇಕಾಗಿದೆ. ಆದಾಗ್ಯೂ ಈ ದಿವಸ ನಮ್ಮ ಸರ್ಕಾರದ ಆಡಳಿತ ಒಂದು ಚೌಕಟ್ಟಿನಲ್ಲಿರುವುದರಿಂದ ಈ ಸಂಸಾರಗಳೆಲ್ಲಾ ಬಹಳ ಕಷ್ಟದಿಂದ ಪ್ರಗತಿದಾಯಕವಾದ ಮಾರ್ಗದಲ್ಲಿ ನಡೆದುಕೊಂಡು ಬರುತ್ತಿರುವುದನ್ನು ನಾವೆಲ್ಲರೂ ನಮ್ಮ ಕಣ್ಣ ಮುಂದೆ ಈ ದಿವಸ ನೋಡಬಹುದಾಗಿದೆ. ಈ ರಾಜ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ಈಗಾಗಲೇ ನನ್ನ ಅನೇಕ ಮಾನ್ಯ ಸ್ನೇಹಿತರು ಅನೇಕ ಸಮಸ್ಯೆಗಳನ್ನು ಸಭೆಯಮುಂದಿಟ್ಟಿರುತ್ತಾರೆ. ಮತ್ತು ಕೆಲವು ಮಾನ್ಯ ಸದಸ್ಯರು ಇದನ್ನು ಏತಕ್ಕಾಗಿ ಹೀಗೆ ಒತ್ತಾಯ ಮಾಡುತ್ತಿದ್ದಾರೆ ಅನ್ನುವುದನ್ನೂ ಕೂಡ ತಿಳಿಸಿದ್ದಾರೆ. ಆದರೆ ಈ ದಿವಸ ಈ ಭಾಷಾ ದೃಷ್ಟಿಯಿಂದಲೇ ಅಗಲೀ ಅಥವಾ ಮತ್ತ್ಯಾವ ದೃಷ್ಟಿಯಿಂದಲೇ ಆಗಲೀ ಈ ಕರ್ಣಾಟಕ ಏಕೀಕರಣವಾಗಬೇಕೆಂದು ಹೇಳುತ್ತಿರುವ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನೆಂದು ನಾವು ಜನರನ್ನು ಕೇಳಿದರೆ—ಒಬ್ಬ ಸಾಮಾನ್ಯ ಬಡವನಾಗಿರತಕ್ಕಂಥ ಮನುಷ್ಯ ಏನು ಹೇಳುತ್ತಾನೆಂದರೆ, ಸ್ವಾಮಿ; ದೇಶದಲ್ಲಿ ತಿನ್ನುವುದಕ್ಕೆ ಅನ್ನ, ಉಡುವುದಕ್ಕೆ ಬಟ್ಟೆ, ವಾಸಕ್ಕೆ ಮನೆ, ಇಷ್ಟಿದ್ದರೆ ನಮಗೆ ಸಾಕೇ ಹೊರತು ನಮಗೆ ಮತ್ತೇನೂ ಬೇಡ ಅಂತ ಹೇಳುತ್ತಾನೆ. ಈ ದಿವಸ ನಮ್ಮ ದೇಶದಲ್ಲಿರತಕ್ಕಂಥ ಜನರೆಲ್ಲಾ ಇದೇ ಅಭಿಪ್ರಾಯವನ್ನುಳ್ಳವರಾಗಿದ್ದಾರೆ. ನಮ್ಮ ದೇಶದಲ್ಲಿ ಜನತೆಯ ಅಭಿಪ್ರಾಯ ಹೀಗಿರುವಾಗ ಆ ಬ್ರಿಟಿಷರು ಇಲ್ಲಿ ಆಡಳಿತ ನಡೆಸುತ್ತಿದ್ದಾಗ ಅವರು ಈ ರಾಜ್ಯಗಳ ವಿಸ್ತೀರ್ಣದ ಒಂದು ವ್ಯಾಮೋಹಕ್ಕೆ ಹೇಗೆ ಗುಲಾಮರಾಗಿ ಬಲಿಬಿದ್ದಿದ್ದರೋ ಹಾಗೆ ನಾವೀಗ ಈ ಭಾಷಾಭಿಮಾನದ ವ್ಯಾಮೋಹಕ್ಕೆ ಬಲಿಬಿದ್ದು ಇದಕ್ಕೆ ನಾವು ಗುಲಾಮರಾಗಬಾರದು, ಅಂಥಾ ಸ್ಥಿತಿ ಬರಬಾರದು ಅಂತ ಅಭಿಪ್ರಾಯ ಪಡತಕ್ಕವರಲ್ಲಿ ನಾನೊಬ್ಬನಾಗಿದ್ದೇನೆ. ಆದರೆ ನನ್ನ ಅಭಿಪ್ರಾಯ ನಾವೇ ಬೇರೆ ಆ ಕನ್ನಡ ಬಂಧುಗಳೇ ಬೇರೆ ಅಂತ ಹೇಳುವುದಿಲ್ಲ. ನಮ್ಮ ಅವರ ಎಲ್ಲರ ಕ್ಷೇಮವೂ ಒಂದೇ. ಆದರೆ ಈ ದಿವಸ ನಾವು ಈ ಭಾಷಾ ಪ್ರಗತಿಗೋಸ್ಕರವಾಗಿಯೇ ಈ ಕರ್ಣಾಟಕ ರಾಜ್ಯ ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಒಂದೇ ಜಾತಿಗೆ ಸೇರದೇ ಇದ್ದಾಗ್ಯೂ ಇವುಗಳಲ್ಲಿ ವ್ಯತ್ಯಾಸವಿದ್ದರೂ ಈ ವ್ಯಾಜ್ಯಗಳನ್ನು ನಡೆಸತಕ್ಕಂಥ ಕೋರ್ಟುಗಳಲ್ಲಿ

ಯಾವ ವ್ಯತ್ಯಾಸವೂ ಇಲ್ಲ ಅಂತ ಹೇಳಿದಹಾಗೆ ಈ ವಿಚಾರವೂ ಇರುತ್ತದೆ. ನಾವು ಈ ವಿಷಯವನ್ನು ಇಷ್ಟೊಂದು ಕಡ್ಡಾಯವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ರಾಜ್ಯಾಡಳಿತದ ಹಿತದೃಷ್ಟಿಯಲ್ಲಿ ಈಗಾಗಲೇ ಶ್ರೀ ಡಿ. ದೇವರಾಜ ಅರಸ್ ನವರು ಹೇಳಿರುವಂತೆ ಆಡಳಿತದ ಪ್ರದೇಶ ಎಷ್ಟು ಚಿಕ್ಕದಾಗಿದ್ದರೆ ಆಡಳಿತ ಅಷ್ಟೂ ಚೆನ್ನಾಗಿ ನಡೆದುಕೊಂಡು ಹೋಗಲು ಅವಕಾಶವಾಗುತ್ತದೆ. ಇಂಥ ಪ್ರಾಮುಖ್ಯವಾದ ವಿಷಯಗಳನ್ನು ಪರಿಗಣಿಸದೆ ಇಲ್ಲಿ ಹೇಗೆ ಪ್ರಕೃತಿ ಸಂಪತ್ತಿದೆಯೋ ಅಲ್ಲಿಯೂ ಪ್ರಕೃತಿ ಸಂಪತ್ತಿದೆ ಅಂತ ಹೇಳುತ್ತಿದ್ದಾರೆ. ಆದರೆ ಅಂಥ ಸಂಪತ್ ಸಾಧನಗಳನ್ನೆಲ್ಲಾ ಮಾನವನ ಕಲ್ಯಾಣಕ್ಕಾಗಿ ಅಳವಡಿಸಿಕೊಂಡು, ನಾವೂ, ಅವರೂ ಸೇರಿ ಅಭಿವೃದ್ಧಿ ಹೊಂದೋಣ ಅನ್ನತಕ್ಕಂಥ ಮನೋಭಾವವೇನೋ ಬಹಳ ಅಮೋಘವಾದದ್ದೇ ಹೌದು. ಆದರೆ ಅದಕ್ಕಾಗಿ ನಾವೀಗ ಒಂದೊಂದು ರಾಜ್ಯದ ಎಲ್ಲೆಯನ್ನೂ ಕೇವಲ 50 ಲಕ್ಷಕ್ಕಾಗಲೀ ಅಥವಾ 30 ಲಕ್ಷ ಜನಸಂಖ್ಯೆಗಾಗಲೀ ಮಾಡುವುದು ಬೇಡ. ಆದರೆ ನಾವು ಈ ಹಿಂದೆ ಸ್ವಾತಂತ್ರ್ಯ ಸಂಪಾದನೆಯ ಕಾಲದಲ್ಲಿ ಒಂದುಕೋಟಿ ಪ್ರಜಾ ಸಂಖ್ಯೆಗೆ ಒಂದು ಸ್ಟೇಟ್ ಇರುವಂತೆ ಈ ರಾಷ್ಟ್ರಗಳ ಪುನರ್ನಿರ್ಮಾಣ ಮಾಡೋಣವೆಂದು ಏನು ನಾವುಗಳೊಂದು ಗುರಿಯನ್ನು ಇಟ್ಟುಕೊಂಡಿದ್ದೆವೋ ಅದಕ್ಕನುಸಾರವಾಗಿ ಈಗ ನಡೆಯೋಣ. ಒಂದು ಕೋಟಿ ಪ್ರಜಾ ಸಂಖ್ಯೆಗೆ ಒಂದು ರಾಜ್ಯವಿರತಕ್ಕದ್ದು ಯುಕ್ತವೆಂಬುದಾಗಿ ಈಗ ಈ ಮಾನ್ಯ ಸಭೆಯೂ ಅಭಿಪ್ರಾಯಪಟ್ಟಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ-ಆನೆಕಲ್).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಗಾಗಿ ಇಟ್ಟಿರತಕ್ಕಂಥ ಈ ಶೇಷಾದ್ರಿ ವರದಿಯ ಸಂಬಂಧದಲ್ಲಿ ಈಗ ಈ ನಮ್ಮ ಮೈಸೂರು ದೇಶ ವಿಶಾಲವಾಗಬೇಕೇ ಅಥವಾ ಈ ನಮ್ಮ ಮೈಸೂರು ಮುಂದೆಯೂ ಹೀಗೆಯೇ ಇರಬೇಕೇ ಅನ್ನುವುದು ಚರ್ಚೆಯಾಗುತ್ತಿದೆ. ಈ ವಿಷಯದಲ್ಲಿ ಈಗಾಗಲೇ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರುಗಳನೇಕರು ಪರವಾಗಿಯೂ ಮತ್ತು ವಿರೋಧವಾಗಿಯೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ದೇಶ ವಿಶಾಲವಾಗಬೇಕೆಂಬ ಅಭಿಪ್ರಾಯದಲ್ಲಿ ಕೆಲವು ಮಾನ್ಯ ಸದಸ್ಯರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಬಹಳ ಆಶ್ಚರ್ಯವಾಗುತ್ತದೆ. ಈ ದಿವಸ ಆಡಳಿತ ದೃಷ್ಟಿಯಿಂದಲೂ ಕೂಡ ಮೈಸೂರು ವಿಶಾಲವಾದರೆ ಅಂಥ ಅಡಚಣೆಗಳೇನೂ ಆಗುವುದಿಲ್ಲವೆಂಬುದನ್ನು ನಮ್ಮ ಇಂದಿನ ಚರಿತ್ರೆಯೇ ಹೇಳುತ್ತದೆ ಈ ದಿವಸ ನಮ್ಮ ಜನರ ಬೆಂಬಲ ಆ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಇಲ್ಲದಿರುವುದರಿಂದ ನಾವು ನಮ್ಮ ದೇಶಾಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಅನುಕೂಲತೆಗಳನ್ನು ಪಡೆಯುವುದಕ್ಕಾಗದಿರುವುದೇ ದೇಶದ ದುರ್ಗತಿಗೆ ಮುಖ್ಯ ಕಾರಣ. 500 ಜನರು ಇರತಕ್ಕಂಥ ಪಾರ್ಲಿಮೆಂಟಿನಲ್ಲಿ ಮೈಸೂರಿನಿಂದ ಹೋಗತಕ್ಕಂಥವರ ಸಂಖ್ಯೆ 13-14 ಮಾತ್ರ ಇರುವುದರಿಂದ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಪ್ರಭಾವವನ್ನು ಬೀರುವುದಕ್ಕಾಗಿಲ್ಲ. ಇದಕ್ಕೆ ಬದಲಾಗಿ ಈ ದಿವಸ ಆ ಪಾರ್ಲಿಮೆಂಟಿಗೆ ನಮ್ಮ ದೇಶದಿಂದ 30-40 ಜನ ಸದಸ್ಯರು ಹೋಗಿ ಕುಳಿತುಕೊಳ್ಳುವುದಕ್ಕೆ ಒಂದು ಅವಕಾಶ ಸಿಕ್ಕಿದೆ. ಈಗ ನಮ್ಮ ದೇಶಾಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಯುವಂತೆ ಆ ಪಾರ್ಲಿಮೆಂಟ್ ಮುಂದೆ ಒತ್ತಾಯ ಮಾಡಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯಗಳನ್ನು ಪಡೆಯುವುದಕ್ಕೆ ಅವಕಾಶವಿರುತ್ತಿತ್ತು. ಈ ಒಂದು ಮುಖ್ಯ ಕಾರಣಕ್ಕಾಗಿ ವಿಶಾಲ ಮೈಸೂರು ಆಗಲೇಬೇಕಾಗಿದೆ ಎಂದು ಹೇಳಬಹುದಾಗಿದ್ದೆ. ಆದರೆ ಕೆಲವು ಮಹನೀಯರು ಈಗ ಸಧ್ಯಕ್ಕೆ ನಮ್ಮ ಮೈಸೂರು ಹೀಗೆ ವಿಶಾಲವಾಗುವುದೇನೂ ಬೇಡ ; ಈಗ ಎಷ್ಟು ವಿಸ್ತೀರ್ಣವಿದೆಯೋ ಅಷ್ಟೇ ಸಾಕು ; ವಿಸ್ತೀರ್ಣದಲ್ಲಿ ಎಷ್ಟು ಚಿಕ್ಕದಾಗಿದ್ದರೆ ದೇಶ ಅಷ್ಟೂ ಬೇಗ ಬೇಗ ಮುಂದುವರೆಯಲು ಸಾಧ್ಯವಾಗುತ್ತದೆ; ದೇಶ ವಿಲೀನಿಕರಣವಾದರೆ ನಮ್ಮ ಜನರಿಗೆ ಅನುಕೂಲತೆಗಳು ಮುಂದೆ ಕುಂಠಿತವಾಗಬಹುದು ಅನ್ನತಕ್ಕಂಥಾ ಒಂದು ವಾದವನ್ನು ಈಗ ನಮ್ಮ ಮುಂದಿಟ್ಟಿದ್ದಾರೆ. ಆದರೆ ಈ ವಿಷಯದಲ್ಲಿ ಈಗ ನನ್ನ ಅಭಿಪ್ರಾಯವೇನಿದೆ ಅನ್ನುವುದನ್ನು ನಾನೀಗ ಹೇಳಬಯಸುತ್ತೇನೆ. ಈ ದಿವಸ ಮೈಸೂರು ದೇಶ ಬಹಳ ಬಾಬುಗಳಲ್ಲಿ ಮುಂದುವರೆದಿದೆ, ಪ್ರಗತಿ ಹೊಂದಿದೆ. ವಿಸ್ತೀರ್ಣದಲ್ಲಿ ದೇಶ ಚಿಕ್ಕದಾಗಿದ್ದುದರಿಂದ ನಮ್ಮ ಮೈಸೂರು ಇಷ್ಟು ಮುಂದುವರಿದಿದೆ ಅಂತ ಹೇಳಿದರೆ ನಾನು ಅದನ್ನು ಒಪ್ಪಲಾರೆ. ಈ ಮೈಸೂರಿನ ಏಳಿಗೆಗಾಗಿ ಯದುವಂಶದ ರಾಜಮನೆತನದವರು ಬಹಳ ಸಹಾಯ ಮಾಡಿದ್ದಾರೆ. ಅಷ್ಟೇ ಅಲ್ಲದೆ ಹಿಂದಿನಿಂದಲೂ ಬಹಳ ದಕ್ಷರೂ ಮತ್ತು ಚತುರರೂ ಆದಂಥ ದಿವಾನರುಗಳ ಆಡಳಿತಕ್ಕೆ ನಮ್ಮ ದೇಶ ಒಳಪಟ್ಟಿದ್ದುದರಿಂದಲೂ ಈ ದಿವಸ ನಮ್ಮ ಸಂಸ್ಥಾನ ಇಷ್ಟು ಪ್ರಗತಿ ಮಾರ್ಗದಲ್ಲಿರುವುದಕ್ಕೆ ಕಾರಣವಾಯಿತೆಂದು ನನ್ನ ಅಭಿಪ್ರಾಯ. ಈ ನಮ್ಮ ಮೈಸೂರು ದೇಶ ಈಗಿರುವುದಕ್ಕಿಂತಲೂ ಇನ್ನೂ ಸ್ವಲ್ಪ ದೊಡ್ಡದಾಗಿದ್ದಿದ್ದರೆ ಆಗ ನಮ್ಮ ರಾಜಮನೆತನದವರು ಈ ದೇಶವನ್ನು ಇಷ್ಟೊಂದು ಮುಂದಕ್ಕೆ ತರುತ್ತಿರಲಿಲ್ಲ ಎಂದು ಹೇಳುವುದಕ್ಕಾಗುತ್ತಿರಲಿಲ್ಲ. ಹೀಗಿದ್ದರೂ ಈ ನಮ್ಮ ಮೈಸೂರು ಈಗ ಇರುವುದಕ್ಕಿಂತಲೂ ಇನ್ನೂ ದೊಡ್ಡದಾಗಿದ್ದಿದ್ದರೆ ಇದೇ ರೀತಿಯಾಗಿ ದೇಶವನ್ನು ಪ್ರಗತಿ ಮಾರ್ಗದಲ್ಲಿ ತರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೆಂಬುದಾಗಿ ಆ ಶೇಷಾದ್ರಿ ಸಮಿತಿಯವರು ಹೇಳಿರತಕ್ಕದ್ದರಲ್ಲಿ ಸತ್ಯಾಂಶವೆಷ್ಟರಮಟ್ಟಿಗಿದೆ ಅನ್ನುವುದನ್ನು ನಾನೀಗ ಕೂಲಂಕಷವಾಗಿ ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ವರದಿಯಲ್ಲಿ ಹೇಳಿರುವಂತೆ ಎಲ್ಲಾ ವಿಷಯಗಳಲ್ಲೂ ನಮ್ಮ ಮೈಸೂರು ಮುಂದಿದೆ ಅಂತ ಹೇಳಿರುವುದು ನಿಜವಲ್ಲ. ಆ ನಮ್ಮ ಹೊರಗಿರತಕ್ಕಂಥಾ ಕನ್ನಡ ಪ್ರದೇಶಗಳಲ್ಲಿ ಈ ಶೇಷಾದ್ರಿ ಸಮಿತಿಯ ವರದಿ ಎಷ್ಟು ಹೇಳಿದೆಯೋ ಅದಕ್ಕಿಂತಲೂ ಹೆಚ್ಚಾಗಿ ಆ ಭಾಗಗಳು ವೈದ್ಯ ಸೌಕರ್ಯ ಮತ್ತು ವಿದ್ಯಾಭ್ಯಾಸದಲ್ಲಿ ಮತ್ತು ಮಾರ್ಗಾನುಕೂಲತೆಗಳಲ್ಲಿ ಮುಂದೆ ಹೋಗಿರುತ್ತವೆ. ವಿದ್ಯಾಭ್ಯಾಸ ಅನ್ನುವುದು ದೇಶದ ನಾಗರೀಕತೆಯನ್ನು ಅಳತೆ ಮಾಡುವಂಥಾ ಅಳತೆಗೋಲು. ನಮ್ಮ ದೇಶ ವಿದ್ಯಾಭ್ಯಾಸದಲ್ಲಿ ಇಷ್ಟೆಲ್ಲಾ ಮುಂದುವರಿದಿದೆಯೆಂದು ಹೇಳಿಕೊಳ್ಳುತ್ತಿದ್ದರೂ ಈ ದಿವಸ ನಮ್ಮ ಮೈಸೂರು, ಪಾಠಶಾಲೆಗೆ ಹೋಗುತ್ತಿರುವಂಥ ಹುಡುಗರ ಸಂಖ್ಯೆಯಲ್ಲಿ ಇದು ನಾಲ್ಕನೆಯ ಸ್ಥಾನವನ್ನಾಕ್ರಮಿಸಿದೆ. ನಾವು ಈ ದಿವಸ ಇಲ್ಲಿ ಕೇವಲ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೇ ಹೆಚ್ಚು ಗಮನ ಕೊಡುತ್ತಿದ್ದೇವೆ, ಜನಸಾಮಾನ್ಯರಿಗೆ ಇಲ್ಲಿ ಅಷ್ಟಾಗಿ ವಿದ್ಯಾಭ್ಯಾಸದ ಸೌಲಭ್ಯಗಳು ದೊರೆಯುತ್ತಿಲ್ಲ. ಹೀಗೆಲ್ಲಾ ಇರುವುದರಿಂದ ನಮ್ಮ ಸಂಸ್ಥಾನ ಈ ವಿದ್ಯಾಭ್ಯಾಸದಲ್ಲಿ ಅಷ್ಟೇನೂ ಮುಂದುವರೆದಿಲ್ಲ ಅಂತಲೇ ಹೇಳಬೇಕಾಗುತ್ತದೆ. ಇನ್ನು ಸಾಮಾಜಿಕ ಮತ್ತು ಸೊಸೈಟಿಗಳ ವಿಚಾರವನ್ನು ತೆಗೆದುಕೊಂಡರೆ, ನಮ್ಮ ಸಂಸ್ಥಾನ 4 ನೇ ಸ್ಥಾನವನ್ನು ಪಡೆದಿದೆ. ಇನ್ನು ಈ ಖಾಸಗೀ ಕೈಗಾರಿಕೆಗಳ

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.)

ವಿಚಾರವನ್ನು ತೆಗೆದುಕೊಂಡರೆ ನಮ್ಮ ಮೈಸೂರಿಗಿಂತಲೂ ಉಳಿದ ಕರ್ಣಾಟಕ ಭಾಗಗಳೇ ಬಹಳ ಬೇಗ ಈ ಕೈಗಾರಿಕೆಗಳಲ್ಲಿ ಮುಂದುವರೆಯುತ್ತಿವೆಯೆಂದು ಹೇಳಬೇಕಾಗಿದೆ. ಈ ದಿವಸ ಈ ಮೈಸೂರಿನ ಕೈಗಾರಿಕೆಯೆಲ್ಲಾ ಬಹಳ ಮಟ್ಟಿಗೆ ಹೊರಗಿನವರ ಕೈವಾಡದಲ್ಲಿದೆ. ಇನ್ನು ಕೆಲವು ನಮ್ಮ ಸರ್ಕಾರದವರ ಆಶ್ರಯದಲ್ಲಿ ನಡೆದುಕೊಂಡು ಬರುತ್ತಿವೆ. ಹೀಗೆ ನಾವು ಇನ್ನೂ ಅನೇಕ ಬಾಬುಗಳಲ್ಲಿ ಮುಂದುವರಿಯದೆ ಇರುವ ಕಾರಣದಿಂದ, ಇಷ್ಟೆಲ್ಲಾ ಆಗಿದ್ದರೂ ನಾವು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಪಡೆಯಬೇಕಾಗಿದ್ದರೆ ಅದು ಮೈಸೂರು ದೇಶ ವಿಶಾಲವಾಗದ ಹೊರತು ಖಂಡಿತ ಸಾಧ್ಯವಾಗಲಾರದು. ಹೀಗೆ ಒಂದು ದೇಶಾಭಿವೃದ್ಧಿಗೆ ಬಹು ಪ್ರಾಮುಖ್ಯವಾದಂಥ ವಿಷಯಗಳೇನಿರುತ್ತವೆಯೋ ಅವುಗಳನ್ನು ತೆರದ ಮನಸ್ಸಿನಿಂದ ಪರಿಶೀಲನೆ ಮಾಡದೆ ಈ ದಿವಸ ಯಾವ ಯಾವ ದೇಶಗಳು ಮುಂದುವರಿಯುತ್ತಿವೆಯೋ ಅವುಗಳೆಲ್ಲಾ ಹಾಗೇ ಮುಂದುವರೆಯುತ್ತಿರಲಿ, ಮತ್ತೆ ಯಾವ ಯಾವ ಭಾಗಗಳು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುತ್ತವೆಯೋ ಅವುಗಳೆಲ್ಲಾ ಹಾಗೇ ಹಿಂದುಳಿದಿರಲಿ ಎಂದು ವಾದ ಮಾಡುವುದು ಖಂಡಿತ ನ್ಯಾಯವಾದ್ದಲ್ಲ ಮತ್ತು ಸರಿಯಾದ್ದಲ್ಲ. ಇಂಡಿಯಾ ದೇಶದಲ್ಲಿರುವಂಥ ಪ್ರತಿಯೊಂದು ಭಾಗವೂ ಅಭಿವೃದ್ಧಿ ಹೊಂದಬೇಕು, ಹಾಗಿಲ್ಲದೆ ಅಭಿವೃದ್ಧಿ ಹೊಂದಿರುವ ಭಾಗಗಳೆಲ್ಲಾ ಅಭಿವೃದ್ಧಿಗೆ ಬರಲಿ, ಬಾಕಿಯ ಪ್ರದೇಶಗಳೆಲ್ಲಾ ಹಾಗೇ ಹಿಂದೆ ಬಿದ್ದಿರಲಿ ಅನ್ನುವುದಾಗಿದ್ದರೆ, ಈ ದಿವಸ ಕೇಂದ್ರ ಸರ್ಕಾರ ಪಾಂಚವಾರ್ಷಿಕ ಯೋಜನೆಗಳೊಂದನ್ನೂ ಕೈಗೊಳ್ಳಬೇಕಾಗೇ ಇರಲಿಲ್ಲ. ಉಳಿದ ದೇಶಗಳಿಗೆಲ್ಲಕ್ಕೂ ನಮ್ಮ ಭಾರತ ಮಾದರೀ ದೇಶವಾಗಿರಬೇಕು ಅನ್ನುವಂಥ ಉದ್ದೇಶದಿಂದಲೇ ಈಗ ನಮ್ಮ ಭಾರತ ಸರ್ಕಾರದವರು ಈ ಪಾಂಚವಾರ್ಷಿಕ ಯೋಜನೆಯನ್ನು ಕೈಗೊಂಡಿರುತ್ತಾರೆ. ನಾನಾವಿಧವಾದಂಥ ಪ್ರಗತಿ ಮಾರ್ಗದ ಕಾರ್ಯಕ್ರಮಗಳು ಇಡೀ ಭಾರತದಲ್ಲೆಲ್ಲಾ ಹೇಗೆ ನಡೆಯುತ್ತಿವೆಯೋ ಹಾಗೆ ಆ ಮೈಸೂರನ್ನುಳಿದ ಕರ್ಣಾಟಕ ಪ್ರಾಂತ್ಯಗಳಲ್ಲಿಯೂ ನಡೆಯುತ್ತಿವೆ. ಇದರಿಂದ ಅನೇಕ ಅನುಕೂಲಗಳುಂಟಾಗುತ್ತವೆ. ಇನ್ನು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಹಿಂದೆ ಉಳಿದಿರತಕ್ಕಂಥಾ ಕಾರ್ಯಗಳೆಲ್ಲಾ ಪೂರೈಸಿ, ಗ್ರಾಮಾಭಿವೃದ್ಧಿಗೆ ಹೆಚ್ಚಿನ ನಿಗಾ ಕೊಡಲಾಗುತ್ತದೆ. ಈಗಾಗಲೇ ನಾವು ಅನೇಕ ಕಡೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿರುತ್ತೇವೆ. ಇತರೇ ದೇಶಗಳಲ್ಲಿ ಈ ಗ್ರಾಮಾಭಿವೃದ್ಧಿ ಕಾರ್ಯಗಳಾದರೂ ಅವು ಅಭಿವೃದ್ಧಿಗೆ ಬರಲು ಎಷ್ಟೋ ವರ್ಷಕಾಲ ಹಿಡಿಯುತ್ತದೆ. ಆದರೆ ನಮ್ಮ ಕರ್ಣಾಟಕದಲ್ಲಿ ನಾವೇನೂ ಅಂಥಾ ಭಯಪಡಬೇಕಾದ ಪ್ರಮೇಯವಿಲ್ಲ. ಈಗಾಗಲೇ ನಮ್ಮ ಸರ್ಕಾರದವರು ಅಕ್ಕಪಕ್ಕದ ಪ್ರಾಂತ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಒಪ್ಪಿಕೊಂಡಿರುವುದು ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಗೊತ್ತೇ ಇದೆ. ಈ ದಿವಸ ಆ ಕೊಡಗಿನಲ್ಲಿ ಕೂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಲು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಹೀಗೆ ಪ್ರತಿಯೊಂದು ಕಡೆಯಲ್ಲೂ ಈ ದೇಶಾಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಸಲು ಪ್ರಯತ್ನಗಳಾಗುತ್ತವೆ. ಹೀಗಿರುವಾಗ ಕೆಲವು ಮಾನ್ಯ ಸದಸ್ಯರು ದೇಶಾಭಿವೃದ್ಧಿಗೆ ದೇಶದ ವಿಸ್ತೀರ್ಣ ಚಿಕ್ಕದಾಗಿದ್ದರೆ ಒಳ್ಳೆಯದೆಂದು ಅಭಿಪ್ರಾಯ ಪಟ್ಟಿರುವುದರಲ್ಲಿ ಅರ್ಥವಿಲ್ಲ. ಆಡಳಿತೆ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲಿಸುವುದಾದರೆ—ಒಂದು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಬಹು ಮುಖ್ಯವಾದದ್ದು ಯಾವುದೆಂದರೆ ದೇಶ ಚಿಕ್ಕದಾಗಿರಬೇಕೆಂಬುದಲ್ಲ ; ಅಲ್ಲಿಯ ಆಡಳಿತದಲ್ಲಿರುವ ಅಧಿಕಾರಿಗಳು, ಅಲ್ಲಿಯ ಸಾರ್ವಜನಿಕರೂ ಮತ್ತು ಅಲ್ಲಿರುವ ಸರ್ಕಾರ ಈ ಮೂವರೂ ಹೊಂದಾವಣಿಕೆಯಿಂದ ಅದನ್ನು ನಡೆಸಬೇಕಾಗಿದೆ. ಹಾಗೆ ಅದು ಹೊಂದಾವಣಿಕೆಯಿಂದ ನಡೆದರೆ ದೇಶ ಎಷ್ಟಿದ್ದರೂ ಅದರಿಂದ ಬಾಧಕವೇನೂ ಇಲ್ಲ. ಗ್ರಾಮದಲ್ಲಿ ಸರಿಯಾದ ಗ್ರಾಮಾಧಿಕಾರಿಗಳು ಬೇಕು. ವಯಸ್ಕರ ಮತದಾನದ ಪದ್ಧತಿ ಮೇಲೆ ಜನರಿಂದ ನೇರವಾಗಿ ಚುನಾಯಿತರಾದಂಥ ಸದಸ್ಯರು ಬಂದು ಈ ಶಾಸನ ಸಭೆಯಲ್ಲಿ ಕುಳಿತು ದೇಶದ ಆಡಳಿತವನ್ನು ನಡೆಸುತ್ತಿರುವಾಗ ದೇಶ ವಿಶಾಲವಾದರೆ ಅದರಿಂದೇನೂ ತೊಂದರೆಯಾಗುವುದಿಲ್ಲ. ಈ ದೃಷ್ಟಿಯಿಂದಲೂ ಸಹ ವಿಶಾಲ ಮೈಸೂರು ಆಗಲೇಬೇಕೆಂದು ಹೇಳಬೇಕಾಗಿರುತ್ತದೆ. ಕರ್ಣಾಟಕ ಮಾತೆಯ ಮಕ್ಕಳು ಎಲ್ಲರೂ ಒಂದುಗೂಡಬೇಕು. ಕರ್ಣಾಟಕವು 100 ವರ್ಷಗಳ ಹಿಂದೆ ಛಿದ್ರವಾಗಿರದೆ ಯಾವ ಒಂದು ವಿಸ್ತೀರ್ಣದಲ್ಲಿತ್ತೋ ಆ ಮಟ್ಟಕ್ಕೆ ಬರಬೇಕು. ಮೈಸೂರು ಪ್ರಜೆಗಳು ಮತ್ತು ಇತರ ಕರ್ಣಾಟಕದವರು ಒಂದಾಗಿ ಶ್ರೀರಂಗಪಟ್ಟಣದಿಂದ ಕೊಡಗಿನವರೆಗೂ ರಾಜ್ಯ ವಿಸ್ತರಿಸಿ ಮಂಗಳೂರನ್ನು ಬಂದರನ್ನಾಗಿಟ್ಟುಕೊಂಡು ಹೈದರಾಲಿಯು ರಾಜ್ಯಭಾರವನ್ನು ನಡೆಸಲಿಲ್ಲವೇ ! ಉತ್ತರ ಕರ್ಣಾಟಕದವರು ಹೋಗಲು ಒಪ್ಪಲಿಲ್ಲ. ಮೈಸೂರಿನವರು ಹಾಗೆ ಹೋಗಲು ಒಪ್ಪಲಿಲ್ಲ. ನಮ್ಮನ್ನು ಬಿಟ್ಟುಹೋಗಲು ಒಪ್ಪಲಿಲ್ಲ. ಮೂರನೆಯವರ ಕುತಂತ್ರದಿಂದ ಅಂದರೆ ಬ್ರಿಟಿಷ್ ಸಾಮ್ರಾಜ್ಯಷಾಹಿಯ ಅಧಿಕಾರದಾಹದ ಒಂದು ರಾಜಕಾರಣದ ದೆಸೆಯಿಂದ ಈ ರೀತಿಯಾಗಿದೆ. ಹೀಗೆ ಹೊರಟುಹೋದಂಥ ಪ್ರದೇಶಗಳ ಅಣ್ಣತಮ್ಮಂದಿರು ಅವರಾಗಿ ಬಂದು ಇಲ್ಲಿ ಸೇರಬೇಕೆಂದು ಬಂದಿರುವಾಗ, ಎಣ್ಣೆ ಬಂದಾಗ, ಕಣ್ಣು ಮುಚ್ಚಿಕೋ ಎಂದು ಹೇಳುವ ಹಾಗೆ, ಅದನ್ನು ನಾವು ವಿರೋಧಿಸುವುದು ನ್ಯಾಯವಲ್ಲವೆಂದು ನನ್ನ ಭಾವನೆ. ಈಗತಾನೆ ಮಾತನಾಡಿದ ಶ್ರೀ ಬೊಮ್ಮೇಗೌಡರು ಒಟ್ಟು ಕುಟುಂಬಗಳ ವಿಷಯವಾಗಿ ಮಾತನಾಡುತ್ತಾ ಒಂದು ಕುಟುಂಬವಿದ್ದರೆ ಒಳ್ಳೆಯ ಶ್ರೇಯಸ್ಕರದಿಂದ ಮುಂದುವರಿಯಬಹುದೆಂದು ಹೇಳಿದರು. ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ರೈತವರ್ಗದಲ್ಲಿ ಒಂದು ಕುಟುಂಬದಲ್ಲಿ ವ್ಯವಸಾಯ ಮಾಡುವವರು ಎಷ್ಟು ಜನರು ಹೆಚ್ಚಿಗೆ ಇರುತ್ತಾರೋ ಆ ಮನೆ ಅಷ್ಟು ಚೆನ್ನಾಗಿ ಅಭಿವೃದ್ಧಿಯಾಗುತ್ತದೆ. ಒಂಟಿ ಇದ್ದ ಕಡೆಗಳಲ್ಲಿ ಹೆಚ್ಚಿಗೆ ವ್ಯವಸಾಯ ಮಾಡುವುದಕ್ಕೆ ಅವಕಾಶವಿಲ್ಲ. ಯಾವಾಗಲೂ ಒಟ್ಟು ಕುಟುಂಬಗಳು ಅಭಿವೃದ್ಧಿಯಾಗುತ್ತವೆ. ಒಂಟಿ ಕುಟುಂಬದಲ್ಲಿರತಕ್ಕಂಥವರು ಚೆನ್ನಾಗಿ ಐಶ್ವರ್ಯವಂತರಾಗಲು ಅವಕಾಶವಿಲ್ಲವೆಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯವಾಗಿದೆ. ಕರ್ಣಾಟಕ ಏಕೀಕರಣವಾಗಬೇಕು, ಭಾಷೆಯ ಪ್ರಾಧಾನ್ಯದ ಮೇಲೆ ದೇಶವಿಂಗಡನೆಯಾಗಬೇಕು ಎಂದು ಬಹಳ ಹಿಂದಿನಿಂದಲೂ ನಮ್ಮ ಕಾಂಗ್ರೆಸ್ಸಿನ ಹಿರಿಯರ ನಾಯಕರು ಮತ್ತು ಈ ಮಾನ್ಯಸಭೆಯ ನಾಯಕರು ತಮ್ಮ ಅಭಿಪ್ರಾಯಗಳನ್ನು ಹೊರಗೆಡವಿದ್ದಾರೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ಇದಕ್ಕಾಗಿ ಅನೇಕ ನಾಯಕರು ಅವಿಶ್ರಾಂತಿಯಾಗಿ ದುಡಿದಿದ್ದಾರೆ. ಅವರೆಲ್ಲರ ಆಶೀರ್ವಾದ ಬಲದಿಂದ ಕರ್ಣಾಟಕ ಪ್ರಾಂತ್ಯ ಸ್ಥಾಪನೆಯಾಗುವುದು ಖಂಡಿತ ಎಂದು ನನಗೆ ಭರವಸೆ ಇದೆ. ಇಂದಲ್ಲ ನಾಳೆಯಾದರೂ ಕರ್ಣಾ

ಟಕ ಪ್ರಾಂತ ಆಗಿಯೇ ಆಗುತ್ತದೆ. ಮೈಸೂರು ವಿಶಾಲವಾಗುವುದು ಬೇಡ ಎಂದು ಹೇಳುವವರೂ ಕೂಡ ಖಂಡಿತ ಈ ರೀತಿ ಕರ್ನಾಟಕ ಪ್ರಾಂತ ಆಗಲೇ ಕೂಡದು ಎಂದು ಹೇಳುತ್ತಾ ಇಲ್ಲ. ಅವರು ಹೇಳತಕ್ಕಂಥಾದ್ದು ಇನ್ನೂ 5-10 ವರ್ಷಗಳು ಆದಮೇಲಾಗಲಿ; ಇನ್ನೂ ಕಾಲ ಸನ್ನಿಹಿತವಾಗಲಿ ಎಂದು ಹೇಳುತ್ತಿದ್ದಾರೆ. ಭಾಷಾವಾರು ಪ್ರಾಂತ ಬೇಡ ಎಂದ ಒಂದು ಕಡೆ ವಾದಮಾಡಿ ಪುನಃ ಅದೇ ರಾಗದಲ್ಲಿ ಭಾಷಾವಾರು ಆಗುವುದಾದರೆ ಉತ್ತರ ಕರ್ನಾಟಕ ಬೇರೆಯಾಗಲಿ, ದಕ್ಷಿಣ ಕರ್ನಾಟಕ ಬೇರೆಯಾಗಲಿ ಎಂದು ಹೇಳುತ್ತಾರೆ. ಇದರ ಅರ್ಥ ನನಗಂತೂ ಗೊತ್ತಾಗಲಿಲ್ಲ. ಒಟ್ಟಿನಲ್ಲಿ ಮೈಸೂರು ವಿಶಾಲವಾಗುವುದರಿಂದ ಪಾರ್ಲಿಮೆಂಟಿನಲ್ಲಿ ನಮ್ಮ ಸದಸ್ಯರ ಸಂಖ್ಯೆ ಸುಮಾರು 40 ರವರೆಗೆ ಹೆಚ್ಚಬಹುದು. ಆ 40 ಮಂದಿ, 500 ಜನರು ಇರುವ ಸಭೆಯಲ್ಲಿ ಇದ್ದರೆ ನಮ್ಮ ದೇಶಕ್ಕೆ ಆಗಬೇಕಾದ ಕಾರ್ಯಗಳ ಬಗ್ಗೆ ಸಹಕಾರ ಸೌಕರ್ಯಗಳನ್ನು ಪಡೆಯುವುದಕ್ಕೆ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ 10-12 ಮಂದಿ ಆ ಸಭೆಯಲ್ಲಿ ಕುಳಿತುಕೊಂಡು ಟೀಕೆ ಮತ್ತು ವಾದ ವಿವಾದಗಳನ್ನು ಮಾಡಿ ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ಅದು ಬೆಲೆ ಇಲ್ಲದೆ ಹೋಗುತ್ತದೆ. ಅದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಈ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಮತ್ತು ಅಗತ್ಯ ಇಲ್ಲವೆಂದು ಭಾವನೆ ಮಾಡುತ್ತೇನೆ. ಉಳಿದ ಕರ್ನಾಟಕದವರು ನಮ್ಮ ಹಾಗೆ ಅಭಿವೃದ್ಧಿ ಹೊಂದಲಿ. ಅವರ ಅಭಿವೃದ್ಧಿಗೆ ಯಾರು ಅಡ್ಡಿ ಬರುತ್ತಾರೆ? ಇದುವರೆಗೆ ಅಭಿವೃದ್ಧಿ ಏತಕ್ಕೆ ಆಗಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆ ಎತ್ತಿದ್ದಾರೆ. ಬೊಂಬಾಯಿ ಪ್ರಾಂತದಲ್ಲಾಗಲೀ, ಹೈದರಾಬಾದ್ ಪ್ರಾಂತದಲ್ಲಾಗಲೀ, ಮದ್ರಾಸ್ ಪ್ರಾಂತದಲ್ಲಾಗಲೀ ಕನ್ನಡ ಮಾತನಾಡುವ ಜನರ ಸಂಖ್ಯೆಯು ಬಹಳ ಕಡಮೆ ಇದ್ದುದರಿಂದ ಇನ್ನೂ ಉಳಿದಿರುವವರ ಸಂಖ್ಯೆಯು ಬಹುಮತದಿಂದ ಇದ್ದು ಕನ್ನಡ ಮಾತನಾಡುವವರಿಗೆ ಬೇಕಾದಂಥ ಸೌಲಭ್ಯವನ್ನು ಪಡೆಯಲು ಅವಕಾಶವಾಗದೆ ಹೋದದ್ದೇ ಮುಖ್ಯ ಕಾರಣವಾಗಿ ಹಿಂದುಳಿದಿದ್ದಾರೆ. ಹಿಂದೆ ರಾಜ್ಯವನ್ನು ವಿಸ್ತರಣೆ ಮಾಡಲು ಅನೇಕ ಬಲಿದಾನಗಳನ್ನು ಮತ್ತು ಘೋರ ಯುದ್ಧಗಳನ್ನು ನಡೆಸಬೇಕಾಗಿತ್ತು, ಹಾಗಿರುವಾಗ ತಾನೇತಾನಾಗಿ ಆಗುವ ವಿಸ್ತಾರಕ್ಕೆ ಅಡ್ಡಿ ಬರಬಾರದು, ಅದು ನ್ಯಾಯವಲ್ಲ ಎಂದು ನನ್ನ ಭಾವನೆ. ಈ ರಾಜ್ಯವನ್ನು ವಿಸ್ತಾರಮಾಡಬೇಕು, ಈಗ ಆಗಿರುವ ಕೃತ್ರಿಮ ಎಲ್ಲೆಕಟ್ಟು ಬದಲಾವಣೆ ಆಗಬೇಕು ಎಂಬುದನ್ನು ಕೇಂದ್ರ ಸರ್ಕಾರದವರು ಮನಗಂಡು ಇದಕ್ಕಾಗಿ ಫಸಲ್ ಅಲಿ ಸಮಿತಿಯವರನ್ನು ನೇಮಕಮಾಡಿ, ಆ ಫಸಲ್ ಅಲಿ ಸಮಿತಿಯವರು ಈಗಾಗಲೇ ಪ್ರವಾಸಮಾಡಿ, ಪ್ರಜೆಗಳ ಪ್ರತಿನಿಧಿಗಳನ್ನು ಕಂಡು, ಅಂಕಿಅಂಶಗಳನ್ನು ಶೇಖರಣೆ ಮಾಡಿ, ಈ ವಿಚಾರದಲ್ಲಿ ಅವರ ಶಿಫಾರಸುಗಳನ್ನು ಕೇಂದ್ರ ಸರ್ಕಾರದ ಮುಂದೆ ಇಡುವವರಾಗಿದ್ದಾರೆ. ಅದರ ಪ್ರಕಾರವಾದರೂ ಕೂಡ ಮೈಸೂರು ವಿಶಾಲವಾಗಲೇಬೇಕು. ಕನ್ನಡಮಾತೆಯ ಮಕ್ಕಳು ಒಕ್ಕೊಟ್ಟಕ್ಕೆ ಸೇರಲೇಬೇಕು. ಇವು ಆಗಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈ ಶೇಷಾದ್ರಿ ಸಮಿತಿಯವರ ವರದಿಯನ್ನು ನಾವು ಪರಿಶೀಲನೆ ಮಾಡಬೇಕಾದರೆ ಮೊದಲನೆಯದಾಗಿ, ಇದರಲ್ಲಿ ಏನಾದರೂ ಪ್ರಯೋಜನವಿದೆಯೋ ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕು. ಶೇಷಾದ್ರಿ ಸಮಿತಿಯನ್ನು ಏತಕ್ಕೋಸ್ಕರ ನೇಮಕಮಾಡಿದರು? ಯಾವಾಗ ಮಾಡಿದರು? ಮಾಡಬೇಕಾದ ಅವಶ್ಯಕತೆ ಇತ್ತೇ? ಈ ಸಮಿತಿ ನೇಮಕ ಮಾಡುವುದಕ್ಕೆ ಏನಾದರೂ ಈ ಸಭೆ ಅನುಮತಿ ಕೊಟ್ಟಿತ್ತೇ? ಅಥವಾ ಫಸಲ್ ಅಲಿ ಸಮಿತಿಯವರು ಈ ಸಭೆಯ ಅಭಿಪ್ರಾಯವನ್ನು ಕೇಳಿದ್ದಾರೆಯೇ? ಎನ್ನುವುದೂ ಕೂಡ ನನಗೆ ಅನುಮಾನವಾಗಿದೆ. ಅದೂ ಅಲ್ಲದೆ, ಕೇಂದ್ರ ಸರ್ಕಾರದವರು ಏರ್ಪಡಿಸಿದ ಈ ಪ್ರಾಂತ್ಯ ಪುನರ್ವಿಂಗಡನೆ ಸಮಿತಿಯವರು ಸ್ಥಳೀಯ ವಿದ್ಯಮಾನಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಕಳೆದವರ್ಷ ಇಲ್ಲಿಗೆ ಬಂದಾಗ್ಗೆ ಎಲ್ಲರಿಗೂ ಕೂಡ ಆಹ್ವಾನವನ್ನು ಇತ್ತಿದ್ದರು. ಈ ಸಂದರ್ಭದಲ್ಲಿ ನಮ್ಮ ದೇಶದ ಅನೇಕ ಮುಖಂಡರು ಮತ್ತು ಸಂಸ್ಥೆಗಳು ತಮ್ಮ ತಮ್ಮ ವರದಿಯನ್ನು ಅವರಿಗೆ ಸಲ್ಲಿಸಿದ್ದಾರೆ. ಆಗ್ಗೆ ಕಾಂಗ್ರೆಸ್ ಸಂಸ್ಥೆಯವರು ಮಾತ್ರ ಅಸಹಕಾರ ತೋರಿಸಿದರು. ಅವರು ಏತಕ್ಕಾಗಿ ಹಾಗೆ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ, ಈ ಸಮಿತಿಯನ್ನು ಮಾಡಿರುವುದು ತಪ್ಪು ಎಂದು ಭಾವನೆ ಮಾಡಿದರೋ-ಅಥವಾ ಆ ಸಮಿತಿಗೆ ತಮ್ಮ ಅಭಿಪ್ರಾಯವನ್ನು ತಿಳಿಸುವುದರಿಂದ ಏನೂ ಪ್ರಯೋಜನವಿಲ್ಲ ಎಂದು ತಿಳಿದುಕೊಂಡರೋ ಎಂಬುದೇ ಒಂದು ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದವರು ಈ ಸಮಿತಿಯು ತನ್ನ ವರದಿಯನ್ನು ಜೂನ್ ತಿಂಗಳೊಳಗೆ ಕೊಟ್ಟುಬಿಡಬೇಕು ಎಂದು ಕಡ್ಡಾಯವಾಗಿ ಅಪೇಕ್ಷೆಪಟ್ಟಿದರು ಮತ್ತು ಅವರು ಒಂದು ತಿಂಗಳೊಳಗೆ ಆ ವರದಿಯನ್ನು ಒಪ್ಪಿಸುತ್ತಾರೆ ಎಂದು ನನಗೆ ವರ್ತಮಾನ ಬಂದಿದೆ. ಈಗ ಇಲ್ಲಿ ನಾವು ಈ ಸಮಿತಿಯ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡು ನಮ್ಮ ಅಭಿಪ್ರಾಯಗಳನ್ನು ವಿಮರ್ಶೆ ಮಾಡಿ ಒಂದು ತೀರ್ಮಾನಕ್ಕೆ ಬಂದರೆ ಅದರಿಂದ ಏನು ಪ್ರಯೋಜನವಾಗುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಅದೂ ಅಲ್ಲದೆ ನೀವು ಇದರಲ್ಲಿ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳುತ್ತೀರೋ ಇಲ್ಲವೋ ಎಂಬುದನ್ನು ನಾನು ತಮ್ಮನ್ನು ಕೇಳಿಕೊಳ್ಳಬೇಕಾಗಿದೆ. ಇದರಮೇಲೆ ತೀರ್ಮಾನ ತೆಗೆದುಕೊಂಡರೆ ಆ ತೀರ್ಮಾನವನ್ನು ಯಾರ ಅವಗಾಹನೆಗೆ, ಯಾರ ತೀರ್ಮಾನಕ್ಕೆ ಕಳುಹಿಸಬೇಕೆಂಬುದನ್ನು ವಿವರಿಸಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ಅಭಿಪ್ರಾಯ. ಇಂತಹ ವರದಿಯ ಮೇಲೆ ಈ ಸಭೆ 7 ದಿವಸ ತನ್ನ ಕಾಲವನ್ನು ಕಳೆದಿರುವುದನ್ನು ನೋಡಿದರೆ ಬಹಳ ಮಟ್ಟಿಗೆ ವಿಷಾದವಾಗುತ್ತದೆ. ಏತಕ್ಕೆಂದರೆ, ಏನೂ ಪ್ರಯೋಜನವಿಲ್ಲದೆ ಯಾರಿಗೂ ಬೇಡವಾದಂಥ ಮತ್ತು ಒಂದು ನಿರ್ಧಾರವಾದ ಉದ್ದೇಶವಿಲ್ಲದೆ ಚರ್ಚೆಮಾಡುವುದರಲ್ಲಿ ಏನೂ ಸಾರ್ಥಕವಿಲ್ಲವಲ್ಲ ಎಂದು ಶಂಕಿಸಬೇಕಾಗಿದೆ. ಆ ಸಮಿತಿಯ ಸದಸ್ಯರು ಬಹಳ ಶ್ರಮಪಟ್ಟು ಅಂಕಿಅಂಶಗಳನ್ನು ಸಂಗ್ರಹ ಮಾಡಿದ್ದಾರೆ. ಆದರೂ ಕೂಡ ಅವರು ಎಷ್ಟು ಸಾಧ್ಯವೋ ಅಷ್ಟು ಅಂಕಿಅಂಶಗಳನ್ನು ಸೇರಿಸಿದ್ದಾರೆ. ಮುಂದೆ ಯಾವುದಕ್ಕಾದರೂ ಒಂದು ತಕ್ಷಣ reference ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅದು ಲೈಬ್ರರಿಯಲ್ಲಿರಬೇಕೆಂತಲೋ?

ಶ್ರೀ ಬಿ. ಹುಚ್ಚೇಗೌಡ.—ಲೈಬ್ರೆರಿಯಲ್ಲಿರುವುದಕ್ಕೆ ಇದು ಸಾರ್ಥಕವೇ ಹೊರತು ಇನ್ನೇನೂ ಉಪಯೋಗಕ್ಕೂ ಬರುವುದಿಲ್ಲ. ನಾವು ಇಷ್ಟು ದಿವಸ ಚರ್ಚೆಮಾಡಿದ್ದು ವ್ಯಥಾಲಾಪ ಮಾಡಿದಂತಾಗಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಹಾಗಾದರೆ ತಾವು participate ಮಾಡದೆ ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಅದು ನನ್ನ ಇಷ್ಟ. ವಿವೇಕವಿಲ್ಲದೆ ಮಾಡತಕ್ಕ ಕೆಲಸವನ್ನು ತೋರಿಸಿಕೊಡುವುದು ನಮ್ಮ ಕರ್ತವ್ಯ. ಭಾಷಾವಾರು ಪ್ರಾಂತ್ಯ ವಿಂಗಡನೆ ವಿಚಾರದಲ್ಲಿ ಎಲ್ಲರೂ ಕಾತರತೆ ವ್ಯಕ್ತಪಡಿಸುವುದು ಕೂಡ ಅನಾವಶ್ಯಕ. ಅದರಲ್ಲಿ ಅನಾವಶ್ಯಕವಾಗಿ ಉದ್ರೇಕಗೊಳ್ಳಲು ಕಾರಣವಿಲ್ಲ ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ಈಗ ಇಂಡಿಯಾ ದೇಶದಲ್ಲಿರತಕ್ಕ ಸಂಸ್ಥಾನಗಳನ್ನು ಯಾವ ಸೌಕರ್ಯದ ದೃಷ್ಟಿಯಿಂದಲಾಗಲಿ, ಆರ್ಥಿಕ ದೃಷ್ಟಿಯಿಂದಲಾಗಲಿ, ಭೌಗೋಳಿಕ ದೃಷ್ಟಿಯಿಂದಲಾಗಲಿ, ಅಥವಾ ಆಡಳಿತ ದೃಷ್ಟಿಯಿಂದಲಾಗಲೀ ವಿಂಗಡಿಸಿಲ್ಲ. ಹಿಂದೆ ಚಾರಿತ್ರಿಕ ಕಾರಣಗಳಿಂದ ರಾಜ್ಯಗಳು ಸ್ಥಾಪನೆಯಾಗಿವೆ. ಯಾವನು ತನ್ನ ಕತ್ತಿಯ ಶಕ್ತಿಯಿಂದ ದೇಶವನ್ನು ಆಕ್ರಮಿಸುತ್ತಿದ್ದನೋ, ಅದು ಅವನದಾಗಿತ್ತು. ಮಾರನೆಯ ದಿವಸ ಯಾವನು ಅವನಿಂದ ಕಿತ್ತುಕೊಳ್ಳುತ್ತಿದ್ದನೋ, ಅದು ಅವನ ಅಧೀನದಲ್ಲಿ ಇರುತ್ತಿತ್ತು. ಇದಾದ ಮೇಲೆ ಇಂಡಿಯಾದೇಶ ಒಟ್ಟಿಗೆ ಇಂಗ್ಲಿಷರ ಕೈಕೆಳಗೆ ಬಂತು. ಹಾಗೂ ಹೀಗೂ ಇಂಗ್ಲಿಷರು ರಾಜ್ಯಗಳ ಸರಹದ್ದುಗಳನ್ನು ನಿಷ್ಕರ್ಷೆಮಾಡುವುದರಲ್ಲಿ ಸ್ವಲ್ಪ ಪಾತ್ರ ತೆಗೆದುಕೊಂಡರು. ಹಾಗೆ ಪ್ರಾಂತಗಳ ಗಡಿ ನಿಷ್ಕರ್ಷೆ ಮಾಡುವಾಗ ಅವರು ಆಡಳಿತ ದೃಷ್ಟಿಯನ್ನು ಮತ್ತು ಮಿಲಿಟರಿ ದೃಷ್ಟಿಯನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡರು. 562 ಸಂಸ್ಥಾನಗಳನ್ನು ದೇಶದಲ್ಲಿಟ್ಟುಕೊಂಡು ಮೂರನೆ ಒಂದು ಭಾಗವನ್ನು ಅವರಿಗೆ ಕೊಟ್ಟು ಮೂರನೆಯ ಎರಡು ಭಾಗಗಳನ್ನು ತಾವು ಇಟ್ಟುಕೊಂಡರು. ಇಂಡಿಯಾ ದೇಶವನ್ನು ಆಳಬೇಕಾದರೆ ಇಂಡಿಯಾ ದೇಶದಲ್ಲಿ ಕೆಲವರನ್ನು ಜಮೀನ್ದಾರರನ್ನಾಗಿಯೂ, ಇನ್ನು ಕೆಲವರನ್ನು ರಾಜರನ್ನಾಗಿಯೂ ಮತ್ತು ಮಹಾರಾಜರುಗಳನ್ನಾಗಿಯೂ ಮತ್ತು ಇನಾಮುದಾರರನ್ನಾಗಿಯೂ ಇಟ್ಟುಕೊಂಡರೆ, ಅವರ ಕೈಕೆಳಗೆ ಜನಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದು ಸುಲಭ ಎಂದು ತಿಳಿದು ಹಾಗೆ ಮಾಡಿದರು. ಒಂದು ಸಂಸ್ಥಾನಕ್ಕೂ ಮತ್ತೊಂದು ಸಂಸ್ಥಾನಕ್ಕೂ ಸಂಬಂಧವಿಲ್ಲದಂತೆ ಮಾಡಿದರು ಮತ್ತು ಸಮುದ್ರ ತೀರ ಸಂಸ್ಥಾನಗಳಿಗೆ ದೂರವಾಗಿರುವಂತೆ ಅವುಗಳ ವಿಸ್ತೀರ್ಣವನ್ನೂ ಕೂಡ ಕತ್ತರಿಸಿದರು. ಏತಕ್ಕೆಂದರೆ ನಮ್ಮ ಮೈಸೂರಿನ ಗಡಿ ಸಮುದ್ರಕ್ಕೆ ಹತ್ತು ಮೈಲಿದೂರ ಮಾತ್ರ ಉಳಿದುಕೊಂಡಿದೆ ಇಷ್ಟನ್ನೂ ತೆಗೆದುಕೊಳ್ಳುವುದಕ್ಕೆ ನಮ್ಮ ಕೈಯಲ್ಲಾಗಲಿಲ್ಲ. ಇಂಡಿಯಾ ಸರ್ಕಾರದ ಜೊತೆಗೆ ಎಷ್ಟೋ ವರ್ಷಗಳಿಂದ ವಾದಮಾಡುತ್ತಾ ಬಂದೆವು. ಒಂದು ಸಮುದ್ರ ತೀರ ಇರುವ ಪಟ್ಟಣಬೇಕು ಎಂದು ಬಹುಮಟ್ಟಿಗೆ ಆ ಕಾಲದಲ್ಲಿ ಕೇಳಿಕೊಂಡರೂ ನಮಗೆ ಅದು ದೊರೆಯಲಿಲ್ಲ. ಅವರು ಈ ರಾಜ್ಯವನ್ನು ಹಂಚುವುದರಲ್ಲೂ ಒಂದೊಂದು ಭಾಷೆ ಮಾತನಾಡುವ ಜನರು ಒಟ್ಟಾಗದಂತೆ ಕೂಡ ಮಾಡಿದರು. ಇದೂ ಅಲ್ಲದೆ, ಉದಾಹರಣೆಗೆ ಕನ್ನಡ ಡಿಸ್ಟ್ರಿಕ್ಟು ತೆಗೆದುಕೊಳ್ಳೋಣ. ಅಲ್ಲಿ ರಾಷ್ಟ್ರೀಯ ಮನೋಭಾವನೆ ಜಾಸ್ತಿ ಬೆಳೆಯುತ್ತಾ ಬಂದು, ಬ್ರಿಟಿಷರಿಗೆ ಬಹಳ ಕಿರುಕುಳಕೊಟ್ಟರು. ಅದಕ್ಕಾಗಿ ಉತ್ತರ ಕನ್ನಡ ಬೇರೆ, ದಕ್ಷಿಣ ಕನ್ನಡ ಬೇರೆ ಎಂದು ಎರಡು ಭಾಗಗಳನ್ನಾಗಿ ಮಾಡಿ, ಉತ್ತರ ಕನ್ನಡವನ್ನು ಬೊಂಬಾಯಿಗೂ ದಕ್ಷಿಣ ಕನ್ನಡವನ್ನು ಮದರಾಸಿಗೂ ಸೇರಿಸಿದರು. ಇಷ್ಟರಿಂದಲೇ ಬ್ರಿಟಿಷರು ಈ ರಾಜ್ಯವನ್ನು ಆಡಳಿತ ಮತ್ತು ಮಿಲಿಟರಿ ದೃಷ್ಟಿಯಿಂದ ವಿಂಗಡನೆ ಮಾಡಿದರೆಂದು ನಾವು ತಿಳಿದುಕೊಳ್ಳಬಹುದು. ಈ ದೇಶದೊಡನೆ ತಮ್ಮ ಸಂಬಂಧವನ್ನು ಇಟ್ಟುಕೊಳ್ಳಲು ಈ ರೀತಿ ಹಂಚಿಕೆಮಾಡಿದರು. ಒಂದಕ್ಕೊಂದಕ್ಕೆ ಸಂಬಂಧವಿರಬಾರದು, ದೇಶದಲ್ಲಿ ರಾಷ್ಟ್ರ ಮನೋಭಾವನೆ ಉಂಟಾಗಬಾರದು ಎಂದು ಅವರಲ್ಲಿ ಒಂದು ದೊಡ್ಡ ಆಶೋತ್ತರವಿತ್ತು. ಅದಕ್ಕನುಗುಣವಾಗಿ ಅವರು ದೇಶವನ್ನು ಪುನರ್ವಿಂಗಡನೆ ಮಾಡಿಕೊಂಡು ಬಂದರು. ಭಾಷೆಯ ಆಧಾರದ ಮೇಲೆ ಸಂಸ್ಥಾನಗಳನ್ನು ವಿಂಗಡಿಸಬೇಕು ಎನ್ನುವ ಅಭಿಪ್ರಾಯ ಈಚೆಗೆ ದೇಶದಲ್ಲಿ ರಾಷ್ಟ್ರೀಯ ಮನೋಭಾವನೆ ಹೆಚ್ಚು ಆದ ಹಾಗೆ ಜನರಲ್ಲಿ ಮೂಡಿತು. ಇಂಡಿಯಾ ದೇಶದ ಪ್ರಾಂತಗಳ ಗಡಿಗಳನ್ನು ಆಡಳಿತಕ್ಕನುಗುಣವಾಗಿ ವಿಭಾಗಿಸಬೇಕು ಎಂಬ ವಿಚಾರದಲ್ಲಿ ಈ ಸಭೆಯಲ್ಲಿ ಯಾರದೂ ಕೂಡ ವಿರೋಧವಿಲ್ಲ. ಆದರೆ ಅದು ಯಾವ ರೀತಿ ಆಗಬೇಕು ಎನ್ನುವುದರಲ್ಲಿ ಮಾತ್ರ ವ್ಯತ್ಯಾಸವಿದೆ. ಈಗಿರತಕ್ಕ ಸರಹದ್ದುಗಳು ಬಹಳ ಕೃತ್ರಿಮವಾದುವು, ಯಾವ ಶಾಸ್ತ್ರೀಯ ಆಧಾರದ ಮೇಲೂ ನಿಂತಿಲ್ಲ ಎಂದು ಪ್ರತಿಯೊಬ್ಬರ ಅಭಿಪ್ರಾಯ. ಮೈಸೂರಿನಲ್ಲಿ ಆಡಳಿತ ಚೆನ್ನಾಗಿತ್ತು. ಅದು ನಮ್ಮ ಅದೃಷ್ಟ. ಆದರೆ ನಮ್ಮ ಸಹೋದರರು ಉತ್ತರ ಕರ್ನಾಟಕದಲ್ಲಿ 10-15 ಸಂಸ್ಥಾನಗಳ ಆಡಳಿತಕ್ಕೆ ಸಿಕ್ಕಿ ಅವರಿಗೆ ನಾಗರಿಕ ಮತ್ತು ಸುವ್ಯವಸ್ಥಿತವಾದ ಆಡಳಿತ ದೊರೆಯಲಿಲ್ಲ. ಇದು ಅವರ ದುರದೃಷ್ಟ. ಹೇಗೆಂದರೆ, ಒಂದು ಉದಾಹರಣೆ ಇದಕ್ಕೆ ಹೇಳುತ್ತೇನೆ. ಈಗ ಸುಮಾರು 30 ವರ್ಷಗಳ ಕೆಳಗೆ ನಾನು ಲಕ್ಷ್ಮೇಶ್ವರಕ್ಕೆ ಹೋಗಿದ್ದೆ. ಅಲ್ಲಿ ನಮಗೆ ವ್ಯಾಪಾರದ ಬಾಬ್ತು ಹಣ ಬರಬೇಕಾಗಿತ್ತು. ಮಿರಾಜ್ ಸಂಸ್ಥಾನಕ್ಕೆ ಸೇರಿದ ಊರು ಅದು. ಅಲ್ಲೊಬ್ಬರು ಮ್ಯಾಜಿಸ್ಟ್ರೇಟರಿದ್ದರು. ಅವರಿಗೆ ಮರಾಠಿ ವಿನಾ ಬೇರೆ ಭಾಷೆಯೇ ಬರುತ್ತಿರಲಿಲ್ಲ. ಒಂದಾನೊಂದು ದಿನ ಆ ಮ್ಯಾಜಿಸ್ಟ್ರೇಟರು ಹೋಟಲಿನಲ್ಲಿ ಸಿಕ್ಕಿದ್ದರು. 'ಏಕೆ ಬಂದಿರಿ' ಎಂದು ನಮ್ಮನ್ನು ಕೇಳಿದರು. ಬಾಕಿ ವಸೂಲಿಗಾಗಿ ಬಂದಿದ್ದೇವೆಂದು ನಾನು ಹೇಳಲು ಅವರು ಕೂಡಲೆ ಆ ಶೆಟ್ಟಿಯನ್ನು ಕರೆಸಿ 'ದುಡ್ಡು ಕೊಡುತ್ತೀಯೋ, ತುರಂಗಕ್ಕೆ ಹಾಕಿಸಲೋ' ಎಂದು ಕೇಳಿದರು. ಆ ವೈಶ್ಯರ ಸ್ಥಿತಿ ಚಿಂತಾಜನಕವಾಗಿತ್ತು. ನಮಗೆ ಅವರನ್ನು ನೋಡಿ ಪಶ್ಚಾತ್ತಾಪ ಬಂತು. ಕೊನೆಗೆ ನಾವೇ ಅವರು ತುರಂಗಕ್ಕೆ ಹೋಗುವುದೂ ಬೇಡ, ಹಣಕೊಡುವುದೂ ಬೇಡ ಎಂದು ಬಿಟ್ಟುಬಿಟ್ಟೆವು. ಅಲ್ಲಿನ ಆಡಳಿತ ಹಾಗಿತ್ತು. ನಮಗೆ ಸ್ವರಾಜ್ಯ ಬಂದ ಮೇಲೆ ಹಿಂದಿನ ಆ ಕಷ್ಟತಮವಾದ ಆಡಳಿತ ತಪ್ಪಿಸಿ ನಮ್ಮ ನೆರೆಹೊರೆಯವರೊಂದಿಗೆ ಸುಖವಾಗಿ ಬಾಳ್ವೆ ನಡೆಸಲು ತಕ್ಕ ವಾತಾವರಣವನ್ನು ಕಲ್ಪಿಸುವುದು ನಮ್ಮ ಕರ್ತವ್ಯ. ಹಾಗೆ ದೇಶವನ್ನು ವಿಸ್ತರಿಸಬೇಕೆಂದರೆ ಅತ್ತ ಕಡೆಯೇ ಏಕೆ ಹೋಗಬೇಕು ಎಂದು ಕೆಲವು ಸ್ನೇಹಿತರು ಕೇಳಿದರು. ಆಡಳಿತ ನಡೆಸಬೇಕಾದರೆ ಭಾಷೆಯೂ ಒಂದು ಮುಖ್ಯವಾದ ಅಂಶ. ಈಗ ಮದರಾಸಿನಲ್ಲಿ ನೋಡುವುದಾದರೆ, ಅಲ್ಲಿ ತಮಿಳೇ ಮುಖ್ಯ. ಕೇವಲ ನೂರಕ್ಕೆ 5-6 ಜನ ಮಾತ್ರ ಕನ್ನಡಿಗರಿದ್ದಾರೆ. ಅಲ್ಲಿನ ಶಾಸನ ಸಭೆಯಲ್ಲಿ ಕೇವಲ 5-6 ಜನ ಕನ್ನಡಿಗರ ಪರವಾಗಿ ಮಾತನಾಡಿದರೆ ಏನಾದರೂ ಆಗುತ್ತದೆಯೇ? ಮೈಸೂರಿಗೆ ನೆರೆಯಾಗಿರುವ ಪ್ರಾಂತ್ಯವಾಗಿದ್ದರೂ, 150 ಮೈಲಿ ದೂರದಲ್ಲಿರುವ ಮದ್ರಾಸಿನೊಂದಿಗೆ ಅವರೇಕೆ ಸೇರಬೇಕೋ ನನಗರ್ಥವಾಗುವುದಿಲ್ಲ.

ಅಲ್ಲದೆ, ಈಗ ನಮ್ಮ ದೇಶದಲ್ಲಿ ಗಡಿಗಳ ನಿರ್ಣಯಕ್ಕೆ ಇಂಡಿಯಾ ಸರ್ಕಾರದವರು ಪ್ರಯತ್ನಪಟ್ಟಿದ್ದಾರೆ. ಇದಕ್ಕಾಗಿ ಫಸಲಾಲಿ ಸಮಿತಿಯೆಂಬುದನ್ನು ಸೇರಿಸಿದ್ದಾರೆ. ಭಾಷಾವಾರು ತತ್ವಕ್ಕನುಗುಣವಾಗಿ ಆಂಧ್ರಪ್ರಾಂತ್ಯವಾಗಲೇ ರಚಿತವಾಗಿದೆ. ಆಂಧ್ರ

ಪ್ರಾಂತ್ಯವಾದ ಮೇಲೆ ಬಾಕಿ ಪ್ರಾಂತ್ಯಗಳೂ ಕೂಡ ಹೆಚ್ಚು ಕಡಮೆ ಈ ಪ್ರಾಂತ್ಯ ಪುನರ್ವಿಂಗಡಣೆಯ ಸಂಬಂಧದಲ್ಲಿ ಸರಹದ್ದುಗಳ ವ್ಯತ್ಯಾಸವನ್ನು ಹೊಂದಲೇಬೇಕು. ಈಗ ದಕ್ಷಿಣದಿಂದ ನೋಡುತ್ತಾ ಬಂದರೆ, ಮಲಯಾಳಿಗಳು ತಮಿಳರು ತಮ್ಮ ಹದ್ದು ಬಸ್ತು ಇಲ್ಲಿಯವರೆಗಿದೆಯೆಂದು ಹೇಳಿಬ್ದಾರೆ; ಆಂಧ್ರರೂ ತಮ್ಮ ಹದ್ದು ಬಸ್ತು ಇಲ್ಲಿಯವರೆಗೆ ಇದೆಯೆಂದು ಹೇಳಿದ್ದಾರೆ. ಆದ್ದರಿಂದ ಇನ್ನುಳಿದಿರುವ ಕರ್ಣಾಟಕವನ್ನು ಸೇರಿಸಬಹುದಾದರೆ ನಾವು ಸೇರಿಸಿಕೊಳ್ಳಬೇಕಾಗಿದೆ. ಕರ್ಣಾಟಕದವರೂ ನಮ್ಮೊಡನೆ ಸೇರುವುದಕ್ಕೆ ಆಸೆಯುಳ್ಳವರಾಗಿದ್ದಾರೆ. ಹೀಗೆ ಎಲ್ಲ ಕಡೆಯಿಂದಲೂ ನಮಗೆ ಅನುಕೂಲವಾಗಿರುವಾಗ ನಾವೇಕೆ ಸೇರುವುದಕ್ಕೆ ಅಡ್ಡಿ ಬರಬೇಕೋ ಗೊತ್ತಿಲ್ಲ. ಆಡಳಿತ ಸೌಕರ್ಯ ದೃಷ್ಟಿಯಿಂದ ಇವೆಲ್ಲಾ ಆಗಬೇಕಾಗಿವೆ. ಈಗ ನಮ್ಮ ಜೋಗ್ ಫಾಲ್ಸನ್ನೇ ತೆಗೆದುಕೊಳ್ಳಿ. ನೀರು ಬೀಳುವ ಪ್ರದೇಶ ನಮ್ಮ ದೇಶದಲ್ಲಿದೆ. ನೀರು ಬಿದ್ದು ಹರಿಯುವ ಪ್ರದೇಶ ಬೊಂಬಾಯಿ ಸರ್ಕಾರಕ್ಕೆ ಸೇರಿದೆ. ಅಲ್ಲಿ ವಿದ್ಯುಚ್ಛಕ್ತಿ ತಯಾರಿಸುವುದಕ್ಕೆ ಬೊಂಬಾಯಿ ಸರ್ಕಾರದವರೊಡನೆ ಸಂಧಾನ ಮಾಡಬೇಕಾಯಿತು.

12 NOON.

ಈಗ ಮದರಾಸಿನವರಿಂದ ನಮಗೆ ಯಾವ ಯಾವ ರೀತಿಯಲ್ಲಿ ಎಷ್ಟೆಷ್ಟು ತೊಂದರೆಯಾಗುತ್ತಾ ಇದೆ ಅನ್ನುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಆ ಒಂದು ಮೇಕೆದಾಟ್ ವಿಚಾರದಲ್ಲಿ ಇಷ್ಟು ತೊಂದರೆ ಬಂದಿದೆ. ಹೀಗೆ ದೇಶಗಳು ಬದಲಾಗಿದ್ದರೆ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳಿಗೆ ಬಹಳ ಕಷ್ಟವುಂಟಾಗುತ್ತವೆ. ಹೀಗೆ ಅಂಥ ತೊಂದರೆಗಳಾವವೂ ಇಲ್ಲದೆ ಸ್ವಭಾವಸಿದ್ಧವಾಗಿ ದೇಶಾಭಿವೃದ್ಧಿಗೆ ಇಂಥ ತೊಡಕುಗಳೆಲ್ಲಾ ತಪ್ಪಿಹೋಗಿ ಅನುಕೂಲ ಉಂಟಾಗತಕ್ಕಂಥ ಸನ್ನಿವೇಶವಿರುವಾಗ ಅದೆಲ್ಲಾ ಆಗಬಾರದು ಎಂದು ಅದಕ್ಕೇಕೆ ಯಾರೇ ಆಗಲಿ ಅಡ್ಡಿಪಡಿಸಬೇಕು ? ಆದರೆ ಈಗ ನಮಗೆ ಮುಖ್ಯವಾಗಿ ಬೇಕಾಗಿರುವುದು ಈ ಮೈಸೂರಿನವರು ಹೆಚ್ಚಾಗಿ ಮುಂದುವರಿದಿದ್ದಾರೆಯೇ ಅಥವ ಮೈಸೂರಿನ ಹೊರಗಡೆಯಿರತಕ್ಕವರು ಹೆಚ್ಚು ಮುಂದುವರಿದಿದ್ದಾರೆಯೇ ಎನ್ನುವಂಥ ವಿಷಯವಲ್ಲ. ಆದುದರಿಂದ ನಾನೀಗ ಆ ಪ್ರಶ್ನೆಗೆ ಪ್ರವೇಶ ಮಾಡುವುದಿಲ್ಲ. ಇಡೀ ಭರತಖಂಡದಲ್ಲಿರತಕ್ಕವರೆಲ್ಲರಿಗೂ ಒಂದೇ ಸರಿಸಮಾನವಾದಂಥ ಸ್ಥಾನಮಾನಗಳೂ, ಅನುಕೂಲಗಳೂ ಇರಬೇಕೆಂದು ಹೇಳುತ್ತಿರುವ ಕಾಲದಲ್ಲಿ, ನಾವು, ಹೆಚ್ಚು ಅವರು ಕಡಮೆ ಅನ್ನುವಂಥ ವಿಚಾರ ಇದರಲ್ಲಿ ಬರುವುದಕ್ಕೆ ಅವಕಾಶವೇ ಇಲ್ಲ. ದೇಶದಲ್ಲಿರತಕ್ಕ ಯಾವ ಜನಾಂಗಕ್ಕೇ ಆಗಲಿ ಅನ್ನ, ಬಟ್ಟೆ, ವಸತಿ ಇತ್ಯಾದಿ ಸೌಕರ್ಯಗಳಿಗೆ ಅಭಾವವಿರಬಾರದೆಂದು ಹೇಳುತ್ತಿರುವಾಗ ಈ ದಿವಸ ಇವರೆಲ್ಲರೂ ಈ ಒಂದು ರೀತಿಯಲ್ಲಿ ವಾದ ಮಾಡುತ್ತಿರುವುದನ್ನು ನೋಡಿದರೆ ಇದು ಅವರಲ್ಲಿರತಕ್ಕಂಥ ಒಂದು ಸಂಕುಚಿತ ಭಾವನೆಯನ್ನು ತೋರಿಸತಕ್ಕದ್ದಾಗಿದೆಯೇ ಹೊರತು ಬೇರೆ ಏನೂ ಇಲ್ಲ. ನಾವೆಲ್ಲರೂ ಈ ದಿವಸ ಅಂಥಾ ಒಂದು ಪಣತೊಟ್ಟು ಯಾವ ಒಂದು ಕೋಮಿನವರೇ ಆಗಿರಲಿ, ಅವರು ಮತ್ತೆ ಯಾವ ದೇಶದವರೇ ಆಗಿರಲಿ, ಅವರೆಲ್ಲರಿಗೂ ಯಾವ ಒಂದು ಕೊರತೆಯೂ ಇರಬಾರದೆಂದು ಹೇಳಿ, ಅದಕ್ಕೆ ಏನೇನು ಉಪಾಯಗಳನ್ನು ಮಾಡಬೇಕೋ ಅದಕ್ಕನುಸಾರವಾಗಿಯೇ ಈಗ ಈ ಪಾಂಚವಾರ್ಷಿಕ ಯೋಜನೆಯನ್ನು ದೇಶಾದ್ಯಂತವೂ ಕೈಗೊಳ್ಳಲಾಗಿದೆ. ದೇಶದಲ್ಲಿ ಯಾವ ಒಂದು ಮೂಲೆಯಾಗಲಿ ಅದು ಮುಂದುವರಿಯದೆ ಹಿಂದುಳಿದಿದ್ದರೆ ಅಂಥ ಪ್ರತಿಯೊಂದು ಭಾಗವನ್ನೂ ಅಭಿವೃದ್ಧಿಗೆ ತರುತ್ತೇವೆಂಬುದಾಗಿ ಕೇಂದ್ರ ಸರ್ಕಾರದವರು ನಮಗೆಲ್ಲಾ ತುಂಬ ಭರವಸೆಯನ್ನು ಕೊಟ್ಟಿದ್ದಾರೆ. ಈ ದಿವಸವಾದರೋ ನಾವು ಪ್ರತಿಯೊಂದು ಬಾಬಿಗೂ ಆ ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆಯಲೇಬೇಕಾಗಿದೆ. ಹೀಗಿರುವಾಗ ಯಾರು ಜಾಸ್ತಿ ಮುಂದುವರಿದಿದ್ದಾರೆ, ಯಾರು ಬಹಳ ಹಿಂದುಳಿದಿದ್ದಾರೆ ಎನ್ನುವುದನ್ನು ಚರ್ಚೆಮಾಡುವುದು ಅನವಶ್ಯಕ. ನಾವುಗಳು ಈ ಹಿಂದೆ ಎಲೆಕ್ಷನ್ ಕಾಲದಲ್ಲಿ ಜನರ ಮುಂದೆ ಏನೇನು ಹೇಳಿ ಅವರಿಗೆ ಆಶ್ವಾಸನವನ್ನು ಕೊಟ್ಟು ಬಂದಿರುತ್ತೇವೋ ಅಂಥ ಆಶ್ವಾಸನಗಳನ್ನೆಲ್ಲಾ ಈ ಅವಧಿಯಲ್ಲಿ ಈಡೇರಿಸಬೇಕು. ಇಲ್ಲವಾದರೆ ಮುಂದಿನ ಚುನಾವಣೆಗಳಲ್ಲಿ ಬಹಳ ಕಷ್ಟಕ್ಕೆ ಬರುತ್ತದೆ. ಈ ದಿವಸದ ಒಂದು ಇಂಗ್ಲೀಷ್ ಪೇಪರಿನಲ್ಲಿ ಹೀಗೆ ಹೇಳಿದ್ದಾರೆ.—

"The Kundah Project, in the Nilgiris District, which is estimated to cost about Rs. 40 crores is expected to generate at the initial stage, 180,000 K.W. In the final stage the production may go up to 375,000 K.W. In this connection, it may be noted that the Coorg Government are sponsoring the Barapole Project, approximately similar in size and generating capacity to the Kundah Project. The Planning Commission is now examining these two schemes.

Recently the Coorg Chief Minister came to Madras and had discussions with the Chief Minister of Madras and also the Public Works Minister of this State, in regard to the execution of the Barapole Project. He seems to have requested the Madras Government to give an assurance that they would consume sizable quantities of power produced by the Barapole project, as the Coorg State would not be in a position to consume all the power generated.

The Madras Government seems to have told the Coorg Chief Minister that they would not give any such assurance at this stage, particularly in view of the fact that they had decided to go ahead with the project in the Niligiris district. . ."

ಹೀಗಿದೆ. ಈಗಾಗಲೇ ಕೊಡಗಿನಲ್ಲಿ ನಲವತ್ತು ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟನ್ನು ಹಿಂದೆಯೇ ಮಾಡಿದ್ದರು. ಅದರಿಂದ ಕೋಟ್ಯಾಂತರ ರೂಪಾಯಿಗಳ ಪವರ್ ಉತ್ಪತ್ತಿ ಆಗುತ್ತದೆ. ಆದರೆ, ಆ ದೇಶ ಬಹಳ ಚಿಕ್ಕದು. —ಅಷ್ಟೊಂದು

(ಶ್ರೀ ಬಿ. ಹುಚ್ಚೇಗೌಡ.)

ಪವರನ್ನೂ ಆ ದೇಶ ಹೇಗೆ ಉಪಯೋಗಿಸಲು ಸಾಧ್ಯವಿದೆ? ಆ ಪವರನ್ನೆಲ್ಲಾ ಅವರೇನು ಮಾಡಬೇಕು? ಅವರು ಅದನ್ನು ಪಕ್ಕದಲ್ಲಿರುವ ಮೈಸೂರಿನವರಿಗೇ ಕೊಡಬೇಕಾಗುತ್ತದೆ. ಆದರೆ ಈಗ ನಮ್ಮ ಹೊನ್ನೇಮರಡಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿದರೆ ನಾವು ಆ ಕೊಡಗಿಗೂ ಕೊಡಬೇಕಾದ್ದು ಅಗತ್ಯ. ಆದರೆ ಇದು ಬೇಗ ಕಾರ್ಯಗತವಾಗಬೇಕು. ಏತಕ್ಕೋಸ್ಕರ ಮದರಾಸ್ ಸರ್ಕಾರ ಹಾಗೆ ಕೇಳಿಕೊಳ್ಳಬೇಕು? ಅವರು ನಮಗೆ ಬೇಡ ಬೇಡ ಎಂದು ಹೇಳುತ್ತಾರೆ. ನಮ್ಮ ಹೊನ್ನೇಮರಡು ಕಿತ್ತುಕೊಳ್ಳುವುದಕ್ಕೆ ಬಂದರು. ಮೈಸೂರಿಗೆ ಇರುವುದೇ ಸಾಕು. ಕೊಡಗಿನವರಿಗೆ ಮಾಡಿಕೊಡಬೇಕು ಎಂದರೆ ಎಷ್ಟು ದುಡ್ಡು ಕೇಂದ್ರ ಸರ್ಕಾರದವರು ಕೊಡಬೇಕು? ಈ ಭಿನ್ನ ಅಧಿಕಾರಿಗಳನ್ನು ನೇಮಿಸಬೇಕಾದರೆ, establishment ಇಟ್ಟುಕೊಳ್ಳಬೇಕಾದರೆ ಅವರಿಗೆ ಶಕ್ತಿ ಇದೆಯೇ? ಒಂದು ವೇಳೆ establishment ಇಟ್ಟುಕೊಂಡರೆ, ನಾಳೆ ದಿವಸ ಆ establishmentನ್ನು ಹೇಗೆ adjust ಮಾಡಿಕೊಳ್ಳುತ್ತಾರೆ? ಇದನ್ನೆಲ್ಲಾ ಯೋಚನೆ ಮಾಡಬೇಕು. ಸಣ್ಣ ಸಣ್ಣ ಸಂಸ್ಥಾನಗಳಿದ್ದು ಅಲ್ಲಿ ಒಂದು ದೊಡ್ಡ project ಇದ್ದರೆ ಅದನ್ನು ಹೇಗೆ ಕೈಗೊಳ್ಳುವುದು? ಉದಾಹರಣೆಗೆ ಕೊಡಗು ಸಂಸ್ಥಾನಕ್ಕೆ ನಲವತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ electricity ಕೊಡಲು ಸಾಧ್ಯವಿದೆ. ಹಾಗೆ ಮಾಡಿ ದೇಶಾಭಿವೃದ್ಧಿ ಮಾಡಲೇಬೇಕು. ಆದರೆ ಅದನ್ನು ಮಾಡುವುದಕ್ಕೆ ಶಕ್ತಿ ಇರುವುದಿಲ್ಲ. ಹೆಚ್ಚು ಕೈಗಾರಿಕೆಗಳ ಅನುಕೂಲತೆ ಇರುವಾಗ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬೇಕು. ಉತ್ತರ ಕರ್ನಾಟಕದವರಾಗಲಿ ಅಥವಾ ದಕ್ಷಿಣ ಕರ್ನಾಟಕದವರಾಗಲಿ ಎಲ್ಲರೂ ಕೂಡ ದೇಶದ ಅಭಿವೃದ್ಧಿ ಭಾವನೆಯಿಂದ ಕೆಲಸ ಮಾಡಬೇಕು. ನಾವು ಅವರಿಗಿಂತ ಒಂದು ವಿಧದಲ್ಲಿ ಹಿಂದುಳಿದಿದ್ದರೆ ಅವರು ಇನ್ನೊಂದು ವಿಧದಲ್ಲಿ ಮುಂದುವರಿದಿರಬಹುದು. ಅವನು ಕುಂಟನಾದರೆ ಇನ್ನೊಬ್ಬ ಕುರುಡ. ಕುರುಡನ ಹೆಗಲಿನಮೇಲೆ ಕುಂಟನನ್ನು ಕುಳ್ಳಿರಿಸಿಕೊಂಡು ಹೋಗಲು ಇಬ್ಬರೂ ಒಬ್ಬರಿಗೊಬ್ಬರು ಸಹಾಯಕರಾದರೆ ಅದರಿಂದ ಅನುಕೂಲವಾಗುತ್ತದೆ. ನಮ್ಮ ದೇಶದಲ್ಲಿ ಭೂಸಂಪತ್ತು ಹೆಚ್ಚಾಗಿಲ್ಲ. ಒಂಭತ್ತು ಎಕರೆಯಂತೆ ಒಬ್ಬೊಬ್ಬನ ತಲೆಗೆ ಬರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಜನಗಳನ್ನು ಅಲ್ಲಿಗೆ ಕಳುಹಿಸಿಕೊಡಬಹುದು.

ಶ್ರೀ ಬಿ. ಹುಚ್ಚೇಗೌಡ.—ಜನಗಳನ್ನು ಅಲ್ಲಿಗೆ ಕಳುಹಿಸಿಕೊಡುವುದಕ್ಕೆ ಬದಲಾಗಿ ಆ ಪ್ರದೇಶವನ್ನೇ ಇಲ್ಲಿಗೆ ತೆಗೆದುಕೊಳ್ಳಬಹುದು. ಹಿಂದುಳಿದವರನ್ನು ಹೊರಗೆ ಕಳುಹಿಸಬೇಕು, ಎಲ್ಲಿ ಉತ್ಪತ್ತಿ ಇಲ್ಲವೋ ಆ ಭಾಗ ಬೇಡ ಎಂದು ಹೇಳುವುದಾದರೆ, ನಮ್ಮ ದೇಶದಲ್ಲಿ ತುಮಕೂರು ಡಿಸ್ಟ್ರಿಕ್ಟ್, ಚಿತ್ರದುರ್ಗ ಡಿಸ್ಟ್ರಿಕ್ಟ್ ಮತ್ತು ಕೋಲಾರ ಡಿಸ್ಟ್ರಿಕ್ಟ್ deficit areas ಎಂದು ಹೇಳುತ್ತಾರೆ; ಹಾಗಾದರೆ ಈ ಮೂರನ್ನು ಕೈಬಿಟ್ಟುಬಿಡಲಿ. ಏಕೆಂದರೆ, ಅವು ಯಾರಿಗೂ ಬೇಕಿಲ್ಲ ಎನ್ನುತ್ತಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಕರ್ನಾಟಕ ಆಗಬೇಕಾದರೆ ಈ ರೀತಿ ಬಿಡಲೇ ಬೇಕಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅದು ಬಿಡಬೇಕಾದರೆ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ತೆಲುಗಿನಲ್ಲಿ ಮಾತನಾಡಬೇಕು. ಅವೊತ್ತಿನ ದಿವಸ ಬಿಡಬಹುದು. ಎಲ್ಲಿಯವರೆಗೆ ಕನ್ನಡ ಭಾಷೆಯಾಗಿರುತ್ತದೋ ಅಲ್ಲಿಯವರೆಗೆ ಆ ರೀತಿಯಾಗುವುದಿಲ್ಲ. ತಮಿಳರು ಮತ್ತು ತೆಲುಗರು ಇವೊತ್ತಿನ ದಿವಸ ಅವರ ಭಾಷೆ ಎಲ್ಲಿ record ಆಗುತ್ತದೋ, ಅಲ್ಲಿಗೆ ಹೋಗಲೇಬೇಕು. ಇದನ್ನು ಅನುಕೂಲಕ್ಕೋಸ್ಕರ ಮಾಡಿಕೊಂಡಿರುವುದು. ಇದಕ್ಕೆ ಅಡ್ಡಿ ಆತಂಕಗಳನ್ನು ತರುವುದಾದರೆ ನಿವಾರಣೆ ಮಾಡಲು ಎಲ್ಲೆಲ್ಲಿಗೆ ಹೋಗಬೇಕೋ ಅಲ್ಲಲ್ಲಿಗೆ ಹೋಗಬೇಕಾಗುತ್ತದೆ. ಭಾಷೆಯ ಮೇಲೆ ಆಗಬಾರದು ಎಂಬುದು ನನ್ನ ಅಭಿಪ್ರಾಯ. ಭಾಷೆಯ ಮೇಲೆ ಯಾವತ್ತೂ ಆಗಬಾರದು. ಆದರೆ ಆಡಳಿತ ದೃಷ್ಟಿಯಿಂದ, ದೇಶದ ಆರ್ಥಿಕ ದೃಷ್ಟಿಯಿಂದ ಪ್ರಾಂತಗಳಿಗೆ ಈಗಿರತಕ್ಕ ಗಡಿಗಳು ಸರಿಯಲ್ಲ. ಸ್ವಾಭಾವಿಕವಾಗಿ ಗಡಿಗಳು ಎಲ್ಲಿಯವರೆಗೆ ಹೋಗಬೇಕೋ ಅಲ್ಲಿಯವರೆಗೆ ಹೋಗಬೇಕಾದದ್ದು ಅನಿವಾರ್ಯ. ಈಗಾಗಲೇ ಹೇಳಿದ ಹಾಗೆ ಸಣ್ಣ ಸಣ್ಣ ಸಂಸ್ಥಾನಗಳನ್ನು ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಕೊಡಗು ಸರ್ಕಾರಕ್ಕೆ ಇದೇ ರೀತಿ subsidy ಕಟ್ಟಿಕೊಂಡು ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲ. 1—2½ ಲಕ್ಷ ಪ್ರಜೆಗಳು ಇರುವುದಕ್ಕೆ ಒಂದು ಆಡಳಿತ, ಇಬ್ಬರು ಮಂತ್ರಿಗಳು ಇಪ್ಪತ್ತೈದು ಶಾಸನ ಸಭಾ ಸದಸ್ಯರು, ಇವರಿಗೆ ಕೋರ್ಟು ಕಚೇರಿ ಇರಬೇಕಾದರೆ, ಅವರಿಗೆ ಎಷ್ಟರಮಟ್ಟಿನ ತಲೆಭಾರ ಆಗುತ್ತದೆ. Top-heavy administration ಆಗುತ್ತದೆ ಎಂಬುದನ್ನು ನೋಡಿ. ಅವರಿಗೆ ಇದು ನ್ಯಾಯವಾಗಿ ಕಾಣಬಹುದು. ಹಾಗೆ ನೋಡುವುದಕ್ಕೆ ಹೋದರೆ, ಪ್ರತಿಯೊಂದು ತಾಲ್ಲೂಕ್ ಆಡಳಿತವನ್ನು ತನ್ನದೇ ಮಾಡಿಕೊಳ್ಳಬೇಕು ಎಂದರೆ ಸಾಧ್ಯವಿಲ್ಲ. ಒಂದೊಂದು ಊರಿನವರು ಆಡಳಿತ ನಡೆಸಿಕೊಳ್ಳುತ್ತೇವೆಂದರೆ ಇಡೀ ದೇಶದ ಆಡಳಿತ ಹೇಗೆ ಆಗಬೇಕೋ ಅರ್ಥವಾಗುವುದಿಲ್ಲ.

12-30 P.M.

ಈ ಸಂದರ್ಭದಲ್ಲಿ ನಮ್ಮ ಮುಲ್ಕ ಗೋವಿಂದರೆಡ್ಡಿಯವರು ಒಂದು ಪ್ರಶ್ನೆ ಹಾಕಿದರು. ಅದಕ್ಕೆ ನಾನು ಹೇಳುವುದಿಷ್ಟೆ; ಅವರು ಭಾಷೆಯ ಮೇಲೆ ತಮ್ಮ ವಾದವನ್ನಿಟ್ಟರು. ನಾನು ಅವರಂತೆ ಭಾಷೆಯ ಮೇಲೆ ಹೇಳುವುದಿಲ್ಲ. ಅವರು ವಿಶಾಲಾಂಧ್ರ ಸಮಿತಿಗೆ ವೈಸ್ ಪ್ರೆಸಿಡೆಂಟರಾಗಿ ಅಲ್ಲಿದ್ದುಕೊಂಡ ಕೋಲಾರ ಡಿಸ್ಟ್ರಿಕ್ಟು ನಮಗೆ ಸೇರಬೇಕು, ಬೆಂಗಳೂರು ಜಿಲ್ಲೆಯ ಮೂರು ತಾಲ್ಲೂಕುಗಳು, ತುಮಕೂರು ಜಿಲ್ಲೆಯ 3 ತಾಲ್ಲೂಕುಗಳು ಚಿತ್ರದುರ್ಗದ ನಾಲ್ಕು ತಾಲ್ಲೂಕುಗಳು ಆಂಧ್ರಕ್ಕೆ ಸೇರಬೇಕೆಂದು ಹೇಳಿದ್ದಾರೆ. ಅದಕ್ಕಾಗಿಯೇ ಬೌಂಡರಿ ಕಮಿಷನ್ ಒಂದನ್ನು ಸ್ಥಾಪಿಸಬೇಕೆಂದೂ ಹೇಳುತ್ತಿದ್ದಾರೆ. ಇಂಡಿಯಾ ಸರ್ಕಾರದವರು ಬೌಂಡರಿ ಕಮಿಷನ್ ಮಾಡಿದ್ದಾರೆ. ಅವರೂ ಬರುವವರಾಗಿದ್ದಾರೆ. ಅದರಂತೆ ಬೌಂಡರಿ ಕಮಿಷನವರು ಬಂದು ಊರೂರಿಗೆ ಹೋಗಿ ಕೇಳಿಕೊಂಡು ಹೋಗುತ್ತಾರೆ. ಆಗ್ಗೆ ಕೋಲಾರದವರು ಹೋಗಬೇಕೆಂದಿದ್ದರೆ ಅವರಿಗೆ ಹೋಗುವುದಕ್ಕೆ ಬಿಡುತ್ತಾರೆ ಅಷ್ಟೆ. ಆದರೆ ಇವೊತ್ತಿನ ದಿವಸ ಆರೀತಿ ಕಮಿಷನ್ನಿನವರು ಊರು ಊರಿಗೂ ಬಂದು ಕೇಳುವಾಗ ಜನರು ಮೈಸೂರಿನಲ್ಲಿರುವುದಕ್ಕೆ ಇಷ್ಟಪಡುವುದಾಗಿ ಹೇಳುತ್ತಾರೋ ಅಥವಾ ಹೊರಗೆ ಹೋಗುವುದಕ್ಕೆ ಇಷ್ಟಪಡುತ್ತಾರೋ ಹೇಳುವುದಕ್ಕಾಗುವುದಿಲ್ಲ. ಮುಲ್ಕ ರೆಡ್ಡಿಯವರೇನೋ ಇಲ್ಲಿ ಹೇಳಬಹುದು, ಆದರೆ ಊರೂರಿಗೂ ಹೋಗಿ ಕೇಳಿದರೆ ಬೇರೆ ಅಭಿಪ್ರಾಯ ಬರಬಹುದು. ಆಂಧ್ರ

ಪ್ರಾಂತ್ಯ ಮಾಡಿ ಎಷ್ಟು ಕಷ್ಟ ಬಂದಿದೆಯೆಂಬುದು ಗೊತ್ತೇ ಇದೆ. ಇನ್ನೂ ಬಳ್ಳಾರಿಯನ್ನು ವಿಭಜನೆ ಮಾಡಬೇಕೆಂದು ಮಾಡುತ್ತಿದ್ದಾರೆ. ಬೌಂಡರಿ ಕಮಿಷನ್ ಕೂಡ ಬರುತ್ತದೆಂದು ಹೇಳುತ್ತಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಯಾರೇ ಆಗಲಿ ಮೈಸೂರಿಗೆ ಸೇರಬೇಕೆಂದಿದ್ದರೆ ಅದಕ್ಕೆ ನಮ್ಮದೇನೂ ಅಡ್ಡಿಯಿಲ್ಲವೆಂದು ನಾವು ನಮ್ಮ ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿಯಲ್ಲೇ ಹೇಳಿದ್ದೇವೆ. ಅಲ್ಲದೆ, ಇನ್ನೊಂದು ಭಾವನೆಯೂ ನಮ್ಮಲ್ಲಿರಬೇಕು. ಯಾರೇ ಆಗಲಿ, ಹೊರಗಿನವರು ತಾವು ಮೈಸೂರಿಗೆ ಸೇರಿ ಅಭಿವೃದ್ಧಿ ಗೊಳ್ಳಬೇಕು, ಒಟ್ಟಿಗೆ ಸೇರಿದರೆ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಸಾಧನ ಸಂಪತ್ತುಗಳು ದೊರೆಯುತ್ತವೆಂದು ಹೇಳಿಕೊಳ್ಳುತ್ತಿರುವಾಗ, ನಾವು ಸಂಕುಚಿತ ದೃಷ್ಟಿಯನ್ನು ಬಿಟ್ಟು ಉದಾತ್ತ ಭಾವನೆಯನ್ನು ತೋರಬೇಕು. ಈ ಕಡೆಯವರು ಬೇಡವೆಂದರೆ ಆ ಕಡೆಯವರೂ ಬೇಡವೆಂದರೆ, ಆ ಪ್ರದೇಶ ಏನಾಗಬೇಕು? ರಾಜಾಸ್ಥಾನದಲ್ಲಿ ಏನೂ ಬೆಳೆಯುವುದಿಲ್ಲವೆಂದು ಹೇಳಿ ಅದನ್ನು ಬಿಟ್ಟುಬಿಡುತ್ತೇವೆಯೇ? ನಮ್ಮ ದೇಶದಲ್ಲಿ ಹರಿಜನರು ಹಿಂದೆ ಬಿದ್ದಿದ್ದಾರೆಂದು ಎಲ್ಲರೂ ಹೇಳುತ್ತಿದ್ದೇವೆ. ಅವರನ್ನೀಗ ಮುಂದೆ ತರುವುದಕ್ಕೆ ನಾವು ಬದ್ಧರಾಗಿಲ್ಲವೇ? ಅದೇ ರೀತಿ ಯಾವುದೇ ಪ್ರದೇಶ ಹಿಂದೆ ಬಿದ್ದಿದ್ದರೂ ಅದನ್ನು ಮುಂದಕ್ಕೆ ತರಬೇಕಾದ್ದು ನಮ್ಮ ಧರ್ಮ. ಶ್ರೀಮತಿ ಲಕ್ಷ್ಮಿದೇವಿರಾಮಣ್ಣರವರು ಹೇಳಿದಂತೆ ಅವರು ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿರಬಹುದು. ಆ ಅಂಕಿ ಅಂಶಗಳನ್ನು ನಾನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ಏಕೆಂದರೆ ಸಮಿತಿಯವರು ಬರೆದಿರುವುದರಲ್ಲಿ ಬಹಳಮಟ್ಟಿಗೆ ಭಯವನ್ನು ಉಂಟುಮಾಡುವ ಕೆಲವು ಪದಗಳನ್ನು ಸೇರಿಸಿದ್ದಾರೆ. ಹಿಂದೆ ಸರ್ಕಾರದವರು ಸಿಂಧ್ ಪ್ರಾಂತ್ಯ, ಒರಿಸ್ಸಾ ಪ್ರಾಂತ್ಯಗಳನ್ನು ಭಾಷೆಯ ಮೇಲೆಯೇ ಮಾಡಲಿಲ್ಲವೆ? ಮಾಡಿದಾಗ ಅವು ಕೊರತೆಯ ಪ್ರಾಂತ್ಯಗಳೇ ಆಗಿರಲಿಲ್ಲವೇ? ಸರ್ಕಾರದವರು ಅವಕ್ಕೆ ಮುಂಚೆ ಮುಂಚೆ ಗ್ರ್ಯಾಂಟ್ ಕೊಟ್ಟು ಸಹಾಯ ಮಾಡಿದರು. ಇವೊತ್ತಿನ ದಿವಸ ಅವುಗಳೆಲ್ಲಾ ಚೆನ್ನಾಗಿ ಸರ್ಕಾರ ನಡೆಸಿಕೊಂಡು ಹೋಗುತ್ತಿಲ್ಲವೇ? ಈಗ ನಾನು ತಮಗೆ ಉದಾಹರಣೆಗಾಗಿ ಇನ್ನೊಂದು ವಿಚಾರ ಹೇಳುತ್ತೇನೆ. ಈಗ ನಮ್ಮ ದೇಶ ಬಹಳ ಅಭಿವೃದ್ಧಿಗೆ ಬಂದಿದೆ ಎಂದು ನಾವು ಹೇಳುತ್ತಿದ್ದೇವೆ. ಹೀಗಿದ್ದರೂ ನಾವು ಪ್ರತಿಯೊಂದು ಕೆಲಸಕಾರ್ಯಗಳಿಗೂ ಆ ಸೆಂಟರಿನವರಿಂದ ಗ್ರ್ಯಾಂಟನ್ನು ಪಡೆಯದೆ ನಮ್ಮ ಕೆಲಸಕಾರ್ಯಗಳನ್ನು ಮುಂದುವರಿಸಲು ಸಾಧ್ಯವಾಗಿಲ್ಲ. ಹೀಗೆ ನಾವು ಪರರನ್ನು ಆಶ್ರಯಿಸಿಕೊಂಡ ಎಷ್ಟುದಿವಸ ಕೆಲಸಮಾಡಲು ಸಾಧ್ಯವಾದೀತು? ನಮ್ಮಲ್ಲಿ ಈ ದಿವಸ ಈ ನೀರಾವರಿ ಯೋಜನೆಗಳು ಹೇಗೆ ಇವೆಯೋ ಅಲ್ಲಿಯೂ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿದ್ದೇ ಇವೆ. ಆ ತುಂಗಭದ್ರಯೋಜನೆಯೊಂದರಿಂದಲೇ ಆ ರಾಯಚೂರು ಜಿಲ್ಲೆಯಲ್ಲಿ 5 ಸಾವಿರ ಎಕರೆಗಳು ಸಾಗುವಳಿಗೆ ಬಂದಿದೆ. ಇದೇರೀತಿ ಇನ್ನೂ ಅನೇಕ ಜಿಲ್ಲೆಗಳಲ್ಲಿ ಲಕ್ಷಾಂತರ ಎಕರೆಗಳ ಭೂಮಿ ನೀರು ಸಾಗಿಗೆ ಬಂದಿದೆ. ಆದುದರಿಂದ ಆ ಪ್ರದೇಶಗಳೇನೂ ಮುಂದುವರಿದೇ ಇಲ್ಲ ಎಂದು ಮಾಡತಕ್ಕ ವಾದ ಸರಿಯಾದ್ದಲ್ಲ. ಎಲ್ಲೆಲ್ಲಿ ಉಳತಕ್ಕಂಥ ಭೂಮಿ ಜಾಸ್ತಿಯಾಗಿದೆಯೋ ಅಂಥ ಕಡೆಗೆ ಜಮೀನಿಲ್ಲದಂಥ ಪ್ರದೇಶದಲ್ಲಿರುವ ಜನರನ್ನು ವರ್ಗಾಯಿಸಲೇ ಬೇಕಾಗುತ್ತದೆ. ಈ ದಿವಸ ಯಾರುಯಾರಿಗೆ ಜಮೀನು ಜಾಸ್ತಿಯಾಗಿತ್ತೋ ಅಂಥವರಿಂದ ಅವನ್ನೆಲ್ಲಾ ಕಿತ್ತುಕೊಂಡು ಯಾರುಯಾರಿಗೆ ಉಳಲು ಜಮೀನಿಲ್ಲವೋ ಅಂಥವರಿಗೆಲ್ಲಾ ಜಮೀನನ್ನು ಹಂಚುತ್ತಿರುವಂಥ ಕಾಲದಲ್ಲಿ, ಹೀಗೆಲ್ಲಾ ಹೇಳುವುದು ಸರಿಯಾದದ್ದಲ್ಲ. ಹೊಟ್ಟೆಗಿಲ್ಲದೆ ಸಾಯುತ್ತಿರುವವರನ್ನು ಹಾಗೆ ನೋಡಿಕೊಂಡು ಸುಮ್ಮನೆ ಇರಲು ಯಾರಿಗೂ ಸಾಧ್ಯವಿಲ್ಲ.

ಅಧ್ಯಕ್ಷರು.—ಎಲ್ಲರನ್ನೂ ಒಂದೇ ಸಮಾನವಾದಂಥ ಭಾವನೆಯಿಂದ ನೋಡುವುದಕ್ಕೆ ಅವಕಾಶ ಮಾಡುತ್ತಿದ್ದೇವೆಂದು ಹೇಳಿದ್ದಾರಲ್ಲ.

ಶ್ರೀ ಬಿ. ಹುಚ್ಚೇಗೌಡ.—"ಅದು ಏನಾದರೂ ಇರಲಿ, ಮೈಸೂರು ಸಂಸ್ಥಾನದ ನಾನ್‌ಗೆಜೆಟೆಡ್ ದರ್ಜೆಯಲ್ಲಿರುವವರು ತಮ್ಮ ಸಂಬಳದ ಸ್ಕೇಲುಗಳನ್ನು ಇತರ ರಾಜ್ಯಗಳಲ್ಲಿರುವ ಸಂಬಳದ ಸ್ಕೇಲುಗಳ ಮಟ್ಟಕ್ಕೆ ಹೆಚ್ಚಿಸಿ ಕೊಡಬೇಕೆಂದು ಕೇಳಿದರಂತೂ ಅವರ ಕೋರಿಕೆಯನ್ನು ನಿರಾಕರಿಸಿ ತಡೆಯುವುದಕ್ಕೆ ಬಹಳ ಕಷ್ಟವಾಗುವುದು." ಎಂದು ಈ ಶೇಷಾದ್ರಿ ವರದಿಯಲ್ಲೇ ಹೇಳಿದೆ. ಈಗ ನಮ್ಮ ಮೈಸೂರು ಎಷ್ಟಿದೆಯೋ ಅಷ್ಟೇ ಇರಲಿ, ಇದು ಹೀಗೆ ಇದ್ದು ಬಿಟ್ಟರೆ ಇವರ ಸಂಬಳ ಸಾರಿಗೆಗಳನ್ನೇನೂ ಜಾಸ್ತಿ ಮಾಡುವುದು ಬೇಡ ಎಂದು ಕೆಲವರು ಹೇಳುತ್ತಿದ್ದಾರೆ. ಇವರು ಎಷ್ಟೇ ಹೇಳಿದರೂ ಆ ನೌಕರರುಗಳಿಗೆ ಅವರ ಮಿನಿಮಂ ವಾಂಟ್ಸ್‌ಗಳನ್ನು ಕೊಡುವಂತೆ ಒತ್ತಾಯಪಡಿಸಲು ಅವರಿಗೆ ಅವಕಾಶವಿದ್ದೇ ಇದೆ. ಹಾಗಿರುವಾಗ ಈ ಸಭೆಯಲ್ಲಿ ಕೆಲವರು ದೇಶ ವಿಶಾಲವಾಗದೆ ಇದನ್ನು ಹೀಗೆ ತಡೆದುಬಿಟ್ಟರೆ ನಮ್ಮ ಸರ್ಕಾರಕ್ಕೆ ಹೆಚ್ಚಿನ ಸಂಬಳ ಸಾರಿಗೆಗಳನ್ನು ತೆರುವುದು ತಪ್ಪುತ್ತದೆ ಎಂದು ಹೇಳಿರುವುದು ಅದೊಂದು ಶುದ್ಧ ದಡ್ಡತನವೇ ಸರಿ. ನೆರೆಹೊರೆಯ ರಾಜ್ಯಗಳು ಕೊಡುತ್ತಿರುವಂಥ ಸಂಬಳ ಸಾರಿಗೆಗಳ ಪರಿಣಾಮ ನಮ್ಮ ದೇಶದ ಮೇಲೂ ಉಂಟಾಗುತ್ತದೆ. ಈಗಾಗಲೇ ಈ I.P.S. ಮತ್ತು I.A.S. ಗಳ ಗಲಾಟೆ ಅಲ್ಲಲ್ಲೇ ನಡೆಯುತ್ತಿದೆ. ಇಂಥಾದ್ದಕ್ಕೆಲ್ಲ ನಾವು ಅವಕಾಶ ಕೊಡದಂತೆ ಜಾಣತನದಿಂದ ನಡೆಯುವುದು ಉತ್ತಮ.

ಇನ್ನೊಂದು ವಿಚಾರವನ್ನು ಈ ವರದಿಯಲ್ಲಿ ಹೀಗೆ ಹೇಳಲಾಗಿದೆ. "ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಅಪೀಲುಗಳನ್ನು ವಿಚಾರಿಸುವುದಕ್ಕೆ ಅನುಕೂಲವನ್ನುಂಟುಮಾಡುವುದಕ್ಕಾಗಿ ರೆವಿನ್ಯೂ ಕಮಿಷನರು ಸ್ಥಳದಲ್ಲಿ ಅಪೀಲುಗಳನ್ನು ಇತ್ಯರ್ಥ ಮಾಡಲು ಸಾಧ್ಯವಿಲ್ಲವಾದ್ದರಿಂದ ಆಯಾಯ ಸ್ಥಳಗಳಿಗೇ ಭೇಟಿ ಕೊಡಬೇಕಾಗುತ್ತದೆ" ಎಂದು ಹೇಳಿ ಇವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕಾಗಿದ್ದರೆ 500 ಮೈಲಗಳ ಮೇಲಾಗುತ್ತದೆಂದು ಹೇಳಿದ್ದಾರೆ. ಹೀಗೆಲ್ಲಾ ಬರೆದು ಇವರು ಯಾರನ್ನು ಹೀಗೆ ಹೆದರಿಸಬೇಕೆಂದು ಮಾಡಿದ್ದಾರೆ ಅನ್ನುವುದೇ ನನಗೆ ಗೊತ್ತಾಗುತ್ತಿಲ್ಲ. ಇದೇ ರೀತಿ "ನಮ್ಮ ಹೈಕೋರ್ಟಿನ ವಿಚಾರದಲ್ಲಿಯೂ ಜಡ್ಜಿಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದ ಅವಶ್ಯಕತೆಯಿದೆಯೆಂದೂ, ಕಕ್ಷಿಗಾರರು ಬಹಳ ದೂರದಲ್ಲಿರುವ ಸ್ಥಳಗಳಿಂದ ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಆ ಪ್ರದೇಶಗಳ ಕೇಂದ್ರವಾಗಿರುವ ಒಂದು ಸ್ಥಳದಲ್ಲಿ ಒಂದು ಹೈಕೋರ್ಟು ಬೆಂಚನ್ನು ಏರ್ಪಡಿಸುವ ವಿಷಯವನ್ನು ತೀವ್ರವಾಗಿ ಪರ್ಯಾಲೋಚಿಸಬೇಕಾಗುವುದೆಂದೂ" ಹೇಳಿದ್ದಾರೆ. ಈ ದಿವಸ ಹೀಗೆ ರಾಜ್ಯವನ್ನು ವಿಸ್ತಾರ ಮಾಡಿರತಕ್ಕಂಥ ಕಡೆಗಳಲ್ಲಿ ಎಲ್ಲೆಲ್ಲಿ ಹೈಕೋರ್ಟುಗಳ ಬೆಂಚನ್ನು ಸ್ಥಾಪನೆ ಮಾಡಿದ್ದಾರೆ ಹೇಳಲಿ! ಆದರೆ ಹೀಗೆಲ್ಲಾ ಸಂಕುಚಿತ ಭಾವನೆಯಿಂದ ಮಾನ್ಯ ಸದಸ್ಯರು ರಾಜ್ಯ ವಿಸ್ತರಣೆ ಬೇಡ ಎಂದು ಹೇಳುವುದು ಸರ್ವಥಾ ಸರಿಯಾದ್ದಲ್ಲ ಎಂದು ಹೇಳು

(ಶ್ರೀ ಬಿ. ಹುಚ್ಚೇಗೌಡ.)

ತ್ತೇನೆ. ಆದರೆ ಈ ಸಮಿತಿಯವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳೂ ಕೂಡ ಸರಿಯಾಗಿಲ್ಲ. ಮುಖ್ಯವಾಗಿ ಹೊರಗಡೆಯ ಆ ದೇಶ ಸೇರಿಸಿಕೊಳ್ಳಬೇಕು, ಈ ದೇಶ ಸೇರಿಸಿಕೊಳ್ಳಬೇಕು ಎಂದು ನಾವು ಮೇಲೆ ಬಿದ್ದು ಹೋಗಿಲ್ಲ. ಒಂದು ವೇಳೆ ನಮ್ಮ ಆಡಳಿತ ಸುಭದ್ರವಾಗಿ ಬಹಳ ವಿಚಕ್ಷಣೆಯಿಂದ ನಡೆಯುತ್ತಿದೆ ಎಂದು ತಿಳಿದು ನಮ್ಮನ್ನು ಸೇರಿಸಿಕೊಳ್ಳಬೇಕು, ಎಂದು ಹೇಳಿದರೆ ನಾವು ಏತಕ್ಕೆ ಮುಖ ತಿರುಗಿಸಿಕೊಳ್ಳಬೇಕು ಎಂಬುದು ಅರ್ಥವಾಗುವುದಿಲ್ಲ. ಅವರು ನಮ್ಮನ್ನು ಸೇರಿ ಅಭಿವೃದ್ಧಿ ಆಗಬೇಕು ಎನ್ನುತ್ತಾ ಇದ್ದರೆ ನಾವೂ ಕೂಡ ನಮ್ಮಲ್ಲಿರತಕ್ಕಂಥ ಆಡಳಿತ ವಿಚಕ್ಷಣೆ ಮತ್ತು ನಮ್ಮಲ್ಲಿರುವ ಆರ್ಥಿಕ ಸ್ಥಿತಿಯನ್ನು ಇನ್ನೂ ಉತ್ತಮ ಮಾಡುವುದು ಒಂದು ಹೆಮ್ಮೆ ವಿಚಾರ. ಇದನ್ನು ಸರ್ವರೂ ಕೂಡ ಸಂತೋಷ[illegible] ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ. [illegible]ಗಳಿಗೆ ಪ್ರತಿಯೊಬ್ಬರಿಗೂ ಅನ್ನ ಬಟ್ಟೆ, ವಸತಿಯನ್ನು ಒದಗಿಸಬೇಕಾದುದು ನಮ್ಮ ಮುಖ್ಯ ಕರ್ತವ್ಯ. ಯಾವ ಪ್ರಾಂತ್ಯದಲ್ಲೇ ಇರಲಿ ಆ ಕೊರತೆಯನ್ನು ನೀಗಬೇಕಾದುದು ಆಧುನಿಕ ಕಾಲದ ಗೌರವ ಉಳಿಸಬೇಕಾದ್ದು ಪ್ರತಿಯೊಬ್ಬನ ಕರ್ತವ್ಯ. ಎಷ್ಟೋ ವರ್ಷಗಳಿಂದ ನಮ್ಮ ದೇಶದಲ್ಲಿ ವೈಶಿಷ್ಟ್ಯವಿದೆ, ನಮ್ಮ ದೇಶದ ಆಡಳಿತ ಚೆನ್ನಾಗಿದೆ, ನಾವು ಪ್ರಗತಿ ಮಾರ್ಗದಲ್ಲಿದ್ದೇವೆ ಎಂದು ಹೇಳುವವರು ನಾವು ಏತಕ್ಕೆ ಹಿಂದೇಟು ಹಾಕಬೇಕು ! ಅದಕ್ಕಿಂತ ಹೇಯವಾದ ಕೆಲಸ ಬೇರೆ ಇಲ್ಲ. ತೆಲುಗು ಭಾಷೆಯವರದು ಬಹಳ ಗಲಾಟೆಯಾಗಿದೆ, ಕೋಲಾರ ಡಿಸ್ಟ್ರಿಕ್ಟ್ ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ಬೆಂಗಳೂರು ಉತ್ತರ ಮತ್ತು ದಕ್ಷಿಣ, ಹೊಸಕೋಟೆ, ಮೊಳಕಾಲ್ಮೂರು, ಚಿತ್ರದುರ್ಗ, ಪಾವಗಡ, ಮಧುಗಿರಿ,—ಕೊರಟಗೆರೆ ಈ ತಾಲ್ಲೂಕುಗಳು ಅವರಿಗೆ ಬೇಕೆಂದು ಕೇಳಿ ನಾವು ಇವತ್ತು ಭಾಷೆಯ ಮೇಲೆ ಕೇಳುವುದಕ್ಕೆ ಹೋಗಿಲ್ಲ. ಕೇವಲ ಆಡಳಿತದ ದೃಷ್ಟಿಯಿಂದ ಕೇಳುತ್ತಿದ್ದೇವೆ. ಅದು ಭಾಷೆಯ ಮೇಲೆ ಸಿಕ್ಕಬೇಕಾಗಿದ್ದರೆ, ಅವರು "ನಮ್ಮನ್ನು ಸೇರಿಸಿಕೊಳ್ಳಬೇಕು" ಎಂದು ಆಕಾಂಕ್ಷೆಯನ್ನು ವ್ಯಕ್ತಪಡಿಸಬೇಕಾಗಿದ್ದರೆ, ನಾವು ಯಾವ ವಿಧವಾದ ಅಡ್ಡಿಯನ್ನೂ ಅದಕ್ಕೆ ಮಾಡಬಾರದು ಎಂದು ಹೇಳುತ್ತೇನೆ. ನಮ್ಮ ಇಂಡಿಯಾ ದೇಶದಲ್ಲಿ ಎಷ್ಟೋ ಶತಮಾನಗಳಿಂದಲೂ ಕೂಡ ಯಾವುದನ್ನು ನಿರೀಕ್ಷೆ ಮಾಡುತ್ತಿದ್ದೇವೋ ಅದಕ್ಕೆ ಅವಕಾಶವನ್ನು ಈಗ ಭಗವಂತನು ಕೊಟ್ಟಿದ್ದಾನೆ. ಇಂಡಿಯಾ ದೇಶವೆಲ್ಲಾ ಏಕರಾಷ್ಟ್ರವಾಗಿ ಆಡಳಿತ ಸರಿಯಾದ ವಿಚಕ್ಷಣೆಯಿಂದ ನಡೆಸಿಕೊಳ್ಳುವುದಕ್ಕೆ ದೇವರು ಅವಕಾಶ ಕೊಡಬೇಕಾಗಿದ್ದರೆ, ಆ ಅವಕಾಶವನ್ನು ಪ್ರತಿಯೊಬ್ಬರೂ ಉಪಯೋಗಿಸಿಕೊಂಡು, ಕೇವಲ ಸಂಕುಚಿತ ಮನೋಭಾವನೆ ಬಿಟ್ಟು, ಈ ಪ್ರಶ್ನೆಯನ್ನು ವಿಮರ್ಶಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ, ಹಿಂದೆ ನಮ್ಮ ದೇಶದಲ್ಲಿ 562 ಸಂಸ್ಥಾನಗಳಿದ್ದವು. ಅವು ಹಾಗೆಯೇ ಮುಂದುವರಿದಿದ್ದರೆ, ಎಷ್ಟು ತಾಪತ್ರಯ ಬರುತ್ತಿತ್ತು ? ಆಡಳಿತ ಎಷ್ಟು ಕಷ್ಟವಾಗುತ್ತಿತ್ತು? ಎಂಬುದನ್ನು ಯೋಚನೆಮಾಡಿ. ಈಗ ಒಂದು ಸದವಕಾಶ ಸಿಕ್ಕದೆ. ಇಂತಹ ಸಂದರ್ಭದಲ್ಲಿ ಆಡಳಿತವನ್ನು ದಕ್ಷತೆಯಿಂದ, ಮಿತವ್ಯಯದಿಂದ ನಡೆಸುವುದಕ್ಕೆ ಅವಕಾಶವಿದೆ. ದೇಶ ದೊಡ್ಡದಾದರೆ ಆಡಳಿತ ಖರ್ಚು ಕಡಿಮೆಯಾಗುತ್ತದೆ. ಈಗ ನಿರುದ್ಯೋಗ ಸಮಸ್ಯೆ ಕೂಡ ಎಷ್ಟೋ ಹೆಚ್ಚಾಗಿದೆ. ಹಾಗೆಯೇ ಕೆಲವು ಕಡೆ ಅಭಿವೃದ್ಧಿ ನಡೆಯಬೇಕಾಗಿದೆ. ಇದಕ್ಕೆ ಒಂದು ಅವಕಾಶ ಸಿಕ್ಕಿದರೆ, ಎಷ್ಟೋ ಕಡೆ ನಿರುದ್ಯೋಗ ಸಮಸ್ಯೆಯೂ ಕೂಡ ಪರಿಹಾರವಾಗುತ್ತದೆ. ಅಲ್ಲದೆ, ಮಲೆನಾಡು ಇತ್ತಕಡೆ ಅರ್ಧ, ಅತ್ತಕಡೆ ಅರ್ಧ ಸೇರಿದೆ. ಈ ಎರಡು ಪ್ರಾಂತಗಳೂ ಒಂದುಗೂಡಿದರೆ ಈ ಸಮಸ್ಯೆಯೂ ಬಗೆಹರಿಯುತ್ತದೆ.

ಒಟ್ಟಿನಲ್ಲಿ ಎಷ್ಟು ಪ್ರದೇಶ ಸೇರಿದರೆ ಅಷ್ಟೂ ಒಳ್ಳೆಯದು. ಈಗ ಅವಕಾಶ ಬಂದಿರುವಾಗ ಇಲ್ಲದಿರುವ ಅಡ್ಡಿ ಆತಂಕಗಳನ್ನು ತಂದು ತೊಂದರೆ ಪಡಿಸುವುದರಿಂದ ಮುಂದಿನ ಜನಾಂಗಕ್ಕೆ ತೊಂದರೆಯಾಗುತ್ತದೆ. ಮುಂದಿನ ಜನಾಂಗದ ದೃಷ್ಟಿಯಿಂದ, ವಿಶಾಲ ಮನೋಭಾವನೆಯಿಂದ ನೋಡಿ, ನಾವು ಈ ಸಮಸ್ಯೆಯನ್ನು ಬಗೆಹರಿಸಬೇಕು. ಯಾವ ಭಾಷೆಯವರಿಗೂ ಕಿರುಕುಳ ಕೊಡದಹಾಗೆ ಎಷ್ಟರಮಟ್ಟಿಗೆ ನಮ್ಮ ಜೊತೆಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟೂ ಇಟ್ಟುಕೊಂಡು ಹೋಗುವುದು ಒಳ್ಳೆಯದು. ಇರುವವರನ್ನು ಹೋಗಬೇಕೆಂದು ನಾವು ಹೇಳುವುದಿಲ್ಲ. ಅವರಾಗಿ ಹೋಗುತ್ತೇವೆಂದು ಹೇಳಿದರೂ ನಾವು ಬೇಡವೆಂದು ಹೇಳುವುದಿಲ್ಲ. Self-determination ಹಕ್ಕು ಪ್ರತಿಯೊಬ್ಬರಿಗೂ ಇದೆ. ಮುಖ್ಯವಾಗಿ ಯಾರೂ ಸದ್ಯದ ದೃಷ್ಟಿಯನ್ನು ಮಾತ್ರ ಇಡದೆ ದೂರಾಲೋಚನೆಯಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—The House will now rise and meet again at Twelve of the Clock tomorrow.

The House adjourned at Forty-seven Minutes past Twelve of the Clock to meet again at Twelve of the Clock on Monday, the 25th April, 1955.